RAMRAJ
ಕಾಟನ್
ಭಾರತೀಯ ಸಂಸ್ಕೃತಿ

ಸಂಪುಟ 9 • ಸಂಚಿಕೆ 4 • ಸೆಪ್ಟೆಂಬರ್ 2026 • ಬೆಲೆ ರೂ. 18/–


# ಬಿಳುಪು

ಕನ್ನಡ ಮಾಸಿಕ

ಕನ್ನಡ ಮಾಸಿಕ



## ಉದಾರಗುಣ ವಿಶೇಷಾಂಕ


PRIMA CLUB™
BY RAMRAJ
MEN'S PREMIUM FORMAL WEAR

RAMRAJ
ಕಾಟನ್
ಭಾರತೀಯ ಸಂಸ್ಕೃತಿ

ಸದಾ ಕರುಣೆ ಹಾಗೂ ಪ್ರೀತಿಯನ್ನು ತೋರಿಸಿ
ದಯಾಪೂರ್ಣ ಕೆಲಸಗಳನ್ನೇ ತಮ್ಮ ಅಸ್ಮಿತೆಯನ್ನಾಗಿ ಬದಲಾಯಿಸಿಕೊಂಡು
ಜಗತ್ತಿಗೇ ಮಾದರಿಯಾಗಿ ಬದುಕುವುದರ ಹಿರಿಮೆಯನ್ನು ವ್ಯಕ್ತಪಡಿಸುವ

# ಉದಾರಗುಣ

## ವಿಶೇಷಾಂಕ



ಎನ್ನುವ ಈ ಉಪಯುಕ್ತ ಸಂಚಿಕೆಯನ್ನು ನಿಮಗೆ ನೀಡಲು
ನಾವು ಹೆಮ್ಮೆ ಪಡುತ್ತೇವೆ.

ಬಿಳುಪು
ಸೆಪ್ಟೆಂಬರ್ 2026
03

# ಗೌರವಾನ್ವಿತರಿಗೆ...

**ನಮಸ್ಕಾರ.**

ದಾನಶೀಲ ಗುಣವುಳ್ಳವರು ಶಾಶ್ವತ ಶ್ರೀಮಂತರು. ಅವರು ಎಂದಿಗೂ ‘ಇಲ್ಲ’ ಎಂದು ಹೇಳುವುದೇ ಇಲ್ಲ. ಅವರ ಬಳಿ ಭೌತಿಕ ವಸ್ತುಗಳು ಇಲ್ಲದಿದ್ದರೂ, ದೈಹಿಕ ಶ್ರಮದ ಮೂಲಕ ಮತ್ತು ಆಲೋಚನೆಗಳ ಮೂಲಕ ಅವರು ಸಹಾಯ ಮಾಡುತ್ತಾರೆ. ನಮ್ಮ ಹಿರಿಯರು,‘ಯಾರಿಗಾದರೂ ಅಗತ್ಯವಿರುವ ಸಮಯದಲ್ಲಿ ತಕ್ಷಣ ದಾನ ಮಾಡುವುದು ಎಂಬುದು, ಎರಡು ಬಾರಿ ದಾನ ಮಾಡಿದಂತೆ’ ಎಂದು ಹೇಳಿದ್ದಾರೆ. ಸುಮ್ಮನೆ ದಾನ ಮಾಡುವುದಕ್ಕಿಂತ, ಒಬ್ಬರಿಗೆ ಅಗತ್ಯವಿದೆ ಎಂದು ತಿಳಿದು ತಕ್ಷಣ ದಾನ ಮಾಡುವುದು ದೊಡ್ಡ ಗುಣ.

ಅದು ಒಂದು ಮಧ್ಯಮ ವರ್ಗದ ಕುಟುಂಬ... ಕುಟುಂಬದ ಮುಖ್ಯಸ್ಥ ಇದ್ದಕ್ಕಿದ್ದಂತೆ ಅಪಘಾತದಲ್ಲಿ ಮರಣ ಹೊಂದಿದ. ಕಳೆದ ತಿಂಗಳವರೆಗೂ ಆ ಕುಟುಂಬಕ್ಕೆ ಬರುತ್ತಿದ್ದ ಆದಾಯ ಇದ್ದಕ್ಕಿದ್ದಂತೆ ನಿಂತು ಹೋಯಿತು. ಆದರೆ ಖರ್ಚುಗಳು ಮಾತ್ರ ಹಾಗೆಯೇ ಉಳಿದಿದ್ದವು! ಮನೆ ಬಾಡಿಗೆ, ವಿದ್ಯುತ್ ಬಿಲ್, ದಿನಸಿ ಮತ್ತು ಮಕ್ಕಳ ಶಿಕ್ಷಣ ಶುಲ್ಕ ಯಾವುದೂ ಕಡಿಮೆಯಾಗಲಿಲ್ಲ.

ಇಂತಹ ಸಮಯದಲ್ಲಿ, ಆ ಕುಟುಂಬಕ್ಕೆ ನೆರೆಹೊರೆಯವರು, ಸಂಬಂಧಿಕರು ಮತ್ತು ಸ್ನೇಹಿತರು ಸಹಾಯ ಮಾಡಿದರು. ನೆರೆಹೊರೆಯವರು ಒಂದು ಕಂಪನಿಯನ್ನು ಸಂಪರ್ಕಿಸಿ ಮೃತನ ಪತ್ನಿಗೆ ಕೆಲಸ ಕೊಡಿಸಿದರು. ಆ ಕುಟುಂಬದ ಮುಖ್ಯಸ್ಥ ಪಡೆಯುತ್ತಿದ್ದ ಸಂಬಳದ ಅರ್ಧದಷ್ಟು ಮಾತ್ರ ಇದು ಇದ್ದರೂ, ಅದು ಅವರಿಗೆ ಒಂದು ಶಾಶ್ವತ ಆದಾಯದ ಮೂಲವನ್ನು ಒದಗಿಸಿತು.

ಅವರ ಮಕ್ಕಳುಹೋಗುತ್ತಿದ್ದ ಶಾಲೆಗೆ ಹೋದ ಕುಟುಂಬದ ಸ್ನೇಹಿತರೊಬ್ಬರು,ಮಕ್ಕಳ ಸಂಪೂರ್ಣ ಶಾಲಾ ಶುಲ್ಕವನ್ನು ಕಟ್ಟಿದರು ಮತ್ತು ಅದನ್ನು ಯಾರು ಕಟ್ಟಿದರು ಎಂಬುದು ಕೂಡ ಇವರ ಕುಟುಂಬಕ್ಕೆ ತಿಳಿದಿರಲಿಲ್ಲ. ಅವರು ಬೆಳಿಗ್ಗೆ ಬಾಗಿಲು ತೆರೆದು ನೋಡುವಾಗ, ಅವರ ಮನೆಯ ಬಾಗಿಲಲ್ಲಿ ಅಗತ್ಯವಾದ ದಿನಸಿ ವಸ್ತುಗಳು ಇರುತ್ತಿದ್ದವು. ಇನ್ನೊಂದು ದಿನ ಮಕ್ಕಳಿಗಾಗಿ ತಿಂಡಿಗಳು ಇರುತ್ತಿದ್ದವು. ನಾವು ಇಂತಹವರೊಬ್ಬರ ಸಹಾಯ ತೆಗೆದುಕೊಂಡಿದ್ದೇವೆ ಎಂದು ಅವರು ಕೀಳರಿಮೆಯಿಂದ ಬಳಲದಂತೆ ಎಲ್ಲರೂ ಅವರಿಗೆ ಸಹಾಯ ಮಾಡಿದರು.

ಜಗತ್ತಿನ ಅತ್ಯಂತ ಶ್ರೀಮಂತರು ಯಾರು ಎಂದು ಕೇಳಿದರೆ, ತಮ್ಮ ಕುಟುಂಬವನ್ನು ಚೆನ್ನಾಗಿ ನೋಡಿಕೊಳ್ಳುವವರು ಎಂದೇ ನಾನು ಹೇಳುತ್ತೇನೆ. ಅವರಬಳಿ ಇರುವ ಸಂಪತ್ತಿಗಿಂತಲೂ, ಅದನ್ನು ಅಗತ್ಯವಿರುವವರೊಂದಿಗೆ ಹಂಚಿಕೊಳ್ಳುವ ಅವರ ಭಾವನೆಯೇ ಅವರನ್ನು ಶ್ರೀಮಂತರನ್ನಾಗಿ ಮಾಡುತ್ತದೆ. ಮಕ್ಕಳಲ್ಲಿ ಹಂಚಿಕೊಳ್ಳುವ ಈ ಉದಾತ್ತ ಗುಣವನ್ನು ಬೆಳೆಸುವ ಉದ್ದೇಶವನ್ನು ಹೊಂದಿರುವ ಅನೇಕ ಕಥೆಗಳುಮಹಾಭಾರತದಲ್ಲಿವೆ. ಅವುಗಳಲ್ಲಿ ಒಂದು ಕಥೆ ಇದು. ಅರ್ಜುನನಿಗೆ,‘ದಾನ ನೀಡುವುದರಲ್ಲಿ ಯಾರು ಶ್ರೇಷ್ಠರು? ಧರ್ಮರಾಜನೋ ಅಥವಾ ಕರ್ಣನೋ?’ ಎಂಬ ಸಂದೇಹವಿತ್ತು. ‘ನನ್ನ ಸಹೋದರ ಧರ್ಮರಾಜ ಎಲ್ಲರಿಗೂ ಹೇರಳವಾಗಿ ದಾನ ನೀಡುತ್ತಾನೆ. ಅದಕ್ಕಾಗಿಯೇ ತಾನೇ ಅವನನ್ನು ಧರ್ಮರಾಜ ಎಂದು ಕರೆಯುವುದು! ದುರ್ಯೋಧನನು ನೀಡಿದ ಸಂಪತ್ತನ್ನು ಹಂಚಿಕೊಳ್ಳುವ ಕರ್ಣ, ಧರ್ಮರಾಜನಿಗಿಂತಲೂ ದೊಡ್ಡ ದಾನಿಯಾಗಲು ಹೇಗೆ ಸಾಧ್ಯ?’

ಅರ್ಜುನನಿಗೆ ಇದು ಅರ್ಥವಾಗಲಿಲ್ಲ. ಕೃಷ್ಣ ಅದನ್ನು ಸರಳವಾಗಿ ತೋರಿಸಿಕೊಟ್ಟ...


ಅದು ಭಾರೀ ಮಳೆಗಾಲ. ಕೃಷ್ಣ, ಧರ್ಮರಾಯನ ಬಳಿಗೆ ಹೋಗಿ, "ಧರ್ಮರಾಜ, ನಮ್ಮ ಅರಮನೆಯಲ್ಲಿ ಅಡುಗೆ ಮಾಡಲು ಬೇಕಾದ ಎಲ್ಲವೂ ಇದೆ. ಆದರೆ ಉರುವಲು ಮಳೆಯಲ್ಲಿ ನೆನೆದಿದೆ.ಆದ್ದರಿಂದ ನಾವು ಹಸಿವಿನಿಂದ ಬಳಲುತ್ತಿದ್ದೇವೆ. ನೀವು ನಮಗೆ ಉರುವಲು ವ್ಯವಸ್ಥೆ ಮಾಡಿ ಕೊಡಲು ಸಾಧ್ಯವೇ?" ಎಂದು ಕೇಳಿದ.

ಧರ್ಮರಾಜ ಹೇಳಿದ: ‘ಕೃಷ್ಣಾ, ನಮ್ಮ ಅರಮನೆಯಲ್ಲೂ ಹೆಚ್ಚಿನ ಉರುವಲುಗಳು ಒದ್ದೆಯಾಗಿ ಹೋಗಿವೆ. ಇಲ್ಲಿನ ಜನರಿಗೆ ಅಡುಗೆ ಮಾಡಲು ಸಾಕಾಗುವಷ್ಟು ಮಾತ್ರ ಉರುವಲು ಇದೆ. ಈ ಮಳೆಗಾಲ ಮುಗಿಯುವವರೆಗೆ ನೀನು ನಮ್ಮೊಂದಿಗೇ ಬಂದು ಅರಮನೆಯಲ್ಲಿ ಊಟ ಮಾಡು" ಎಂದು ಹೇಳಿದ. ಧರ್ಮರಾಜನು, ಕೃಷ್ಣನನ್ನು ತಮ್ಮ ಅರಮನೆಯಲ್ಲಿ ಊಟಕ್ಕೆ ಆಹ್ವಾನಿಸುವ ಮೂಲಕ ತನ್ನ ಔದಾರ್ಯವನ್ನು ಸಾಬೀತುಪಡಿಸಿದ್ದಕ್ಕಾಗಿ ಅರ್ಜುನನಿಗೆ ಅಪಾರ ಸಂತೋಷಮತ್ತು ಹೆಮ್ಮೆಯೆನಿಸಿತು.

ಕೃಷ್ಣ, ಕರ್ಣನನ್ನು ಭೇಟಿಯಾಗಲು ವೇಷ ಮರೆಸಿಕೊಂಡು ಹೋಗಿ, ಅಡುಗೆ ಮಾಡಲು ಸಾಕಷ್ಟು ಉರುವಲು ಇಲ್ಲದ ಕಥೆಯನ್ನು ಅವನಿಗೂ ಹೇಳಿದ. ಕರ್ಣನ ಬಳಿ ಕೂಡ ದಾನ ಮಾಡಲು ಸಾಕಷ್ಟು ಉರುವಲು ಇರಲಿಲ್ಲ. ಆದರೂ ಕರ್ಣ ಏನೂ ಯೋಚಿಸಲಿಲ್ಲ. ತನ್ನ ಅರಮನೆಯ ಬಾಗಿಲು, ಕಿಟಕಿ, ತೊಲೆಕಂಬ ಇತ್ಯಾದಿಗಳನ್ನೆಲ್ಲ ಕೆಡವಿ, ಆ ಮರವನ್ನೆಲ್ಲ ಕೊಟ್ಟು ಬಿಟ್ಟ! ‘ನಿಮ್ಮ ಹಸಿವನ್ನು ನೀಗಿಸದ ಬಾಗಿಲುಗಳು ಮತ್ತು ಕಿಟಕಿಗಳಿದ್ದು ಏನು ಪ್ರಯೋಜನ?’ ಎಂದು ಹೇಳಿದ ಕರ್ಣನನ್ನು ನೋಡಿ ಕೃಷ್ಣ ಭಾವುಕನಾದ.



ಸಹಾಯ ಕೇಳಿದವರು ಯಾರು ಎಂದು ಕೂಡ ತಿಳಿಯದೆ ಬಾಗಿಲು ಕಿಟಕಿಗಳನ್ನು ಒಡೆದು ನೀಡಿದ ಕರ್ಣ! ಉರುವಲು ಕೇಳಿದ್ದು ಕೃಷ್ಣ ಎಂದು ತಿಳಿದಿದ್ದರೂ




"ಅರಮನೆಗೆ ಬಂದು ಊಟ ಮಾಡಿಕೊಂಡು ಹೋಗು" ಎಂದು ಹೇಳಿದ ಧರ್ಮನಿಗಿಂತ ಉದಾರ ಗುಣವುಳ್ಳವನು ಎಂಬುದನ್ನು ಕೃಷ್ಣ ಅರ್ಜುನನಿಗೆ ಅರ್ಥ ಮಾಡಿಸಿದ.

ಈ ಪೌರಾಣಿಕ ಕಥೆಯು,'ನಮ್ಮ ಬಳಿ ಇರುವ ಸಂಪತ್ತಿಗಿಂತಲೂ, ದಾನ ಮಾಡಬೇಕು ಎನ್ನುವ ಭಾವವೇ ದೊಡ್ಡದಾದುದು' ಎಂಬುದನ್ನು ಸ್ಪಷ್ಟವಾಗಿ ವಿವರಿಸುತ್ತದೆ. ಉದಾರ ವ್ಯಕ್ತಿಗಳು ನೀಡಲು ತಮ್ಮ ಬಳಿ ಏನೂ ಇಲ್ಲದಿದ್ದರೂ ಸಹ ತಮ್ಮನ್ನೇ ತಾವು ದಾನ ಮಾಡಿಕೊಳ್ಳುತ್ತಾರೆ.

ಅಂಗಾಂಗ ದಾನ ಮಾಡುವವರನ್ನು ದೇವರಿಗೆ ಸಮಾನವೆಂದು ಪರಿಗಣಿಸಲಾಗುತ್ತದೆ. ಅಪಘಾತಗಳು ಅಥವಾ ಆರೋಗ್ಯ ಸಮಸ್ಯೆಗಳಿಗಾಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವ ಕೆಲವರಿಗೆ ಮೆದುಳು ನಿಷ್ಕ್ರಿಯವಾಗುತ್ತದೆ. ಅಪಘಾತಗಳಿಗೆ ಬಲಿಯಾಗುವವರಲ್ಲಿ ಹೆಚ್ಚಿನವರು ಯುವಕರು. ಆ ವಯಸ್ಸಿನಲ್ಲಿ ಅವರು ಸಾವಿನ ಹೊಸ್ತಿಲನ್ನು ಸಮೀಪಿಸುತ್ತಿದ್ದಾರೆ ಎನ್ನುವ ವಿಷಯವೇ ಅವರ ಕುಟುಂಬಕ್ಕೆ ಆಘಾತಕಾರಿಯಾಗಿರುತ್ತದೆ. ಈ ನಷ್ಟವನ್ನು ಅವರಿಂದ ಸಹಿಸಿಕೊಳ್ಳಲಾಗುವುದೇ ಇಲ್ಲ. ಇಂತಹ ದುರಂತ ಪರಿಸ್ಥಿತಿಯಲ್ಲಿಯೂ ಸಹ, ಕೆಲವು ಕುಟುಂಬಗಳು ಇತರರ ನೋವನ್ನು ಸ್ಪಷ್ಟವಾಗಿ ಯೋಚಿಸಿ ನೋಡುತ್ತಾರೆ. ಅಂತಹ ಸಮಯದಲ್ಲಿಯೂ ಕೂಡ ಅವರು ನಿರ್ಣಾಯಕ ನಿರ್ಧಾರ ತೆಗೆದುಕೊಳ್ಳುತ್ತಾರೆ ಮತ್ತು ಅಪಘಾತಕ್ಕೊಳಗಾದ ವ್ಯಕ್ತಿಯ ಅಂಗಗಳನ್ನು ದಾನ ಮಾಡಲು ನಿರ್ಧರಿಸುತ್ತಾರೆ.

ಮೆದುಳು ನಿಷ್ಕ್ರಿಯಗೊಂಡ ವ್ಯಕ್ತಿಯ ಅಂಗಾಂಗ ದಾನವು ಗರಿಷ್ಠ ಎಂಟು ಜೀವಗಳನ್ನು ಉಳಿಸಬಲ್ಲದು. ಅನೇಕ ಜನರು ಅಂಗಾಂಗ ದಾನಕ್ಕಾಗಿ ಕಾಯುತ್ತಿರುತ್ತಾ-ರೆ. ಏಕೆಂದರೆ ಜೀವ ಉಳಿಸುವ ಅಂಗಗಳಾದ ಅವರ ಯಕೃತ್ತು ಮತ್ತು ಮೂತ್ರಪಿಂಡಗಳು ಹಾಳಾಗಿ ನಿಧಾನವಾಗಿ ವಿಫಲಗೊಳ್ಳುತ್ತಿರುತ್ತವೆ. ಸರಿಯಾದ ಸಮಯದಲ್ಲಿ ಸೂಕ್ತವಾದ ಅಂಗಗಳು ಲಭ್ಯವಿಲ್ಲದಿದ್ದರೆ ಅವರ ಜೀವಕ್ಕೆ ಅಪಾಯವಿರುತ್ತದೆ. ಅಂತಹ ಜನರಿಗೆ ಇವರ ಅಂಗಾಂಗ ದಾನ ಹೋಗಿ ತಲುಪುತ್ತದೆ.



The Culturepreneur

ಮೆದುಳು ನಿಷ್ಕ್ರಿಯಗೊಂಡ ವ್ಯಕ್ತಿಯ ಕುಟುಂಬದವರು ತಮ್ಮ ಪ್ರೀತಿಪಾತ್ರರ ಅಂಗಗಳನ್ನು ಎಲ್ಲೋ ತಮ್ಮ ಜೀವಕ್ಕಾಗಿ ಹೋರಾಡುತ್ತಿರುವ ಬೇರೊಬ್ಬರಿಗೆ ದಾನ ಮಾಡಲು ನಿರ್ಧರಿಸುತ್ತಾರೆ. ರಕ್ತಸಂಬಂಧಿ ಅಥವಾ ಹಿಂದೆ ಪರಿಚಯಸ್ಥರಲ್ಲದ ವ್ಯಕ್ತಿಯ ಜೀವವನ್ನು ಉಳಿಸಲು ನೀಡುವ ಈ ದಾನವು ಎಷ್ಟು ಉದಾತ್ತವಾದುದು ಎಂದು ಯೋಚಿಸಿ ನೋಡಿ!

ನಾವು ನೀಡುವ ಸಹಾಯ ಚಿಕ್ಕದಾಗಿರಲಿ ಅಥವಾ ದೊಡ್ಡದಾಗಿರಲಿ, ಅಗತ್ಯವಿರುವವರಿಗೆ ಅದನ್ನು ನೀಡುವುದು ಮುಖ್ಯ ಎಂಬ ಅರಿವಿನೊಂದಿಗೆ ವರ್ತಿಸೋಣ. ಒಳ್ಳೆಯ ಉದ್ದೇಶದಿಂದ ನೀಡಿದ ದಾನವು ಇತರರನ್ನೂ ದಯಾಳುಗಳನ್ನಾಗಿ ಮಾಡುವ ಶಕ್ತಿಯನ್ನು ಹೊಂದಿರುತ್ತದೆ. 'ನಮಗೆ ಯಾರೂ ಇಲ್ಲ' ಎಂಬ ಹಪಹಪಿಕೆ ಮತ್ತು ಅಸಹಾಯಕತೆಯ ಭಾವನೆಯು ಮನುಷ್ಯರನ್ನು ಬಾಧಿಸುವ ದೊಡ್ಡ ರೋಗ. ಅಪರಿಚಿತರು ನೀಡುವ ಸಹಾಯವೇ ಆ ರೋಗಕ್ಕೆ ಇರುವ ಚಿಕಿತ್ಸೆ. ಈ ಪ್ರೀತಿಯ ಸರಪಳಿಯಿಂದ ನಮ್ಮ ಜಗತ್ತನ್ನು ಜೋಡಿಸೋಣ.

ದಾನ ಮಾಡುವುದರಿಂದ ದೊರಕುವ ಆನಂದವು ಅನುಪಮವಾದುದು. ಅಗತ್ಯವಿರುವವರಿಗೆ ದಾನ ನೀಡಿ... ಆಗ ಈ ಆನಂದ ಎಂತಹುದೆಂಬುದು ನಿಮಗೂ ಅರ್ಥವಾಗುತ್ತದೆ.

**ಗುರುವಿನ ಕೃಪೆ.**
**ಬಾಳ್ಗೆ ಭೂಮಂಡಲ –ಬಾಳ್ಗೆ ಸಮೃದ್ಧಿಯೊಂದಿಗೆ**

**ಕೆ.ಆರ್. ನಾಗರಾಜನ್**

**ಸಂಸ್ಥಾಪಕರು – ರಾಮ್‌ರಾಜ್ ಕಾಟನ್.**



# ಕೊಡುವುದರಿಂದ ಫಲ ಸಿಗುತ್ತದೆ!

ಒಂದು ಶಾಲೆಯಿಂದ ತುಂಬ ಜನ ವಿದ್ಯಾರ್ಥಿಗಳು ರಾಷ್ಟ್ರೀಯ ಕಲ್ಯಾಣ ಕಾರ್ಯಕ್ರಮದ ಅಂಗವಾಗಿ ಸಮಾಜ ಸೇವೆ ಮಾಡುವ ಉದ್ದೇಶದಿಂದ ಒಂದು ಹಳ್ಳಿಗೆ ಬಂದಿದ್ದರು. ಅವರಲ್ಲಿ ಮೂವರು ವಿದ್ಯಾರ್ಥಿಗಳು ಗ್ರಾಮದ ಹೊರವಲಯಕ್ಕೆ ಬಂದರು. ಅವರು ಅಲ್ಲಿದ್ದ ಹಸಿರು ಹೊಲಗಳ ಉದ್ದಕ್ಕೂ ನಡೆದುಕೊಂಡು ಹೋಗಿ ಅವುಗಳ ಸೌಂದರ್ಯವನ್ನು ಆನಂದಿಸಿದರು.

ಸುತ್ತಲೂ ಯಾರೂ ಇರಲಿಲ್ಲ.ಆದರೆ ಅಲ್ಲಿ ಒಬ್ಬ ರೈತ ಮಾತ್ರ ಒಂಟಿಯಾಗಿ ಹೊಲದಲ್ಲಿ ಕೆಲಸ ಮಾಡುತ್ತಿದ್ದ. ಭತ್ತದ ಗದ್ದೆಗಳನ್ನು ನಾಟಿ ಮಾಡಿದ ನಂತರ, ಮಣ್ಣಿನಲ್ಲಿ ಇಳಿದು ಸಾಲುಗಳನ್ನು ಸರಿಪಡಿಸುತ್ತಿದ್ದ. ಈ ಕೆಲಸ ಮಾಡುವಾಗ ಅವನ ಇಡೀ ದೇಹಕ್ಕೆ ಕೆಸರು ಮೆತ್ತಿಕೊಳ್ಳುತ್ತಿದ್ದುದರಿಂದ ಅವನು ತನ್ನ ಅಂಗಿ ಮತ್ತು ಪಂಚೆಯನ್ನು ಬಿಚ್ಚಿ ಬದುವಿನ ಮೇಲಿಟ್ಟು, ಕೇವಲ ಲಂಗೋಟಿ ಧರಿಸಿ, ಉತ್ಸಾಹದಿಂದ ಕೆಲಸ ಮಾಡುತ್ತಿದ್ದ.

ಅದನ್ನು ನೋಡಿ ಈ ಹುಡುಗರು ನಕ್ಕರು. "ನಾವು ರಹಸ್ಯವಾಗಿ ಹೋಗಿ ಆತನ ಬಟ್ಟೆಗಳನ್ನು ಮತ್ತು ಚಪ್ಪಲಿಯನ್ನು ತೆಗೆದು ಅವನಿಗೆ ತಿಳಿಯುದಂತೆ ಬಚ್ಚಿಡೋಣ! ನಂತರ ನಾವು ಕೂಡ ಮರಗಳ ಹಿಂದೆ ಅಡಗಿಕೊಂಡು ಅವನು ಏನು ಮಾಡುತ್ತಾನೆಂದು ತಮಾಷೆ ನೋಡೋಣ" ಎಂದು ಒಬ್ಬ ಹುಡುಗ ಪಿಸುಮಾತಿನಲ್ಲಿ ಹೇಳಿದ. ಇನ್ನೊಬ್ಬ ಹುಡುಗ ತಕ್ಷಣ "ಒಳ್ಳೆಯ ಐಡಿಯಾ" ಎಂದು ಹೇಳಿ ಅವನ ಬಟ್ಟೆಗಳನ್ನು ಕದಿಯಲು ಸಿದ್ಧನಾದ.

ಮೂರನೆಯ ಹುಡುಗನಿಗೆ ಹಾಗೆ ಮಾಡಲು ಇಷ್ಟವಿರಲಿಲ್ಲ. ಅವನು ಉಳಿದಿಬ್ಬರನ್ನು ತಡೆದು ನಿಲ್ಲಿಸಿದ. 'ಆ ವ್ಯಕ್ತಿಯನ್ನು ನೋಡಿದರೆ ಅಯ್ಯೋ ಪಾಪ ಎನ್ನಿಸುತ್ತದೆ. ಆತ ಬಿಚ್ಚಿಟ್ಟಿರುವ ಬಟ್ಟೆಗಳನ್ನು ನೋಡಿ. ಎಲ್ಲವೂ ಸವೆದುಹೋಗಿದೆ. ಅವನ ಚಪ್ಪಲಿಗಳು ಬಹುತೇಕ ಹರಿದುಹೋಗಿವೆ. ಆತನನ್ನು ಅಳುವಂತೆ ಮಾಡಿ ತಮಾಷೆ ನೋಡುವುದು ಒಳ್ಳೆಯದಲ್ಲ. ನಮಗೆ ಯಾವುದಾದರೂ ವ್ಯತ್ಯಾಸವಾದ ಬೇರೆ ಅನುಭವ ಬೇಕು! ಅಷ್ಟೇ ತಾನೇ! ಅದಕ್ಕಾಗಿ ನಾವು ಹೀಗೆ ಮಾಡೋಣ. ಬೇಕಾದರೆ ಮನೆಯಲ್ಲಿ ನಮಗೆ ನೀಡಿರುವ ಪಾಕೆಟ್ ಮನಿಯನ್ನು ತೆಗೆದುಕೊಂಡು ಅದನ್ನು ಅವನ ಅಂಗಿಯ ಕೆಳಗೆ ಮತ್ತು ಅವನ ಧೋತಿಯ ಕೆಳಗೆ ಬಚ್ಚಿಡೋಣ. ಅವನು ಅದನ್ನು ಹೇಗೆ ತೆಗೆದುಕೊಳ್ಳುತ್ತಾನೆಂದು ನೋಡೋಣ.

ಅಲ್ಲವೇ? ನೋಡಲು ಖುಷಿಯಾಗುತ್ತದೆ" ಎಂದು ಹೇಳಿದ.

ಅವರೂ ಇವನ ಮಾತುಗಳನ್ನು ಒಪ್ಪಿಕೊಂಡರು. ಆದ್ದರಿಂದ ಅವರು ರಹಸ್ಯವಾಗಿ ಹಣವನ್ನು ತೆಗೆದುಕೊಂಡು ಹೋಗಿ ಅವನ ಬಟ್ಟೆಗಳ ಕೆಳಗೆ ಇಟ್ಟು, ಮರಗಳ ಹಿಂದೆ ಅಡಗಿ ನಿಂತುಕೊಂಡರು. ಸ್ವಲ್ಪ ಸಮಯದ ನಂತರ, ರೈತ ತನ್ನ ಕೆಲಸ ಮುಗಿಸಿ ಕೈಕಾಲುಗಳನ್ನು ನೀರಿನಲ್ಲಿ ತೊಳೆದುಕೊಂಡು ಹಿಂತಿರುಗಿದ. ಅವನು ತನ್ನ ಪಂಚೆಯನ್ನು ಹಾಕಿಕೊಳ್ಳಲು ಅದನ್ನು ಮೇಲೆ ತೆಗೆದಾಗ, ಅದರ ಕೆಳಗೆ 100 ರೂಪಾಯಿ ನೋಟು ಇರುವುದನ್ನು ನೋಡಿ ಆಘಾತಕ್ಕೊಳಗಾದ. ಅದು ಯಾರದ್ದಾಗಿರಬಹುದೆಂದು ತಿಳಿಯಲು ಅವನು ಸುತ್ತಲೂ ನೋಡಿದ. ಅವನು ಅದನ್ನು ತನ್ನ ಕೈಯಲ್ಲಿ ಹಿಡಿದುಕೊಂಡು, ನಂಬಲು ಸಾಧ್ಯವಿಲ್ಲದಂತೆ ಅದನ್ನೇ ದಿಟ್ಟಿಸುತ್ತಿದ್ದ. ಅವನು ಗೊಂದಲದಿಂದ ತನ್ನ ಪಂಚೆಯನ್ನು ಧರಿಸಿಕೊಂಡು ತನ್ನ ಅಂಗಿಯನ್ನು ಹೊರತೆಗೆದಾಗ, ಅದರ ಕೆಳಗೆ ಮತ್ತೆ ಎರಡು 100 ರೂಪಾಯಿ ನೋಟುಗಳು ಇರುವುದನ್ನು ನೋಡಿದಾಗ ಅವನು ಇನ್ನಷ್ಟು ಆತಂಕಕ್ಕೊಳಗಾದ!

ಅವನು ಅತ್ತಿತ್ತ ನಡೆದಾಡಿದ. ಹಣವನ್ನು ತೆಗೆದುಕೊಳ್ಳಬೇಕೋ ಬೇಡವೋ ಎಂದು ಬಹಳ ಹೊತ್ತು ಯೋಚಿಸಿದ. ಕಡೆಗೆ, 'ಯಾರೂ ಇಲ್ಲದ ಸ್ಥಳದಲ್ಲಿ ಹಣವನ್ನು ಇಟ್ಟಿರುವುದು ದೇವರ ಕೆಲಸವೇ ಆಗಿರಬೇಕು' ಎಂಬ ತೀರ್ಮಾನಕ್ಕೆ ಬಂದ. ಅವನು ಮಂಡಿಯೂರಿ ಆಕಾಶವನ್ನು ನೋಡಿ ದೇವರನ್ನು ಪ್ರಾರ್ಥಿಸಿದ. "ದೇವರೇ, ನನ್ನ ಅನಾರೋಗ್ಯ ಪೀಡಿತ ಹೆಂಡತಿಯನ್ನು ಆಸ್ಪತ್ರೆಗೆ ಕರೆದೊಯ್ಯಲು ನಾನು ಹಣವಿಲ್ಲದೆ ಕಷ್ಟಪಡುತ್ತಿದ್ದೆ. ನನ್ನ ಅಗತ್ಯವನ್ನು ನೀನು ಅರ್ಥಮಾಡಿಕೊಂಡಿದ್ದೀಯ



ಮತ್ತು ಯಾರ ಮೂಲಕವೋ ನನಗೆ ಹಣ ಸಿಗುವಂತೆ ಮಾಡಿದ್ದೀಯಾ! ನಿನ್ನ ಕರುಣೆ ಅದ್ಭುತವಾದುದು" ಎಂದು ಅವನು ಕಣ್ಣೀರಿನಿಂದ ದೇವರಿಗೆ ಧನ್ಯವಾದ ತಿಳಿಸಿ, ಎದ್ದು ಮನೆಗೆ ಹೋದ.

ಇದನ್ನು ನೋಡಿದ ಆ ಹುಡುಗರು ಕೂಡ ಕಣ್ಣೀರು ಹಾಕಿದರು. ಅವರು ಇಲ್ಲಿಗೆ ಆಟ ಆಡಲು ಮತ್ತು ಮೋಜು ಮಾಡಲು ಬಂದಿದ್ದರು. ಆದರೆ ಈಗ ಅವರು ಹೊಸ ಮನುಷ್ಯರಾಗಿದ್ದರು. ಅವರು ಸಂತೋಷದಿಂದ, 'ನಾವು ಒಂದು ದೊಡ್ಡ ಕಾರ್ಯವನ್ನು ಮಾಡಿದ್ದೇವೆ' ಎಂದು ಹೇಳಿಕೊಂಡರು. ನಂತರ ನಗುತ್ತಾ ಮೂವರೂ ಕೈಕೈ ಹಿಡಿದು ಹಳ್ಳಿಗೆ ಮರಳಿದರು.

ನಮಗೆ ತಿಳಿದಿರುವ ಒಬ್ಬರಿಗೋ ಅಥವಾ ಅಪರಿಚಿತರಿಗೋ ದಾನ ನೀಡುವುದರಿಂದ ನಮಗೆ ಮತ್ತು ಅದನ್ನು ಸ್ವೀಕರಿಸುವವರಿಗೆ ಇಬ್ಬರಿಗೂ ಪ್ರಯೋಜನವಾಗುತ್ತದೆ. ಆ ಪ್ರಯೋಜನಗಳೇನು?

- ತೃಪ್ತಿಕರ ಜೀವನ: ದಯಾಳು ಹೃದಯ ಹೊಂದಿರುವ ಮತ್ತು ಇತರರಿಗಾಗಿ ಎಲ್ಲವನ್ನೂ ನೀಡುವ ಜನರು ಹೆಚ್ಚು ತೃಪ್ತಿ ಮತ್ತು ಸಂತೋಷದಿಂದ ಜೀವನವನ್ನು ನಡೆಸುತ್ತಾರೆ. ಅವರು ತಮ್ಮ ಕೆಲಸ ಮತ್ತು ಭೌತಿಕ ವಸ್ತುಗಳನ್ನು ಇತರರಿಗೆ ನೀಡುವ ಮೂಲಕ ಸಹಾಯ ಮಾಡಿ ಆನಂದಿಸುತ್ತಾರೆ ಮತ್ತು ದೀರ್ಘಕಾಲ ಆರೋಗ್ಯಕರ ಜೀವನವನ್ನು ನಡೆಸುತ್ತಾರೆ ಎಂದು ವೈದ್ಯಕೀಯ ಅಧ್ಯಯನಗಳು ಸಾಬೀತುಪಡಿಸಿವೆ.
- ಉದಾರ ಹೃದಯ ಹೊಂದಿರುವ ಜನರು ಆತ್ಮವಿಶ್ವಾಸವನ್ನು ಹೊಂದಿರುತ್ತಾರೆ. ದಯೆ ಮತ್ತು ವಿನಯ ಅವರನ್ನು ಹರ್ಷಚಿತ್ತದಿಂದ ಇಡುತ್ತದೆ. ಈ ಉದಾರ ಹೃದಯದಿಂದ ಅವರು ಪಡೆಯುವ ತೃಪ್ತಿಯು ಅವರಲ್ಲಿ ಹೆಚ್ಚು ಸಿರೊಟೋನಿನ್ ಮತ್ತು ಡೋಪಮೈನ್ ಹಾರ್ಮೋನುಗಳು ಸ್ರವಿಸಲು ಕಾರಣವಾಗುತ್ತದೆ. ಇದು ಅವರನ್ನು ಹೆಚ್ಚು ದಕ್ಷ ಮತ್ತು ಕ್ರಿಯಾಶೀಲರನ್ನಾಗಿ ಮಾಡುತ್ತದೆ.
- ದಾನ ಮಾಡುವುದರಿಂದ ಸಿಗುವ ತೃಪ್ತಿಯು ಅವರ ರಕ್ತದೊತ್ತಡವನ್ನು ಕಡಿಮೆ ಮಾಡುತ್ತದೆ. ಇದು ಅವರ ಹೃದಯದ ಕಾರ್ಯವನ್ನು ಸುಧಾರಿಸುತ್ತದೆ ಮತ್ತು ಗಂಭೀರ ಹೃದಯ ಕಾಯಿಲೆಗಳ ಅಪಾಯವನ್ನು ಕಡಿಮೆ ಮಾಡುತ್ತದೆ.
- ಉದಾರ ಸ್ವಭಾವದವರಿಗೆ ಕಾರ್ಟಿಸೋಲ್ ಹಾರ್ಮೋನ್ ಸ್ರವಿಸುವಿಕೆಯು ನಿಯಂತ್ರಣದಲ್ಲಿದ್ದು, ಅವರು ಒತ್ತಡ ರಹಿತ ಮತ್ತು ಉದ್ವೇಗ ರಹಿತ ಜೀವನವನ್ನು ನಡೆಸಲು ಸಾಧ್ಯವಾಗುತ್ತದೆ. ಮಾನಸಿಕ ಆರೋಗ್ಯ ಸಮಸ್ಯೆಗಳ ಆರಂಭಿಕ ಹಂತದಲ್ಲಿರುವವರು ಸಹ ಸಾಮಾಜಿಕ ಸೇವೆ ಮತ್ತು ದಾನದಲ್ಲಿ ತಮ್ಮನ್ನು ತೊಡಗಿಸಿಕೊಂಡಾಗ ಅವರ ಮಾನಸಿಕ ಆರೋಗ್ಯವು ಸುಧಾರಿಸುತ್ತದೆ ಎಂದು ಅಧ್ಯಯನಗಳು ತೋರಿಸುತ್ತವೆ.
- ಒಬ್ಬ ವ್ಯಕ್ತಿಯು ಸಮಾಜದಲ್ಲಿ ಅನೇಕ ಜನರೊಂದಿಗೆ ಸಂವಹನ ನಡೆಸಿದಾಗ ಮತ್ತು ಅನೇಕ ಜನರಿಗೆ ಸಹಾಯ ಮಾಡಿದಾಗ, ಅವನ ಸಾಮಾಜಿಕ ಕೌಶಲ್ಯಗಳು ಸುಧಾರಿಸುತ್ತವೆ. ಇತರರೊಂದಿಗಿನ ಅವನ ಸಂಬಂಧಗಳು ಹತ್ತಿರವಾಗುತ್ತವೆ. ಅವನು ಜೀವನದಲ್ಲಿ ಹಿಡಿತ ಮತ್ತು ತೃಪ್ತಿಯ ಭಾವನೆಯನ್ನು ಅನುಭವಿಸುತ್ತಾನೆ.
- ಒಬ್ಬ ವ್ಯಕ್ತಿಯು ಕಾಳಜಿಯಿಂದ ಮಾಡುವ ದಯೆಯ ಕಾರ್ಯವು ಇನ್ನೂ ಅನೇಕರನ್ನು ಅದೇ ರೀತಿ ಮಾಡಲು ಪ್ರೇರೇಪಿಸುತ್ತದೆ. ಕೊಳಕ್ಕೆ ಎಸೆದ ಕಲ್ಲು ಅಲೆಗಳನ್ನು ಸೃಷ್ಟಿಸುವಂತೆಯೇ, ಈ ಅಲೆಗಳ ಪರಿಣಾಮವು ಅನೇಕ ಜನರಿಗೆ ಪ್ರಯೋಜನಗಳನ್ನು ತರುತ್ತದೆ. ಇದು ಈ ದಾನಿಗಳಿಗೆ ಸಮಾಜದಲ್ಲಿ ಉತ್ತಮ ಖ್ಯಾತಿಯನ್ನು ಕೂಡ ಗಳಿಸಿಕೊಡುತ್ತದೆ.
- ಒಂದು ಕಚೇರಿ ಅಥವಾ ಕೆಲಸದ ಸ್ಥಳದಲ್ಲಿ ಅನೇಕರು ಉದಾರ ಜನರಾಗಿದ್ದಾಗ, ತೃಪ್ತಿಕರವಾದ ಕೆಲಸದ ವಾತಾವರಣ ಸೃಷ್ಟಿಯಾಗುತ್ತದೆ ಮತ್ತು ಅಲ್ಲಿನ ಉತ್ಪಾದಕತೆ ಕೂಡ ಸುಧಾರಿಸುತ್ತದೆ. ●



# ನಿಮ್ಮಂತೆ ಮತ್ತೊಬ್ಬ!

ಲಂಡನ್ ನಗರದ ಒಂದು ಪ್ರಮುಖ ಬೀದಿಯಲ್ಲಿದ್ದ ಸೇತುವೆಯ ಬಳಿ ಕುಳಿತು, ಒಬ್ಬ ಕುರುಡ ಯುವಕ ಪಿಟೀಲು ನುಡಿಸುತ್ತಿದ್ದ. ಅವನ ಸಂಗೀತದ ಉದ್ದೇಶ ಭಿಕ್ಷೆ ಪಡೆಯುವುದು. ಆ ಜನದಟ್ಟಣೆಯ ರಸ್ತೆಯಲ್ಲಿ ಅನೇಕ ಜನರು ಹಾದುಹೋದರೂ, ಯಾರೂ ಅವನನ್ನು ಕಂಡುಕೊಳ್ಳಲಿಲ್ಲ. ಜನರು ನಾಣ್ಯಗಳನ್ನು ಹಾಕುವುದಕ್ಕಾಗಿ ಅವನ ಮುಂದೆ ಹರಡಿದ್ದ ಬಟ್ಟೆ ಖಾಲಿಯಾಗಿತ್ತು. ಅವನು ಹಸಿವು ಮತ್ತು ನಿರಾಶೆಯಿಂದ ಬಳಲುತ್ತಿದ್ದ ಮತ್ತು ಅವನು ಪಿಟೀಲು ನುಡಿಸಿ ತುಂಬಾ ದಣಿದಿದ್ದ. "ಪ್ರತಿದಿನವೂ ನನ್ನ ಪರಿಸ್ಥಿತಿ ಹೀಗೆಯೇ ಇದೆಯಲ್ಲಾ!" ಎಂದು ಅವನು ವಿಷಾದಿಸಿದ.

ಆಗ ಯಾರೋ ನಿಧಾನವಾಗಿ ನಡೆದು ಬಂದು ಅವನ ಪಕ್ಕದಲ್ಲಿ ನಿಂತಿರುವುದು ಅವನಿಗೆ ಕೇಳಿಸಿತು. "ಸರ್, ದಯವಿಟ್ಟು

# ಸಂತೋಷಕರ ಸುದ್ದಿ!

ಆ ದೇಶದ ಪ್ರಸಿದ್ಧ ಟೆನಿಸ್ ಆಟಗಾರ ಒಂದು ಪಂದ್ಯದಲ್ಲಿ ಗೆದ್ದ. ಅವನಿಗೆ ಟ್ರೋಫಿಯೊಂದಿಗೆ ದೊಡ್ಡ ಬಹುಮಾನದ ಹಣವನ್ನು ನೀಡಲಾಯಿತು. ಅವನು ಉತ್ಸಾಹದಿಂದ ಕ್ರೀಡಾಂಗಣದಿಂದ ಹೊರಬರುತ್ತಿದ್ದಂತೆ, ಅನೇಕ ಅಭಿಮಾನಿಗಳು ಅವನನ್ನು ಅಭಿನಂದಿಸಿದರು. ಕೆಲವರು ಅವನ ಬಳಿಗೆ ಬಂದು ಸೆಲ್ಫಿ ತೆಗೆದುಕೊಂಡರು. ಆ ಸಮಯದಲ್ಲಿ, ಬಡವಳಂತೆ ಕಾಣುತ್ತಿದ್ದ ಮಧ್ಯವಯಸ್ಕ ಮಹಿಳೆಯೊಬ್ಬರು ಅವನ ಬಳಿಗೆ ಬಂದು ಏನೋ ಹೇಳಲು ಪ್ರಯತ್ನಿಸಿದರು. ಕ್ರೀಡಾಂಗಣದ ಭದ್ರತಾ ಸಿಬ್ಬಂದಿ ಮತ್ತು ಪೊಲೀಸರು ಆಕೆಯನ್ನು ತಡೆದು ದೂರ ಓಡಿಸಲು ಪ್ರಯತ್ನಿಸಿದರು.

ಇದನ್ನು ಗಮನಿಸಿದ ಆಟಗಾರ ಅಭಿಮಾನಿಗಳಿಂದ ದೂರ ಸರಿದು ಆ ಮಹಿಳೆಯ ಬಳಿಗೆ ಬಂದು, "ಏನಾಯ್ತು?" ಎಂದು ಕೇಳಿದ. "ನನ್ನ ಮಗ ಕ್ಯಾನ್ಸರ್‌ನಿಂದ ಆಸ್ಪತ್ರೆಯಲ್ಲಿ ಜೀವನ್ಮರಣ ಹೋರಾಟ ನಡೆಸುತ್ತಿದ್ದಾನೆ. ಚಿಕಿತ್ಸೆಗೆ ಹಣವಿಲ್ಲದೆ ನಾನು ಕಷ್ಟಪಡುತ್ತಿದ್ದೇನೆ" ಎಂದು ಮಹಿಳೆ ಕಣ್ಣೀರಿಡುತ್ತಾ ಹೇಳಿದರು. ಆಟಗಾರ ತಕ್ಷಣ ತನ್ನಲ್ಲಿದ್ದ ಎಲ್ಲಾ ಹಣವನ್ನು ಆಕೆಗೆ ನೀಡಿ, "ಹೇಗಾದರೂ ಮಾಡಿ, ನಿಮ್ಮ ಮಗನನ್ನು ಉಳಿಸಿ" ಎಂದು ಹೇಳಿದ.

ಕೆಲವು ತಿಂಗಳುಗಳ ನಂತರ, ಆ ಆಟಗಾರ ಆ ನಗರ-ಕ್ಕೆ ಮತ್ತೆ ಮರಳಿ ಬಂದ. ಆಗ ಸ್ಥಳೀಯ ಕ್ರೀಡಾಂಗಣ ವ್ಯವಸ್ಥಾಪಕರು ಅವನನ್ನು ಭೇಟಿಯಾಗಿ, "ಸರ್, ನಿಮಗೆ ಒಂದು ಆಘಾತಕಾರಿ ಸುದ್ದಿ ಇದೆ. ಕಳೆದ ಬಾರಿ ಒಬ್ಬ ಮಹಿಳೆ ನಿಮ್ಮಿಂದ ಹಣ ಪಡೆದು ನಿಮ್ಮನ್ನು ಮೋಸ ಮಾಡಿದ್ದಾಳೆ.



ಅವಳ ಮಗನಿಗೆ ಯಾವುದೇ ಅಪಾಯಕಾರಿ ಕಾಯಿಲೆ ಇಲ್ಲ ಮತ್ತು ಹುಡುಗ ಜೀವನ್ಮರಣ ಹೋರಾಟ ನಡೆಸುತ್ತಿಲ್ಲ" ಎಂದು ಅವರು ಹೇಳಿದರು.

ಆಟಗಾರ ತಕ್ಷಣವೇ ಉತ್ಸಾಹದಿಂದ ನಿರ್ವಾಹಕರನ್ನು ತಬ್ಬಿಕೊಂಡ. "ವಾವ್... ಎಂತಹ ಸಂತೋಷದ ಸುದ್ದಿಯನ್ನು ನೀವು ನೀಡಿದ್ದೀರಿ. ನಾನು ಪ್ರತಿದಿನ ಆ ಹುಡುಗನ ಬಗ್ಗೆ ಚಿಂತೆ ಮಾಡುತ್ತಿದ್ದೆ. ನಾನು ಅವನಿಗಾಗಿ ದೇವರನ್ನು ಪ್ರಾರ್ಥಿಸುತ್ತಿದ್ದೆ. ನನ್ನ ಹಣ ಹೋದರೆ, ಅದು ಹೋಗುತ್ತದೆ. ಅದೃಷ್ಟವಶಾತ್, ಅವನಿಗೆ ಏನೂ ಆಗಲಿಲ್ಲವಲ್ಲ" ಎಂದು ಅವನು ಹೇಳಿದ. ಸಂತೋಷದಿಂದ ಕೊಡುವವರ ಮನಸ್ಸು ಸದಾ ಈ ರೀತಿ ಯೋಚಿಸುತ್ತದೆ.

ಏನಾದರೂ ದಾನ ಮಾಡಿ" ಎಂದು ಇವನು ಕೇಳಿದ.ಆದರೆ ಬಂದವನು ದಾನ ಮಾಡಲಿಲ್ಲ. ಬದಲಾಗಿ ಆ ಯುವಕನ ಕೈಯಿಂದ ಪಿಟೀಲು ತೆಗೆದುಕೊಂಡು ನುಡಿಸಲು ಪ್ರಾರಂಭಿಸಿದ. ಅದು ಅವನು ಹಿಂದೆಂದೂ ಕೇಳಿರದ ಒಂದು ಮೋಡಿಮಾಡುವ ಸಂಗೀತವಾಗಿತ್ತು. 'ನನ್ನ ಪಿಟೀಲಿನಿಂದ ಕೂಡ ಈ ರೀತಿಯ ಸಂಗೀತ ಹೊರಡುತ್ತದೆಯೇ?' ಎಂದು ಅವನು ಆಶ್ಚರ್ಯಪಟ್ಟ ಮತ್ತು ವಿಸ್ಮಯದಿಂದ ಸಂಗೀತವನ್ನು ಆಲಿಸಿದ.

ಅಲ್ಲಿಯವರೆಗೆ ಆತನ ಪಿಟೀಲು ವಾದನವನ್ನು ನಿರ್ಲಕ್ಷಿಸುತ್ತಿದ್ದ ಜನರು, ಈಗ ಈತನ ಸಂಗೀತಕ್ಕೆ ಆಕರ್ಷಿತರಾಗಿ ಹತ್ತಿರ ಬಂದು ನಿಂತು ಕೇಳಿಸಿಕೊಂಡರು. ಆ ಕಲಾವಿದ ಕಣ್ಣು ಮುಚ್ಚಿಕೊಂಡು ನುಡಿಸುತ್ತಲೇ ಇದ್ದ. ಜನರು ಈ ಸಂಗೀತಕ್ಕೆ ಮಾರುಹೋಗಿ ಆ ಕುರುಡ ಯುವಕನ ಮುಂದಿದ್ದ ಬಟ್ಟೆಯ ಮೇಲೆ ಬಹಳಷ್ಟು ಹಣವನ್ನು ಹಾಕಲು ಪ್ರಾರಂಭಿಸಿದರು. ತಮ್ಮ ಕೆಲಸವನ್ನು ಮರೆತು, ಜನರು ಅಲ್ಲಿ ಗುಂಪಾಗಿ ಒಟ್ಟುಗೂಡಿದರು ಮತ್ತು ಆತನ ವಾದನವನ್ನು ಆನಂದಿಸಿದರು. ಇದು ಭಾರಿ ಟ್ರಾಫಿಕ್ ಜಾಮ್‌ಗೆ ಕಾರಣವಾಯಿತು. ಜಾಮ್ ಅನ್ನು ನಿವಾರಿಸಲು ಬಂದ ಪೊಲೀಸರು ಸಹ ಪಿಟೀಲು ಸಂಗೀತಕ್ಕೆ ಮಾರುಹೋಗಿ, ಹಾದಿಯಲ್ಲೇ ನಿಂತುಬಿಟ್ಟರು.

20 ನಿಮಿಷಗಳ ನಂತರ ಅವನು ಪಿಟೀಲು ನುಡಿಸುವುದನ್ನು ನಿಲ್ಲಿಸಿದಾಗ, ಇಡೀ ಬೀದಿ ಚಪ್ಪಾಳೆಯಿಂದ ನಡುಗಿತು. ಆ ಯುವಕನ ಮುಂದೆ ಸಾಕಷ್ಟು ಹಣ ತುಂಬಿತ್ತು. ಅವನಿಗೆ ಪಿಟೀಲು ಹಿಂದಿರುಗಿಸಿ, ಹಣವನ್ನು ಸುತ್ತಿ ತೆಗೆದುಕೊಂಡು, ಅದನ್ನೂ ಸುರಕ್ಷಿತವಾಗಿ ಕೊಟ್ಟು, "ಇದು ಮುಂದಿನ ವರ್ಷದವರೆಗೆ ನಿಮ್ಮ ಹಸಿವನ್ನು ನೀಗಿಸುತ್ತದೆ" ಎಂದು ಅವನು ನಗುತ್ತಾ ಹೇಳಿದ.

"ಸರ್, ನೀವು ಯಾರು?" ಎಂದು ಯುವಕ ಕೇಳಿದ. "ನಾನು ಕೂಡ ನಿನ್ನಂತೆಯೇ ಪಿಟೀಲು ವಾದಕ" ಎಂದು ಹೇಳಿ ಅವನು ಮುಂದೆ ಸಾಗಿದ! ಅವರೇ ಇಟಲಿಯಲ್ಲಿ ಜನಿಸಿದ ವಿಶ್ವಪ್ರಸಿದ್ಧ ಪಿಟೀಲು ವಾದಕ ನಿಕೊಲೊ ಪಗಾನಿನಿ!

## ಬಿಟ್ಟು ಕೊಡದ ಸ್ನೇಹ

ಶಾಲಾ ದಿನಗಳಲ್ಲಿ ಇಬ್ಬರು ಸ್ನೇಹಿತರು ಒಂದೇ ತರಗತಿಯಲ್ಲಿ ಅಕ್ಕಪಕ್ಕದಲ್ಲಿ ಕುಳಿತುಕೊಳ್ಳುತ್ತಿದ್ದರು. ಶಾಲೆಯ ನಂತರವೂ ಅವರ ಸ್ನೇಹ ಬಲವಾಗಿತ್ತು. ವರ್ಷಗಳು ಕಳೆದಂತೆ, ಅವರು ಬೇರ್ಪಟ್ಟು ಬೇರೆ ಬೇರೆ ನಗರಗಳಿಗೆ ಹೋಗಬೇಕಾಯಿತು. ಅವರಲ್ಲಿ ಒಬ್ಬ ಕಾನೂನು ಅಧ್ಯಯನ ಮಾಡಿ ನ್ಯಾಯಾಧೀಶನಾದ. ಆ ನ್ಯಾಯಾಧೀಶರು ತಮ್ಮ ಅತ್ಯಂತ ನ್ಯಾಯಯುತ ತೀರ್ಪುಗಳಿಗೆ ಹೆಸರುವಾಸಿಯಾದರು.

ಅವನ ಸ್ನೇಹಿತ ಕೂಡ ಚೆನ್ನಾಗಿ ವಿದ್ಯಾವಂತನಾಗಿದ್ದನು ಮತ್ತು ಖಾಸಗಿ ಕಂಪನಿಯಲ್ಲಿ ಮ್ಯಾನೇಜರ್ ಹುದ್ದೆಗೆ ಏರಿದನು ಮತ್ತು ಜೀವನದಲ್ಲಿ ಪ್ರಗತಿ ಸಾಧಿಸಿದನು. ಆದರೆ ತಪ್ಪು ಜನರ ಪರಿಚಯದಿಂದಾಗಿ ಅವನು ಮದ್ಯದ ಚಟ-ಕ್ಕೆ ಬಿದ್ದನು. ಇದು ಅವನ ಕುಟುಂಬದ ಶಾಂತಿಯನ್ನು ಹಾಳುಮಾಡಿತು. ಅವನ ಹೆಂಡತಿ ಮತ್ತು ಮಕ್ಕಳು ಅವನನ್ನು ದ್ವೇಷಿಸುತ್ತಿದ್ದರು. ಅವನಿಗೆ ಕಚೇರಿಯಲ್ಲಿ ಸರಿಯಾಗಿ ಕೆಲಸ ಮಾಡಲು ಸಾಧ್ಯವಾಗಲಿಲ್ಲ ಮತ್ತು ಒಂದು ಹಂತದಲ್ಲಿ ಅವನನ್ನು ಕೆಲಸದಿಂದ ವಜಾ ಮಾಡಲಾಯಿತು. ಕುಟುಂಬವು ಮುರಿದುಹೋಯಿತು. ಹತಾಶೆಯಿಂದ, ಕೆಲಸ ಅಥವಾ ಹಣವಿಲ್ಲದೆ, ಒಂದು ದಿನ ಅವನು ಹಗಲು ಹೊತ್ತಿನಲ್ಲಿ ಕುಡಿದು ಕಾರು ಚಲಾಯಿಸಿ, ರಸ್ತೆಯ ಪಕ್ಕದಲ್ಲಿರುವ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದನು.ಅವನನ್ನು ನ್ಯಾಯಾಲಯಕ್ಕೆ ಕರೆತರಲಾಯಿತು.

ನ್ಯಾಯಾಧೀಶರು ಬೇರೆ ಯಾರೂ ಅಲ್ಲ, ಅವನ ಬಾಲ್ಯದ ಗೆಳೆಯ! ಇಬ್ಬರೂ ತಬ್ಬಿಕೊಂಡು ಸ್ವಲ್ಪ ಹೊತ್ತು ಅಳುತ್ತಿದ್ದರು. ಅವರು ಮಾತನಾಡಿದರು. ನ್ಯಾಯಾಧೀಶರು ನ್ಯಾಯಯುತ ತೀರ್ಪು ನೀಡುತ್ತಾರೆಯೇ ಅಥವಾ ತಮ್ಮ ಸ್ನೇಹಿತನ ಪರವಾಗಿ ವರ್ತಿಸುತ್ತಾರೆಯೇ ಎಂದು ಎಲ್ಲರೂ ಚರ್ಚಿಸಿದರು. ಕಾನೂನಿನ ಪ್ರಕಾರ ದಂಡ ವಿಧಿಸಿದ ನ್ಯಾಯಾಧೀಶರು, ನಂತರ ತಮ್ಮ ಸ್ಥಾನದಿಂದ ಎದ್ದು ತಾವೇ ತಮ್ಮ ಸ್ನೇಹಿತನಿಗೆ ದಂಡ ಪಾವತಿಸಲು ಹೋದರು!





# ಕೊಡುವುದೂ ಹಂಚುವುದೂ!

ಮಹಡಿ ಮನೆಯಲ್ಲಿ ವಾಸಿಸುತ್ತಿದ್ದ ಒಬ್ಬ ಶ್ರೀಮಂತ ವ್ಯಕ್ತಿಯು, ತನ್ನ ಮನೆಯ ಎದುರಿನಲ್ಲಿದ್ದ ಗುಡಿಸಲಿನಲ್ಲಿ ವಾಸಿಸುತ್ತಿದ್ದ ಒಬ್ಬ ಬಡ ಕೃಷಿ ಕಾರ್ಮಿಕನೊಂದಿಗೆ ಆಗಾಗ ಮಾತನಾಡುತ್ತಿದ್ದ. ಒಂ–ಟಿಯಾಗಿ ವಾಸಿಸುತ್ತಿದ್ದ ಆ ಯುವಕ, ಪ್ರತಿದಿನ ತಾನು ಕೆಲಸ ಮಾಡಿ ಗಳಿಸಿದ ಕೂಲಿ ಹಣ ತಂದು, ದಿನವೂ ತಾನೇ ಅಡುಗೆ ಮಾಡಿಕೊಂಡು ತಿನ್ನುತ್ತಿದ್ದ.

ಒಂದು ದಿನ ಶ್ರೀಮಂತನ ಮನೆಯಲ್ಲಿ ಎಲ್ಲರೂ ಪಟ್ಟಣಕ್ಕೆ ಹೋಗಿದ್ದರು ಮತ್ತು ಅವನು ಮನೆಯಲ್ಲಿ ಒಬ್ಬಂಟಿಯಾಗಿದ್ದ. ಎದುರಿನ ಬಡವನ ಗುಡಿಸಲಿನಿಂದ ಮಾಂಸದಸಾರಿನ ವಾಸನೆ ಬರುತ್ತಿತ್ತು. ಆ ವಾಸನೆ ಇವನನ್ನು ಆಕರ್ಷಿಸಿತು. ಅಲ್ಲದೆ ಇವನಿಗೆ ಹಸಿವಾಗಿತ್ತು. ಆದ್ದರಿಂದ ಅವನು ಎದ್ದು ಬಡವನ ಗುಡಿಸಲಿಗೆ ಹೋದ.

ಆ ಬಡವನು ಇವನನ್ನು ಪ್ರೀತಿಯಿಂದ ಸ್ವಾಗತಿಸಿದ. ಆ ಬಡವನ ಗುಡಿಸಲು ಅವನಿಗೆ ಇಷ್ಟವಾಗದಿದ್ದರೂ, ಆಹಾರದ ವಾಸನೆಯು ಅವನನ್ನು ಒಳಗೆ ಹೋಗುವಂತೆ ಮಾಡಿತು. "ನೀನು ಏನು ಅಡುಗೆ ಮಾಡುತ್ತಿದ್ದೀಯಾ? ತುಂಬಾ ಒಳ್ಳೆಯ ವಾಸನೆ ಬರುತ್ತಿದೆ!" ಎಂದು ಇವನು ಕೇಳಿದ.

"ನಾನು ಕಾಡು ಕೋಳಿ ಮಾಂಸ ಬೇಯಿಸುತ್ತಿದ್ದೇನೆ. ಅರಿಶಿನ, ಏಲಕ್ಕಿ, ಲವಂಗ, ಮೆಣಸು, ಶುಂಠಿ ಮತ್ತು ಬೆಳ್ಳುಳ್ಳಿ ಮಿಶ್ರಣದಿಂದ ಬೇಯಿಸಿದ ಸಾರುತುಂಬಾ ರುಚಿಕರವಾಗಿದೆ. ನೀವೂ ಇದನ್ನು ರುಚಿ ನೋಡಿ" ಎಂದು ಅವನು ಹೇಳಿ, ಎಲೆ ಹಾಕಿ ಅನ್ನ ಬಡಿಸಿ ಅದರ ಮೇಲೆ ಸಾರು ಹಾಕಿದ. ಶ್ರೀಮಂತ ವ್ಯಕ್ತಿ ಅದನ್ನು ಉತ್ಸಾಹದಿಂದ ತಿನ್ನುತ್ತಾ, "ಇದು ಅದ್ಭುತ ರುಚಿಯಾಗಿದೆ" ಎಂದು ಹೊಗಳಿದ.

ಅವನು ಊಟ ಮಾಡಿ ಕೈ ತೊಳೆದು ಹೊರಗೆ ಬಂದಾಗ, ಬಡವನ ಬಾಗಿಲಲ್ಲಿ ಒಂದು ಬೀದಿ ನಾಯಿ ಮಲಗಿತ್ತು. ಶ್ರೀಮಂತ ಅದನ್ನು ಗದರಿಸಿ ಓಡಿಸಿದನು. "ನಾನು ದಿನವೂ ಈ ಶನಿ ನಾಯಿಗೆ ತಂಗಳನ್ನು ಹಾಕುತ್ತೇನೆ. ಇದು ಇಲ್ಲಿಗೂ ಬರುತ್ತದೆಯೇ?" ಎಂದು ಅವನು ಗೊಣಗಿದ. "ಸರ್, ನೀವು ಈಗ ಕಾಡು ಕೋಳಿಯ ಮಾಂಸವನ್ನು ತಿಂದಿರಲ್ಲಾ... ನಾನು ಬೆಳಿಗ್ಗೆ ಪಕ್ಕದ ಕಾಡಿಗೆ ಹೋದಾಗ, ಅದನ್ನು ಈ ನಾಯಿಯೇ ಬೇಟೆಯಾಡಿ ಕಚ್ಚಿ ತೆಗೆದುಕೊಂಡು ಬಂದು ನನಗೆ ಕೊಟ್ಟಿದ್ದು" ಎಂದು ಆ ಬಡ ಯುವಕ ಹೇಳಿದ. ಇದನ್ನು ಕೇಳಿದ ಶ್ರೀಮಂತ ಅಸೂಯೆಯಿಂದ ತಿರುಗಿ ನಾಯಿಯನ್ನು ದಿಟ್ಟಿಸಿ ನೋಡಿ, ಏನೂ ಹೇಳದೆ ಅಲ್ಲಿಂದ ಹೊರಟುಹೋದ.

ಮರುದಿನ, ಶ್ರೀಮಂತನು ಊಟ ಮಾಡಿ ಹೊರಗೆ ಬಂದಾಗ ಬೀದಿ ನಾಯಿ ಬಂದು ಅವನ ಮುಂದೆ ನಿಂತು ಆಹಾರಕ್ಕಾಗಿ ಬಾಲ ಅಲ್ಲಾಡಿಸುತ್ತಾ ನಿಂತುಕೊಂಡಿತು. "ಕೃತಜ್ಞತೆ ಇಲ್ಲದ ಹಾಳು ನಾಯಿಯೇ... ಪ್ರತಿದಿನ ನಾನು ನಮ್ಮ ಮನೆಯಲ್ಲಿ ಉಳಿದ ಆಹಾರವನ್ನು ನಿನಗೆ ಕೊಡುತ್ತೇನೆ. ಆದರೆ ಯಾವುದೇ ಕೃತಜ್ಞತೆ ಇಲ್ಲದೆ ನೀನು ಕಾಡು ಕೋಳಿಯನ್ನು ಹಿಡಿದು ಆ ಬಡವನಿಗೆ ಕೊಡುತ್ತೀಯಾ. ಹಾಗಾದರೆ ನೀನು ಇಲ್ಲಿಗೆ ಆಹಾರಕ್ಕಾಗಿ ಏಕೆ ಬರುತ್ತೀಯ?" ಎಂದು ಹೇಳಿ ಅವನು ಅದನ್ನು ಓಡಿಸಲು ಕಲ್ಲಿನಿಂದ ಹೊಡೆದ.

ಅದು ಏಟು ತಿಂದು ಕಿರುಚುತ್ತಾ ಬಡವನ ಮನೆಗೆ ಹೋಯಿತು. ಬಡವನು ನಾಯಿಯನ್ನು ಕರೆದು, "ನಿನಗೆ ತುಂಬಾ ಹಸಿವಾಗಿದೆಯೇ? ಬಾ, ಊಟ ಮಾಡೋಣ" ಎಂದು ಹೇಳಿದ. ಅವನು ಜಗಲಿಯ ಮೇಲೆ ಕುಳಿತು ಊಟ ಮಾಡುತ್ತಿರುವಾಗ, ನಾಯಿ ಕೂಡ ಹಕ್ಕಿನಿಂದ ಅವನ ಪಕ್ಕದಲ್ಲೇ ನೆಲದ ಮೇಲೆ ಕುಳಿತುಕೊಂಡಿತು. ಅವರಿಬ್ಬರೂ ರೊಟ್ಟಿಯನ್ನು ಹಂಚಿಕೊಳ್ಳುತ್ತಿರುವುದನ್ನು ಶ್ರೀಮಂತನು ನೋಡಿದ.

ಆ ಬಡ ಯುವಕ ನಾಯಿಯನ್ನು ಬೈಯಲಿಲ್ಲ,ಮುದ್ದಿಸಲೂ ಇಲ್ಲ. ಅದನ್ನು ಕೂರಿಸಿ ತನ್ನ ಆಹಾರವನ್ನು ಅದರೊಂದಿಗೆ ಹಂಚಿಕೊಂಡ, ಅಷ್ಟೇ. ಇತರರಿಗೆ ಕೊಡುವುದೆಂದರೆ ಉಳಿದದ್ದನ್ನು ನೀಡುವುದಲ್ಲ, ಬದಲಾಗಿ ಪ್ರೀತಿಯಿಂದ ಹಂಚಿಕೊಳ್ಳುವುದೆಂದು ಶ್ರೀಮಂತನಿಗೆ ಅರಿವಾಯಿತು. ಬಡವನು ನೀಡಿದ ಗೌರವ ಹಾಗೂ ಪ್ರೀತಿಗೆ ಪ್ರತಿಫಲವಾಗಿ ನಾಯಿ ಬೇಟೆಯಾಡಿ ಅವನಿಗೆ ಕೊಟ್ಟಿದೆ ಎಂದೂ ಅವನಿಗೆ ಅರ್ಥವಾಯಿತು. ●



# ಸರಪಳಿಯಾಗಿ ಮುಂದುವರೆಯುವ ದಾನ!

ಗಣೇಶ್ ಜೀವನೋಪಾಯವನ್ನು ಹುಡುಕುತ್ತಾ ಹಳ್ಳಿಯಿಂದ ತನ್ನ ಕುಟುಂಬದೊಂದಿಗೆ ನಗರಕ್ಕೆ ಬಂದಿದ್ದರು. ಅವರು ಒಂದು ಮನೆಯನ್ನು ಬಾಡಿಗೆಗೆ ಪಡೆದು, ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ಎರಡು ವರ್ಷಗಳ ನಂತರ, ಕುಟುಂಬವು ಸ್ವಲ್ಪ ಅಬಿವೃದ್ಧಿ ಹೊಂದುತ್ತಿದ್ದ ಸಮಯದಲ್ಲಿಅವರು ಕೆಲಸ ಮಾಡುತ್ತಿದ್ದ ಕಾರ್ಖಾನೆ ಮುಚ್ಚಲ್ಪಟ್ಟಿತು. ಬೇರೆ ಯಾವುದೇ ಕೆಲಸ ತಕ್ಷಣ ಲಭ್ಯವಾಗಲಿಲ್ಲ. ಇದು ಕುಟುಂಬವನ್ನು ಸಂಕಷ್ಟಕ್ಕೆ ದೂಡಿತು.

ಗಣೇಶ್ ಬಾಡಿಗೆಗೆ ಪಡೆದಿದ್ದ ಮನೆಯ ಮಾಲೀಕರು ಈ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡರು. ಗಣೇಶ್ ಮನೆಗಾಗಿ ನೀಡಿದ್ದ ಮುಂಗಡ ಹಣವನ್ನು ಅವರಿಗೆ ಹಿಂದಿರುಗಿಸಿದರು. "ಇದು ನಿಮ್ಮ ಹಣ. ಈಗ, ಕುಟುಂಬದ ಖರ್ಚುಗಳನ್ನು ಪೂರೈಸಲು ಇದನ್ನು ಇಟ್ಟುಕೊಳ್ಳಿ ಮತ್ತು ನಿಮಗೆ ಮತ್ತೆ ಕೆಲಸ ಸಿಕ್ಕಾಗ ನನಗೆ ಬಾಡಿಗೆಯನ್ನು ಪಾವತಿಸಿ. ಈ ಚಿಂತೆಗಳನ್ನು ಮರೆತು ಆತ್ಮವಿಶ್ವಾಸದಿಂದ ಕೆಲಸ ಹುಡುಕಿ, ನಿಮಗೆ ಖಂಡಿತವಾಗಿಯೂ ಒಂದು ಕೆಲಸ ಸಿಕ್ಕೇ ಸಿಗುತ್ತದೆ" ಎಂದು ಬೆಂಬಲವಾಗಿ ಹೇಳಿ ಅವರು ಹೊರಟುಹೋದರು.

ಆ ಮಾತುಗಳು ಗಣೇಶ್ ಅವರಿಗೆ ಆ ಸಮಯದಲ್ಲಿ ಸಮಾಧಾನದ ಭಾವನೆಯನ್ನು ನೀಡಿತು. ಅವರು ಶೀಘ್ರದಲ್ಲೇ ಬೇರೆ ಕೆಲಸ ಮಾಡಲು ಪ್ರಾರಂಭಿಸಿದರು, ಕ್ರಮೇಣ ವ್ಯಾಪಾರವನ್ನು ಕಲಿತರು. ಸಣ್ಣ ಕಾರ್ಖಾನೆಯೊಂದನ್ನು ಪ್ರಾರಂಭಿಸಿದರು ಮತ್ತು ವಾಹನದ ಬಿಡಿಭಾಗಗಳನ್ನು ಉತ್ಪಾದಿಸುವ ಮತ್ತು ಪೂರೈಸುವ ವ್ಯವಹಾರವನ್ನು ಪ್ರಾರಂಭಿಸಿದರು. ಕೆಲವು ವರ್ಷಗಳಲ್ಲಿ, ಅವರು ಜೀವನದಲ್ಲಿ ಉನ್ನತ ಸ್ಥಾನ ಪಡೆದರು ಮತ್ತು ಸ್ವಂತ ಮನೆಯನ್ನು ನಿರ್ಮಿಸಿ, ಅದರಲ್ಲಿ ನೆಲೆಸಿದರು.

ಗಣೇಶ್ ಈಗ ತಮ್ಮ ಮನೆ ಇರುವ ಪ್ರದೇಶದಲ್ಲಿ ಒಂದು ಹಾಸ್ಟೆಲ್ ಕೂಡ ನಡೆಸುತ್ತಿದ್ದಾರೆ. ಈ ಪ್ರದೇಶದ ಅನೇಕ ಕಾರ್ಖಾನೆಗಳಲ್ಲಿ ಕೆಲಸ ಮಾಡಲು ಬರುವ ಗ್ರಾಮೀಣ ಪ್ರದೇಶದ ಮಹಿಳೆಯರು ಅಲ್ಲಿಯೇ ಉಳಿದುಕೊಂಡು, ಕೆಲಸಕ್ಕೆ ಹೋಗುತ್ತಾರೆ. ಅವರಲ್ಲಿ ಯಾರಾದರೂ ಕೆಲಸ ಕಳೆದುಕೊಂಡು ಕಷ್ಟಪಡುತ್ತಿದ್ದರೆ, ಗಣೇಶನ್ ಅವರ ಮೇಲೆ ಬಾಡಿಗೆ ನೀಡಲೇಬೇಕೆಂದು ಒತ್ತಡ ಹೇರುವುದಿಲ್ಲ. "ನಿಮಗೆ ಕೆಲಸ ಸಿಕ್ಕಾಗ ಅದನ್ನು ಕೊಡಿ ಮತ್ತು ಶಾಂತಿಯಿಂದ ಕೆಲಸ ಹುಡುಕಿ" ಎಂದು ಅವರು ಹೇಳುತ್ತಾರೆ. ಯಾರೋ ಒಮ್ಮೆ ಅವರಿಗೆ ನೀಡಿದ ಭರವಸೆಯನ್ನು ಅವರು ನೆನಪಿಸಿಕೊಳ್ಳುತ್ತಾರೆ.

ವಂದನಾ ಗರ್ಭಿಣಿಯಾಗಿದ್ದಾಗ, ಒಮ್ಮೆ ತನ್ನ ತಾಯಿಯ ಮನೆಗೆ ರೈಲಿನಲ್ಲಿ ಪ್ರಯಾಣಿಸಿದಳು. ಪ್ರಯಾಣ ಅಸಹನೀಯವಾಗಿತ್ತು ಮತ್ತು ಅವಳು ದಿನವಿಡೀ ವಾಂತಿ ಮಾಡುತ್ತಿದ್ದಳು. ವಂದನಾ ಆರಾಮವಾಗಿ ಮಲಗಲು ಸಾಧ್ಯವಾಗುವಂತೆ ಅಪರಿಚಿತ ಯುವಕನೊಬ್ಬ ಪಕ್ಕದ ಆಸನವನ್ನು ಬಿಟ್ಟುಕೊಟ್ಟನು. ಅವನು ರೈಲಿನ ಮೆಟ್ಟಿಲುಗಳ ಬಳಿ ನಿಂತು ಗಂಟೆಗಟ್ಟಲೆ ಪ್ರಯಾಣಿಸಿದನು. ವಂದನಾ ಆ ಸ್ಥಿತಿಯಲ್ಲಿ ಆ ಹುಡುಗನ ಹೆಸರನ್ನು ಸಹ ಕೇಳಲಿಲ್ಲ. ಇಳಿಯುವ ಮುನ್ನ ಅವನಿಗೆ ಧನ್ಯವಾದ ಹೇಳಿ ಇಳಿದು ಬಂದು ಬಿಟ್ಟಳು.

ವಂದನಾಗೆ ಮಗ ಜನಿಸಿ, ಅವನಿಗೀಗ 14 ವರ್ಷಗಳಾಗಿವೆ. ಒಂದು ದಿನ ಅವನ ತರಗತಿಯ ಶಿಕ್ಷಕಿ ವಂದನಾಗೆ ಕರೆ ಮಾಡಿ, ಅವಳ ಮಗನ ಬಗ್ಗೆ ತುಂಬಾ ಹೆಮ್ಮೆಯಿಂದ ಹೇಳಿದಳು. "ನಾವು ಶಾಲೆಯಲ್ಲಿ ಮಕ್ಕಳೊಂದಿಗೆ ಪ್ರವಾಸಕ್ಕೆ ಹೋಗಿದ್ದೆವಲ್ಲವೇ? ಒಬ್ಬ ಹುಡುಗನಿಗೆ ಪ್ರಯಾಣ ಒಗ್ಗಲಿಲ್ಲ ಮತ್ತು ಅವನು ಒಂದೇಸಮ ವಾಂತಿ ಮಾಡುತ್ತಿದ್ದ. ನಿಮ್ಮ ಹುಡುಗ ತನ್ನ ಸೀಟನ್ನು ಅವನಿಗೆ ಬಿಟ್ಟುಕೊಟ್ಟ ಮತ್ತು ಅವನು ಇಡೀ ಪ್ರವಾಸದಲ್ಲಿ ನಿಂತುಕೊಂಡೇ ಬಂದನು. ಈ ವಯಸ್ಸಿನಲ್ಲಿ ಅವನಿಗೆ ತುಂಬಾ ಔದಾರ್ಯವಿದೆ" ಎಂದು ಶಿಕ್ಷಕಿ ಅವನನ್ನು ಹೊಗಳುತ್ತಾ ಹೇಳಿದಳು. ತನಗೆ ರೈಲಿನಲ್ಲಿ ಸೀಟು ನೀಡಿದ್ದ ಅಪರಿಚಿತ ವ್ಯಕ್ತಿಯನ್ನು ವಂದನಾ ನೆನಪಿಸಿಕೊಂಡಳು!

# ಸಹಾಯಕ್ಕಾಗಿ ಚಾಚಿದ ಕೈ!

ಒಬ್ಬ ಯುವತಿ ವೃದ್ಧ ಮಹಿಳೆಯ ಕೈ ಹಿಡಿದು ಶಾಪಿಂಗ್ ಮಾಲ್ ಪ್ರವೇಶಿಸಿದಳು. ಮಧ್ಯವಯಸ್ಕ ಮಹೇಶ್ ಮುಚ್ಚಿದ ಗಾಜಿನ ಬಾಗಿಲನ್ನು ತೆರೆದು ಸುರಕ್ಷಿತವಾಗಿ ಒಳಗೆ ಪ್ರವೇಶಿಸಲು ಅವರಿಗೆ ಸಹಾಯ ಮಾಡಿದ. ಅವರು ಒಂದು ನೋಟ ಮತ್ತು ನಗುವಿನ ಮೂಲಕ ಅವನಿಗೆ ಧನ್ಯವಾದ ಹೇಳಿ ಒಳಗೆ ಹೋದರು. ಸ್ವಲ್ಪ ದೂರ ಹೋದ ನಂತರಅವನಿಗೆ ಕೆಲವು ಮೆಟ್ಟಿಲುಗಳು ಕಾಣಿಸಿದವು. ಸಂಧಿವಾತದಿಂದ ಬಳಲುತ್ತಿರುವ ಅವನು ಅದನ್ನು ಹೇಗೆ ಹತ್ತುವುದು ಎಂದು ಯೋಚಿಸುತ್ತಾ ಹಿಂಜರಿಕೆಯಿಂದಲೇ ಮೆಟ್ಟಿಲುಗಳ ಮೇಲೆ ನಿಧಾನವಾಗಿ ಒಂದೊಂದೇ ಹೆಜ್ಜೆ ಎತ್ತಿಟ್ಟ. ಅವನು ತಾಳ್ಮೆಯಿಂದ ಪ್ರತಿ ಮೆಟ್ಟಿಲುಗಳನ್ನೂ ಹತ್ತುತ್ತಿದ್ದಂತೆ, ಒಂದು ಕೈ ಅವನಿಗೆ ಆಸರೆ ನೀಡಿತು. ಅವನು ತಿರುಗಿ ನೋಡಿದಾಗ, ಆ ವೃದ್ಧೆ, "ಹೆದರಬೇಡಿ, ನಿಧಾನವಾಗಿ ಮೇಲಕ್ಕೆ ಹತ್ತಿ... ನೋವಾಗುವುದಿಲ್ಲ" ಎಂದು ಹೇಳಿ ಸಹಾಯ ಮಾಡಲು ತನ್ನ ಕೈಯನ್ನು ಚಾಚಿದಳು.





# ದಾರಿಯಲ್ಲಿ ಅಗತ್ಯವಾಗಬಹುದು!

ಸಂಧ್ಯಾ ತಣ್ಣನೆಯ ಪರ್ವತಗಳಲ್ಲಿ ಹರಡಿರುವ ಸಣ್ಣ ಹಳ್ಳಿಗಳಿರುವ ಲಡಾಖ್‌ಗೆ ಪ್ರವಾಸಕ್ಕೆ ಹೋಗಿದ್ದಳು. ಅಲ್ಲಿನ ಮಹಿಳೆಯರು ಸುಂದರವಾಗಿ ಹೆಣೆದ ಸ್ವೆಟರ್‌ಗಳನ್ನು ಮಾರಾಟ ಮಾಡುತ್ತಿದ್ದರು. ಸಂಧ್ಯಾ ಸರಳವಾದ ಸ್ವೆಟರ್ ಖರೀದಿಸಿದಳು. ಅವರು 250 ರೂಪಾಯಿ ಬೆಲೆಯನ್ನು ಹೇಳಿದರು. ಹತ್ತಿರದಲ್ಲಿ ಎಟಿಎಂ ಇರಲಿಲ್ಲ. ಫೋನ್ ಮೂಲಕ ಹಣವನ್ನು ಕಳುಹಿಸಲು ಬಯಸಿದಳು. ನೆಟ್‌ವರ್ಕ್ ಚೆನ್ನಾಗಿಲ್ಲದ ಕಾರಣ ಜಿ.ಪೇ. ಕೆಲಸ ಮಾಡಲಿಲ್ಲ. ಅವಳು ತನ್ನ ಬ್ಯಾಗ್ ಅನ್ನು ಹುಡುಕಿ ತನ್ನಲ್ಲಿದ್ದ ಎಲ್ಲಾ ಹಣವನ್ನೂ ಹೊರತೆಗೆದಳು. ಒಟ್ಟು 200 ರೂಪಾಯಿ ಮಾತ್ರ ಇತ್ತು.

"ನೀವು ಆಸೆಯಿಂದ ಇದನ್ನು ತೆಗೆದುಕೊಂಡಿದ್ದೀರಿ, ಪರವಾಗಿಲ್ಲ. ಈ ಹಣ ಸಾಕು, ಅದನ್ನೇ ನನಗೆ ಕೊಡು" ಎಂದು ಅಂಗಡಿಯವಳು ಹೇಳಿದಳು. ಅದನ್ನೇ ತೆಗೆದುಕೊಂಡು 250 ರೂಪಾಯಿ ಮೌಲ್ಯದ ಸ್ವೆಟರ್ ಕೊಟ್ಟಳು. ಅವಳು ಅಲ್ಲಿಗೆ ನಿಲ್ಲಲಿಲ್ಲ. "ನೀನು ಎಲ್ಲಾ ಹಣ ನನಗೆ ಕೊಟ್ಟರೆ ನೀನು ಏನು ಮಾಡುತ್ತೀಯಾ ಮತ್ತು ದಾರಿಯಲ್ಲಿ ಏನಾದರೂ ತುರ್ತು ಪರಿಸ್ಥಿತಿ ಇದ್ದರೆ? ಇಟ್ಟು-ಕೋ" ಎಂದು ಹೇಳಿ 50 ರೂಪಾಯಿಗಳನ್ನು ಸಂಧ್ಯಾಳ ಕೈಗೆ ತಳ್ಳಿದಳು.

ಸರಳ ಜನರ ಔದಾರ್ಯದಿಂದ ಭಾವುಕಳಾದ ಸಂಧ್ಯಾ, ಮಾರಾಟಗಾರ್ತಿಯನ್ನು ಅಪ್ಪಿಕೊಂಡು, ಧನ್ಯವಾದ ಹೇಳಿ, ವಿದಾಯ ಹೇಳಿದಳು!

# “ಹಂಚಿಕೊಳ್ಳೋಣ!”

ಒಬ್ಬ ಯುವಕ ಕೆಲಸ ಮುಗಿಸಿ ತಡರಾತ್ರಿ ತನ್ನ ಕೋಣೆಗೆ ಹಿಂತಿರುಗಿದ. ದಾರಿಯಲ್ಲಿ ಅವನು, ಕೋಣೆಯಲ್ಲಿ ತಿನ್ನಲು ರಸ್ತೆಬದಿಯ ಹೋಟೆಲ್‌ನಿಂದ ಪಾರ್ಸೆಲ್ ಅನ್ನು ಖರೀದಿಸಿದ. ಅದನ್ನು ಖರೀದಿಸಿ, ಅವನು ಸ್ವಲ್ಪ ದೂರ ಹೋದಾಗ, "ಸರ್" ಎಂದು ಕರೆಯುವ ಧ್ವನಿ ಕೇಳಿಸಿತು. ಒಬ್ಬ ಮಹಿಳೆ ತನ್ನ ಮಗುವನ್ನು ಹೆಗಲ ಮೇಲೆ ಹೊತ್ತುಕೊಂಡು ಬೇಡಿಕೊಳ್ಳುತ್ತಿದ್ದಳು. ಅವಳ ಕಣ್ಣುಗಳಲ್ಲಿ, ಅವಳ ಮುಖದಲ್ಲಿ ಮತ್ತು ಅವಳ ಬೇಡಿಕೊಳ್ಳುವ ಸ್ವರದಲ್ಲಿ ಹಸಿವು ಸ್ಪಷ್ಟವಾಗಿತ್ತು. ತನ್ನ ಜೇಬಿನಲ್ಲಿರುವ ಚಿಲ್ಲರೆ ಹಣವನ್ನು ಅವಳಿಗೆ ನೀಡುವುದರಲ್ಲಿ ಅರ್ಥವಿಲ್ಲ ಎಂದು ಅವನಿಗೆ ಅನ್ನಿಸಿತು. ಆದ್ದ-ರಿಂದ ಅವನು ಪಾರ್ಸೆಲ್ ಅನ್ನು ಅವಳ ಕೈಗೆ ಕೊಟ್ಟು, "ತಿನ್ನಿ" ಎಂದು ಹೇಳಿ ಹೊರಟ. ಒಂದು ರಾತ್ರಿ ತಾನು ಹಸಿವನ್ನು ಸಹಿಸಿಕೊಳ್ಳಬಹುದೆಂದು ಅವನು ಭಾವಿಸಿದನು.

ಕೆಲವು ಹೆಜ್ಜೆಗಳು ದೂರ ಹೋದ ಮೇಲೆ ಒಂದು ಕೈ ಅವನನ್ನು ಹಿಡಿದುಕೊಂಡಿತು. ಅವನು ತಿರುಗಿ ನೋಡಿದಾಗ, ಪಕ್ಕದ ಕೋಣೆಯಲ್ಲಿ ತಂಗಿದ್ದ ಅವನ ಸ್ನೇಹಿತ! "ನಾನು ನಾಲ್ಕು ದೋಸೆ ಖರೀದಿಸಿದ್ದೇನೆ. ಕೋಣೆಗೆ ಹೋಗಿ ಎಲ್ಲರಿಗೂ ಕಾಫಿ ಮಾಡೋಣ ಬನ್ನಿ!" ಎಂದು ಅವನು ಅಧಿಕಾರದಿಂದ ತನ್ನ ಕೋಣೆಗೆ ಅವರನ್ನು ಕರೆದ!



## ಈ ವಾಸನೆ ಇಷ್ಟವಾಗುತ್ತದೆ!



ಒಬ್ಬ ಮಹಿಳೆ ಎಲೆಕ್ಟ್ರಾನಿಕ್ಸ್ ವಸ್ತುಗಳನ್ನು ಮಾರಾಟ ಮಾಡುವ ಅಂಗಡಿಗೆ ಬಂದಳು. ವಿವಿಧ ವಾಷಿಂಗ್ ಮೆಷಿನ್‌ಗಳನ್ನು ತೋರಿಸಿದ ಮಾರಾಟಗಾರ್ತಿ ಮೀನಾ, ಆ ಮಹಿಳೆಯ ಪರಿಮಳ ದ್ರವ್ಯದ ವಾಸನೆಯಿಂದ ಆಕರ್ಷಿತಳಾದಳು. ಅವಳು ಒಂದು ನಿರ್ದಿಷ್ಟ ಸುಗಂಧ ದ್ರವ್ಯದ ಬ್ರಾಂಡ್‌ನ ಬಗ್ಗೆ ಪ್ರಸ್ತಾಪಿಸಿ, "ಇದು ತಾನೇ ನೀವು ಹಾಕಿರುವ ಸುಗಂಧ ದ್ರವ್ಯ. ನನಗೆ ಈ ಸುಗಂಧ ತುಂಬಾ ಇಷ್ಟ. ನಾನು ಚಿಕ್ಕವಳಿದ್ದಾಗ ನನ್ನ ತಾಯಿ ಇದನ್ನು ನನಗಾಗಿ ಖರೀದಿಸುತ್ತಿದ್ದರು. ನನ್ನ ತಾಯಿ ಅಪಘಾತದಲ್ಲಿ ಮರಣಹೊಂದಿದ ನಂತರ, ನಮ್ಮ ಕುಟುಂಬ ದಿವಾಳಿಯಾಯಿತು ಮತ್ತು ನಾನು ಇಲ್ಲಿ ಕೆಲಸ ಮಾಡಬೇಕಾಯಿತು. ಈ ಸುಗಂಧವು ನನಗೆ ನನ್ನ ತಾಯಿಯನ್ನು ನೆನಪಿಸಿತು" ಎಂದು ಮೀನಾ ಹೇಳಿದಳು. ಬಂದ ಮಹಿಳೆ ಏನೂ ಹೇಳದೆ ವಾಷಿಂಗ್ ಮೆಷಿನ್‌ನೊಂದಿಗೆ ಹೋದಳು.

ಎರಡು ಗಂಟೆಗಳ ನಂತರ, ಆ ಮಹಿಳೆ ಹೊಸ ಸುಗಂಧ ದ್ರವ್ಯದ ಬಾಟಲಿಯೊಂದಿಗೆ ಹಿಂತಿರುಗಿ ಬಂದು ಮೀನಾಗೆ ಕೊಟ್ಟಳು. "ನನ್ನ ಮಾತು ಕೇಳದೆ ಮದುವೆಯಾಗಿ ಎಲ್ಲೋ ಹೋಗಿ ಒಬ್ಬಂಟಿಯಾಗಿ ವಾಸಿಸುತ್ತಿರುವನನ್ನ ಮಗಳಿಗೆ ಇದನ್ನು ಕೊಟ್ಟಿದ್ದೇನೆ ಎಂದು ನಾನು ಅಂದುಕೊಳ್ಳುತ್ತೇನೆ" ಎಂದು ಅವಳು ಹೇಳಿದಳು. ಅವರಲ್ಲಿ ಯಾರು ಮೊದಲು ಕಣ್ಣೀರು ಸುರಿಸಿದರು ಎಂಬುದು ಇಬ್ಬರಿಗೂ ನೆನಪಿಲ್ಲ!

---

## ಮೊಮ್ಮಗಳಿಗೆ ಇಷ್ಟ!



ಮಾರುಕಟ್ಟೆಯಲ್ಲಿ ತರಕಾರಿ ಮತ್ತು ದಿನಸಿ ಸಾಮಾನುಗಳನ್ನು ಖರೀದಿಸುತ್ತಿದ್ದ ವೃದ್ಧೆಯೊಬ್ಬರು ಒಂದು ಸಣ್ಣ ಜವಳಿ ಅಂಗಡಿಯ ಬಾಗಿಲಲ್ಲಿ ನೇತಾಡುತ್ತಿದ್ದ ಉಡುಪನ್ನು ನೋಡಿ ನಿಂತು-ಕೊಂಡರು. ಅವರು ಅದರ ಹತ್ತಿರ ಹೋಗಿ ಆಸಕ್ತಿಯಿಂದ ಅದನ್ನು ನೋಡಿದರು. ಅದರ ಬೆಲೆಯ ಬಗ್ಗೆ ಅಂಗಡಿಯವರನ್ನು ಕೇಳಿದರು. "500 ರೂಪಾಯಿಗಳು" ಎಂದು ಅಂಗಡಿಯವನು ಹೇಳಿದ.

"ನನ್ನ ಮೊಮ್ಮಗಳಿಗೆ ಈ ಡ್ರೆಸ್ ಇಷ್ಟವಾಗುತ್ತದೆ. ನನ್ನ ಬಳಿ ಈಗ ಹಣವಿಲ್ಲ. ನಾನು ಕೆಲಸಕ್ಕೆ ಹೋದರೆ, ಎರಡು ವಾರಗಳಲ್ಲಿ ಸ್ವಲ್ಪ ಹಣ ಸಂಪಾದಿಸುತ್ತೇನೆ. ಅಲ್ಲಿಯವರೆಗೆ, ನೀವು ಈ ಡ್ರೆಸ್ ಅನ್ನು ನನಗಾಗಿ ತೆಗೆದಿಟ್ಟುಕೊಳ್ಳುತ್ತೀರಾ ಮತ್ತು ಯಾರಿಗೂ ಮಾರಾಟ ಮಾಡುವುದಿಲ್ಲ ತಾನೇ?" ಎಂದು ವಯಸ್ಸಾದ ಮಹಿಳೆ ಹಿಂಜರಿಯುತ್ತಾ ಹೇಳಿದಳು. "ನಾವು ಅದನ್ನು ಹಾಗೆ ಇಟ್ಟುಕೊಳ್ಳಲು ಸಾಧ್ಯವಿಲ್ಲ! ಅಂಗಡಿಗೆ ಬರುವ ಜನರು ಎಲ್ಲವನ್ನೂ ನೋಡುತ್ತಾರೆ ಮತ್ತು ಅವರು ಅದನ್ನು ಬಯಸಿದರೆ, ಅವರಿಗೆ ಅದನ್ನು ನೀಡಬೇಕಾಗುತ್ತದೆ" ಎಂದು ಅಂಗಡಿಯವನು ಹೇಳಿದ.

ಆ ಮುದುಕಿ ನಿರಾಶೆಯಿಂದ ಆ ಉಡುಪನ್ನು ನೋಡಿದಳು. ಮುಂದೆ, ತರಕಾರಿ ಅಂಗಡಿಯಲ್ಲಿ ಚೌಕಾಶಿ ಮುಗಿಸಿ, ತರಕಾರಿಗಳನ್ನು ಖರೀದಿಸಿ ಹಣವನ್ನು ಎಣಿಸಿ ಕೊಟ್ಟು, ಚೀಲವನ್ನು ನೋಡಿದಾಗ, ಚೀಲದ ಮೇಲೆ ಒಂದು ಪಾರ್ಸೆಲ್ ಇತ್ತು. ಅದನ್ನು ತೆರೆದಾಗ, ಅದು ತನ್ನ ಮೊಮ್ಮಗಳಿಗೆ ಖರೀದಿಸಲು ಉದ್ದೇಶಿಸಿದ್ದ ಉಡುಪಾಗಿತ್ತು. ಜನದಟ್ಟಣೆಯ ಮಾರುಕಟ್ಟೆಯಲ್ಲಿ ಇದನ್ನು ಯಾರು ಖರೀದಿಸಿದರು ಮತ್ತು ಅದನ್ನು ತನ್ನ ಚೀಲದಲ್ಲಿ ಇಟ್ಟರು ಎಂದು ಯೋಚಿಸುತ್ತಾ ವೃದ್ಧೆ ಸುತ್ತಲೂ ನೋಡಿದಳು. ಅದು ಯಾರೆಂದು ಅವಳಿಗೆ ತಿಳಿಯಲಿಲ್ಲ. ಮುದುಕಿ ಕಾಣದ 'ದೇವರು'ಗೆ ಕೃತಜ್ಞತೆಯಿಂದ ನಮಸ್ಕರಿಸಿದಳು!

# ಪ್ರೀತಿಯನ್ನು ಹರಡೋಣ!

ವಾಟ್ಸಾಪ್ ಮೂಲಕ ಇನ್ನೂ ಪ್ರಪಂಚದಾದ್ಯಂತ ಹರಿದಾಡುತ್ತಿರುವ ಒಂದು ವಿಡಿಯೋವನ್ನು ನೀವು ಕೂಡ ನೋಡಿರಬಹುದು. ಯಾವಾಗಲೂ ಪ್ರೀತಿಯ ಮೊದಲ ಹನಿಗಳುಮಕ್ಕಳು ಎಂಬುದನ್ನು ತೋರಿಸುವ ದೃಶ್ಯ ಅದು. ಅದರಲ್ಲಿ ಯಾವುದೇ ಸಂಭಾಷಣೆಗಳಿಲ್ಲ. ಪ್ರಪಂಚದ ಯಾವುದೇ ಭಾಷೆಯನ್ನು ಮಾತನಾಡುವ ಯಾರಿಗಾದರೂ ಪ್ರೀತಿಯ ಅಭಿವ್ಯಕ್ತಿ ಅರ್ಥವಾಗುತ್ತದಲ್ಲವೇ? ಅದೂ ಅಂತಹುದೇ ದೃಶ್ಯ!

ಔಷಧಿ ಖರೀದಿಸಲು ವೃದ್ಧನೊಬ್ಬ ಔಷಧಿ ಅಂಗಡಿಯಲ್ಲಿ ನಿಂತಿದ್ದಾನೆ. ಅಂಗಡಿಯೊಳಗಿರುವ ಯುವಕ ಪ್ರಿಸ್ಕ್ರಿಪ್ಷನ್ ನೋಡುತ್ತಾ ದೊಡ್ಡ ಪ್ರಮಾಣದಲ್ಲಿ ಔಷಧಿಗಳನ್ನು ತೆಗೆದಿಡುತ್ತಿದ್ದಾನೆ. ಎಲ್ಲಾ ಔಷಧಿಗಳೂ ಅತ್ಯಗತ್ಯವಾದವುಗಳು ಎಂದು ವೃದ್ಧನ ಮುಖಭಾವವನ್ನು ನೋಡಿಯೇ ಹೇಳಬಹುದು. ಅವನು ಅಂತಿಮವಾಗಿ ಔಷಧಿಗಳ ಬೆಲೆಯನ್ನು ಹೇಳಿದಾಗ, ವೃದ್ಧನ ಬಳಿ ಅದರಲ್ಲಿ ಅರ್ಧದಷ್ಟು ಮಾತ್ರ ಹಣ ಇರುತ್ತದೆ. ಅವನು ಶಾಂತವಾಗಿ ಅದನ್ನು ಅಂಗಡಿಯವನಿಗೆ ಕೊಟ್ಟು ತನ್ನ ಬೆರಳಿನಲ್ಲಿದ್ದ ಉಂಗುರವನ್ನು ಕೂಡ ತೆಗೆದು ಅವನಿಗೆ ನೀಡಿ, ಮುದುಕ ಆ ಯುವಕನಿಗೆ ನಮಸ್ಕರಿಸುತ್ತಾನೆ.

ಅಂಗಡಿಯಲ್ಲಿ ನಿಂತಿದ್ದ ಒಬ್ಬ ಬಾಲಕ ಇದನ್ನು ಗಮನಿಸುತ್ತಾನೆ. ಅವನು ತನ್ನ ತಾಯಿಯಿಂದ ಚಾಕೊಲೇಟ್ ಖರೀದಿಸಲು 50 ರೂಪಾಯಿಗಳನ್ನು ತೆಗೆದುಕೊಂಡಿರುತ್ತಾನೆ. ಆ ಮುದುಕನ ಮುಖವನ್ನು ನೋಡಿಆ ಬಾಲಕನಿಗೆ ಏನೋ ಅರ್ಥವಾಯಿತು ಮತ್ತು ವೃದ್ಧ ಔಷಧಿಗಳಿಗಾಗಿ ನೀಡಿದ್ದ ಹಣದ ಜೊತೆಗೆ ತನ್ನ 50 ರೂಪಾಯಿಗಳನ್ನು ಸೇರಿಸಿಡುತ್ತಾನೆ. ಮುದುಕನಿಗೆ ಆಘಾತವಾಗುತ್ತದೆ. ಆ ಹುಡುಗನ ತಾಯಿಯೂ ಇದನ್ನು ನೋಡಿ 500 ರೂಪಾಯಿಗಳನ್ನು ತನ್ನ ಪಾಲಿಗೆ ತೆಗೆದಿಡುತ್ತಾಳೆ. ಮುದುಕನ ಹಿಂದೆ ನಿಂತಿದ್ದ ಯಾರೋ ಎರಡು ಸಾವಿರ ರೂಪಾಯಿಗಳನ್ನು ಇಡುತ್ತಾರೆ. ಅದು ಕೂಡ ಕಡಿಮೆ. ಅಂಗಡಿಯ ಯುವಕ ಇದನ್ನೆಲ್ಲಾ ನೋಡುತ್ತಾನೆ ಮತ್ತು ಅವನು ತನ್ನ ಜೇಬಿನಿಂದ ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಮೇಜಿನ ಮೇಲೆ ಇಡುತ್ತಾನೆ. ಇದನ್ನು ನೋಡಿದ ಅಂಗಡಿಯ ಮಾಲೀಕರು ಅಲ್ಲಿಗೆ ಬಂದು, ಉಳಿದ ಹಣ ತನಗೆ ಬೇಡ ಎಂದು ಹೇಳಿ, ಮುದುಕನಿಗೆ ಔಷಧಿಗಳನ್ನು ಕೊಟ್ಟು ಅವನ ಕೈಗೆ ಉಂಗುರವನ್ನು ಹಾಕುತ್ತಾರೆ!

ಇಂತಹ ನಿಸ್ವಾರ್ಥ ಸಹಾಯವೇ ಈ ಜಗತ್ತಿನಲ್ಲಿ ಮಾನವೀಯತೆ ಇನ್ನೂ ಉಳಿದಿದೆ ಎಂದು ತೋರಿಸುತ್ತದೆ. ಮತ್ತೊಬ್ಬ ಔಷಧ ಅಂಗಡಿ



ಮಾಲೀಕರ ಇನ್ನೊಂದು ಕಥೆಯೂ ಇದೆ. ಅವರು ಹಠಾತ್ತನೆ ಅನಾರೋಗ್ಯದಿಂದ ನಿಧನರಾದರು. ಅವರ ಮಗ ಮತ್ತು ಮಗಳು ಕಾಲೇಜಿನಲ್ಲಿ ಆಗಷ್ಟೇ ಪದವಿ ವ್ಯಾಸಂಗ ಮಾಡುತ್ತಿದ್ದರು. ಅವರಿಲ್ಲದೆ ಕುಟುಂಬ ಮುಗ್ಗರಿಸುತ್ತದೆ ಎಂದು ಅವರ ಪತ್ನಿ ಹೆದರಿದರು. ಕಾರಣ ಇವರ್ಯಾರಿಗೂ ಔಷಧದ ಅಂಗಡಿ ನಡೆಸಲು ಅಭ್ಯಾಸವಿರಲಿಲ್ಲ. ಅವರಿಗೂ ಅದಕ್ಕೂಯಾವುದೇ ಸಂಬಂಧವಿರಲಿಲ್ಲ.

ಅದೇ ನಗರದಲ್ಲಿ ಔಷಧಿ ಅಂಗಡಿ ಹೊಂದಿದ್ದ ಒಬ್ಬ ವ್ಯಕ್ತಿ ಇವರಿಗೆ ಸಹಾಯ ಮಾಡಲು ಮುಂದೆ ಬಂದ. "ವ್ಯವಹಾರದಲ್ಲಿ ಬಹಳಷ್ಟು ಹಣ ಕಳೆದುಕೊಂಡಿದ್ದ ನನಗೆ ಅಂಗಡಿ ನೀಡಿ ನನ್ನನ್ನು ಮನುಷ್ಯನನ್ನಾಗಿ ಮಾಡಿದವರು ಇವರು. ನಾನು ನಿಮ್ಮ ಅಂಗಡಿಯನ್ನು ಒಬ್ಬ ವ್ಯಕ್ತಿಯನ್ನು ನೇಮಿಸಿ ನೋಡಿಕೊಳ್ಳುತ್ತೇನೆ. ಅದರಿಂದ ಬರುವ ಲಾಭವನ್ನು ನಾನು ನಿಮಗೆ ನೀಡುತ್ತೇನೆ. ಅಲ್ಲದೆ ನಿಮ್ಮ ಮಕ್ಕಳಲ್ಲಿ ಯಾರಾದರೂ ತಮ್ಮ ಅಧ್ಯಯನವನ್ನು ಮುಗಿಸಿ ಅಂಗಡಿಯನ್ನು ನೋಡಿಕೊಳ್ಳಲು ಬಯಸಿದರೆ, ನಾನು ಅವರಿಗೆ ವ್ಯಾಪಾರವನ್ನು ಕಲಿಸುತ್ತೇನೆ" ಎಂದು ಅವರು ಹೇಳಿದರು.

ಅಷ್ಟೇ ಅಲ್ಲ... ಇವರ ಮನೆಗೆ ಯಾರ್ಯಾರೋ ಬಂದು ಮರಣ ಹೊಂದಿದ ವ್ಯಕ್ತಿಗೆ ಸಂಬಂಧಿಸಿದ ಯಾವುದಾದರೂ ಘಟನೆಗಳನ್ನು ನೆನಪಿಸುತ್ತಿದ್ದರು. ಈ ಕುಟುಂಬದಲ್ಲಿ ಯಾರಿಗೂ ಬಂದವರು ಯಾ–ರೆಂದು ಕೂಡ ತಿಳಿದಿರುತ್ತಿರಲಿಲ್ಲ. ಮರಣ ಹೊಂದಿದ ಕುಟುಂಬದ ಯಜಮಾನನ ಬಗ್ಗೆ ಅವರುಕೆಲವು ಹೃದಯಸ್ಪರ್ಶಿ ಘಟನೆಗಳನ್ನು ಹೇಳುತ್ತಿದ್ದರು. "ನಾನು ನನ್ನ ಹೆಂಡತಿಯನ್ನು ಮಾರಣಾಂತಿಕ ಸ್ಥಿತಿಯಲ್ಲಿ ಆಸ್ಪತ್ರೆಗೆ ಸೇರಿಸಿದ್ದೆ. ನನಗೆ ಹೊರ ಊರಿನಿಂದ ತುರ್ತಾಗಿ ಔಷಧಿ ಬೇಕಾಗಿದ್ದಾಗ ಅದನ್ನು ಯಾರ ಮೂಲಕವೋ ಖರೀದಿಸಿ ತರಿಸಿ ನಮಗೆ ನೀಡಿದ್ದರು. ಅದಕ್ಕಾಗಿ ಅವರು ನಮ್ಮಿಂದ ಯಾವುದೇ ಹಣವನ್ನು ಸಹ ತೆಗೆದುಕೊಳ್ಳಲಿಲ್ಲ. ಅವರಿಲ್ಲದೆ ನಿಮ್ಮ ಕುಟುಂಬ ಕಷ್ಟಪಡಬಾರದು" ಎಂದು ಹೇಳಿದ ಒಬ್ಬ ರೈತ ಅವರಿಗೆ ತಾನು ಬೆಳೆದ ಅಕ್ಕಿ, ತೊಗರಿ ಮತ್ತು ಉದ್ದಿನ ಬೇಳೆ ತುಂಬಿದ ಚೀಲವನ್ನು ಕೊಟ್ಟು, "ನಮ್ಮ ಹೊಲಗಳಲ್ಲಿ ಯಾವುದೇ ಬೆಳೆ ಬೆಳೆದರೂ, ಅದರಲ್ಲಿ ಒಂದು ಪಾಲು ನಿಮ್ಮ ಕುಟುಂಬಕ್ಕೆ ಖಂಡಿತಾ ಬರುತ್ತದೆ" ಎಂದು ಹೇಳಿ ಹೋದ.

ವಿದೇಶದಿಂದ ಸರಿಯಾದ ಸಮಯದಲ್ಲಿ ಅಪರೂಪದ ಔಷಧವನ್ನು ತರಿಸಿಕೊಟ್ಟು ತನ್ನ ಮಗಳನ್ನು ಉಳಿಸಿದ ಸುದ್ದಿಯನ್ನು ತಿಳಿಸಿದ ಇನ್ನೊಬ್ಬ ಶ್ರೀಮಂತ ವ್ಯಕ್ತಿ, ಇವರ ಹಿರಿಯ ಮಗನ ಉನ್ನತ ಶಿಕ್ಷಣಕ್ಕೆ ಅಗತ್ಯವಾದ ಎಲ್ಲ ಆರ್ಥಿಕ ಸಹಾಯವನ್ನೂ ತಾನು ಮಾಡಲು ಮುಂದಾದ. ಇನ್ನೊಬ್ಬ ಸ್ನೇಹಿತ ಬಂದು ಹೀಗೆ ಹೇಳಿದ: "ನಾನು ಖರೀದಿಸಿದ ಯಾವ ಔಷಧಿಗಳಿಗೂ ಅವನು ಎಂದಿಗೂ ಹಣ ತೆಗೆದುಕೊಳ್ಳಲಿಲ್ಲ. ಭವಿಷ್ಯದಲ್ಲಿ ನಿಮ್ಮ ಮಗಳ ಮದುವೆಗೆ ಇದು ನೆರವಾಗಬಹುದು, ಇಟ್ಟುಕೊಳ್ಳಿ" ಎಂದು ಹೇಳಿ ಒಂದು ಆಭರಣವನ್ನು ಇವರ ಕೈಗೆ ಕೊಟ್ಟು ಹೋದ.

ಕುಟುಂಬವು ನಿಜವಾಗಿಯೂ ಇವ್ಯಾವುದನ್ನೂ ನಿರೀಕ್ಷಿಸಿರಲಿಲ್ಲ.ಆ ವ್ಯಕ್ತಿ ಸಾವನ್ನಪ್ಪಿ ಆರು ತಿಂಗಳುಗಳ ನಂತರ ಕೂಡ ಹೀಗೆ ಯಾರೋ ಒಬ್ಬರು ಮನೆಗೆ ಬಂದು, ಇಂತಹ ಪ್ರೀತಿಯ ನೆನಪುಗಳನ್ನುಹಂಚಿಕೊಂಡು ಮಾತನಾಡುತ್ತಿದ್ದರು. ಮಕ್ಕಳಿಗೆ ತಮ್ಮ ತಂದೆಯ ಬಗ್ಗೆ ಅಪಾರ ಗೌರವ ಮೂಡಿತು. ಒಂದು ದಿನ ಅವರ ಮಗ ತನ್ನ ತಾಯಿಯ ಬಳಿಗೆ ಬಂದು, "ಅಮ್ಮಾ, ನಾನು ಓದುತ್ತಲೇ ನಮ್ಮ ತಂದೆಯ ಅಂಗಡಿಯನ್ನು ಪಾರ್ಟ್‌ಟೈಮ್ ಆಗಿ ನೋಡಿಕೊಳ್ಳುತ್ತೇನೆ. ನಮ್ಮ ತಂದೆ ನಡೆಸುತ್ತಿದ್ದ



ರೀತಿಯಲ್ಲಿಯೇ ನಾನೂ ಅಂಗಡಿಯನ್ನು ನಡೆಸಬೇಕೆಂದು ಬಯಸುತ್ತೇನೆ" ಎಂದು ಹೇಳಿದ!

ಇದೇ ರೀತಿಯ ನೆನಪುಗಳು ಇನ್ನೊಂದು ಕುಟುಂಬಕ್ಕೂ ದೊರೆತವು: ಒಬ್ಬ ವಕೀಲರು ಯಶಸ್ವಿ ವಕೀಲರೆಂದು ಹೆಸರು ಗಳಿಸಿದ್ದರು. ವಿಚ್ಛೇದನ ಪ್ರಕರಣಗಳನ್ನು ನಿರ್ವಹಿಸುವಲ್ಲಿ ಅವರು ಪರಿಣಿತರಾಗಿದ್ದರು. ಅವರು ಒಂದು ಪ್ರಕರಣವನ್ನು ಕೈಗೆತ್ತಿಕೊಂಡರೆ, ಅವರು ಖಂಡಿತವಾಗಿಯೂ ವಿಚ್ಛೇದನ ಪಡೆಯುತ್ತಿದ್ದರು. ಪರಿಣಾಮವಾಗಿ ಅವರಲ್ಲಿ ಹಣ ಸಂಗ್ರಹವಾಯಿತು. ಹಲವು ಸೌಲಭ್ಯಗಳೂಅವರ ಮನೆಗೆ ಬಂದವು.

ವಿಚ್ಛೇದನ ಪ್ರಕರಣದಲ್ಲಿ ಅವರು ಬೇರ್ಪಡಿಸಿದ ಮಹಿಳೆಯೊಬ್ಬರು ಒಂದು ದಿನ ಕಣ್ಣೀರು ಹಾಕುತ್ತಾ ವಕೀಲರ ಬಳಿ ಬಂದರು. "ನಾನು ಆಗ ಯಾವುದೋ ಒಂದು ಮನಸ್ಥಿತಿಯಲ್ಲಿ ಅದು ಹೇಗೋ ವಿಚ್ಛೇದನಕ್ಕೆ ಒಪ್ಪಿಕೊಂಡೆ. ಆದರೆ ಅದು ಎಷ್ಟು ತಪ್ಪು ಎಂದು ನನಗೆ ಈಗ ಅರಿವಾಗುತ್ತಿದೆ. ನನ್ನ ತಂದೆ ಮತ್ತು ತಾಯಿ ಕೂಡ ನನ್ನನ್ನು ಮಾತಿನಿಂದ ನಿಂದಿಸತೊಡಗಿದರು. ಆದ್ದರಿಂದ ನಾನು ಮನೆಯಿಂದ ಹೊರ ಬಂದು ಒಬ್ಬಂಟಿಯಾಗಿ ಬದುಕುತ್ತಿದ್ದೇನೆ. ಮನೆಯಲ್ಲಿ ಒಬ್ಬಂಟಿಯಾಗಿರಲು ನನಗೆ ಭಯವಾಗುತ್ತದೆ. ನನ್ನ ಮಗಳು ಕೆಲವು ದಿನಗಳು ನನ್ನೊಂದಿಗೂ,ಕೆಲವು ದಿನಗಳು ತನ್ನ ತಂದೆಯೊಂದಿಗೂ ಇರುತ್ತಾಳೆ. ಅವಳಿಂದ ಮೊದಲಿನಂತೆ ಓದಲು ಸಾಧ್ಯವಾಗುತ್ತಿಲ್ಲ. ನನಗೆ ಅವಳದೇ ಚಿಂತೆಯಾಗಿದೆ. ನೀವು ಇದನ್ನೆಲ್ಲಾ ಮೊದಲೇ ನನಗೆ ಹೇಳಿ ಸಲಹೆ ನೀಡಿದ್ದರೆ, ನಾನು ವಿಚ್ಛೇದನ ತೆಗೆದುಕೊಳ್ಳುತ್ತಿರಲಿಲ್ಲ" ಎಂದು ಅವಳು ಹೇಳಿದಳು.

ಆ ದಿನವೇ ಆ ವಕೀಲರು ತಮ್ಮ ಮನಸ್ಸನ್ನು ಬದಲಾಯಿಸಿಕೊಂಡರು. ಇನ್ನು ಮುಂದೆ ಕುಟುಂಬಗಳನ್ನು ಬೇರ್ಪಡಿಸುವುದಿಲ್ಲ ಎಂದು ಅವನು ನಿರ್ಧರಿಸಿದರು. ಇದಕ್ಕೆ ಪ್ರಾಯಶ್ಚಿತ್ತವಾಗಿ, ಕುಟುಂಬಗಳನ್ನು ಒಂದುಗೂಡಿಸಲು ನಿರ್ಧರಿಸಿದರು. ಮಕ್ಕಳನ್ನು ದತ್ತು ಪಡೆಯಲು ಬಯಸುವವರ ಪ್ರಕರಣಗಳನ್ನು ಅವರು ಹೆಚ್ಚಾಗಿ ವಹಿಸಿಕೊಂಡರು. ಇದರಿಂದ ಅನೇಕ ಮಕ್ಕಳು ತಾಯಿ ಮತ್ತು ತಂದೆಯನ್ನು ಗಳಿಸಿಕೊಂಡರು. ಇದರಿಂದ ಅವರ ಆದಾಯ ಕಡಿಮೆಯಾದರೂ ಅದನ್ನು ಅವರು ಲೆಕ್ಕಿಸಲಿಲ್ಲ.

ಅವರು ವೃದ್ಧಾಪ್ಯದಲ್ಲಿ ನಿಧನರಾದಾಗ, ಅವರಿಗೆ ಗೌರವ ಸಲ್ಲಿಸಲು ಬಂದ ಜನಸಮೂಹವನ್ನು ನೋಡಿ ಇಡೀ ಪಟ್ಟಣವೇ ಬೆರಗುಗಾಂಡಿತು. ತಾಯಂದಿರು, ತಂದೆ ಮತ್ತು ಮಕ್ಕಳು ಗುಂಪುಗುಂಪಾಗಿ ಬಂದು ಕಣ್ಣೀರು ಸುರಿಸುತ್ತಿದ್ದರು. ಪ್ರೀತಿಯನ್ನು ಹಂಚಿಕೊಳ್ಳುವವರು ಹಿಂದಿರುಗಿ ಅದನ್ನು ಹೇರಳವಾಗಿ ಪಡೆಯುತ್ತಾರೆ ಎಂಬುದಕ್ಕೆ ಇದು ಸಾಕ್ಷಿಯಾಗಿತ್ತು. ●

# ಕೊಡುವುದರಿಂದ ದೊರಕುವ ಶಕ್ತಿ!



ಸಹಾನುಭೂತಿ ತೋರಿಸುವುದು ಬೇರೆ, ಯಾರಿಗಾದರೂ ಪ್ರೀತಿಯಿಂದ ಏನು ಬೇಕಾದರೂ ನೀಡಲು ಸಿದ್ಧವಾಗಿರುವುದು ಬೇರೆ. ಇವುಗಳು ಮಾತು ಮತ್ತು ಕ್ರಿಯೆಯ ನಡುವಿನ ವ್ಯತ್ಯಾಸಗಳಾಗಿರುತ್ತವೆ. ಯಾರಾದರೂ ತೊಂದರೆ ಅಥವಾ ದುಃಖದಲ್ಲಿದ್ದಾರೆ ಎಂದು ನಿಮಗೆ ತಿಳಿದರೆ, 'ಓ ದೇವರೇ!' ಎಂದು ಹೇಳಿ ಬಿಟ್ಟು ಸುಮ್ಮನೆ ಮುಂದೆ ಸಾಗುವುದು ಸಹಾನುಭೂತಿ. 'ನನ್ನ ಹೆಗಲ ಮೇಲೆ ಒರಗಿಕೊಳ್ಳಿ! ನಾನು ನಿಮ್ಮ ಜೊತೆಯಲ್ಲಿರುತ್ತೇನೆ. ಈ ದುಃಖವನ್ನು ನಾವಿಬ್ಬರೂ ಒಟ್ಟಿಗೆ ಎದುರಿಸೋಣ' ಎನ್ನುವುದು ಪ್ರೀತಿ.

'ನಿಮಗೆ ಯಾವುದೇ ಸಹಾಯಬೇಕಾದರೂನನ್ನನ್ನು ಕೇಳಿ' ಎನ್ನುವುದು ಸಹಾನುಭೂತಿ. 'ನಿಮಗೆ ಸಹಾಯ ಮಾಡಲು ನಾನು ನಿಮ್ಮ ಜೊತೆಯಲ್ಲೇ ಇರುತ್ತೇನೆ' ಎಂಬಂತೆ ನಡೆದುಕೊಳ್ಳುವುದು ಪ್ರೀತಿ. 'ನಿನ್ನ ಕಷ್ಟಗಳ ಬಗ್ಗೆ ಯೋಚಿಸಿದಾಗ ನನಗೆ ಚಿಂತೆಯಾಗುತ್ತದೆ' ಎಂದರೆ ಸಹಾನುಭೂತಿ. 'ನಿನ್ನ ಹೊರೆಯನ್ನು ನನ್ನೊಂದಿಗೆ ಹಂಚಿಕೋ, ಅದು ಹಗುರವಾಗುತ್ತದೆ' ಎಂದರೆ, ಅದು ಪ್ರೀತಿ. ಸಹಾನುಭೂತಿಯನ್ನು ಮೀರಿ, ಪ್ರೀತಿಯನ್ನು ತೋರಿಸುವುದು ಇನ್ನೊಬ್ಬರ ಜೀವನವನ್ನು ಹೇಗೆ ಬದಲಾಯಿಸಬಹುದು ಎಂಬುದಕ್ಕೆ ಒಂದು ಘಟನೆ ಒಂದು ಉದಾಹರಣೆಯಾಗಿದೆ...

ಒಂದು ದಿನ, ಸುರೇಶ್ ಶಾಲೆಯಿಂದ ಮನೆಗೆ ನಡೆದುಕೊಂಡು ಹೋಗುತ್ತಿದ್ದಾಗ, ಅವನ ಮುಂದೆ ಹೋಗುತ್ತಿದ್ದ ಒಬ್ಬ ವಿದ್ಯಾರ್ಥಿ ಎಡವಿ ಕೆಳಗೆ ಬಿದ್ದುದನ್ನು ಅವನು ಗಮನಿಸಿದ. ಇತರ ವಿದ್ಯಾರ್ಥಿಗಳು, "ಹೇ, ನೋಡಿ–ಕೊಂಡು ನಡೆಯಬಾರದೇ?" ಎಂದು ಜೋರಾಗಿ ಹೇಳುತ್ತಾ ಅವನನ್ನು ದಾಟಿಕೊಂಡುಸುಮ್ಮನೆ ಹಾದುಹೋದರು. ಯಾರೂ ಅವನಿಗೆ ಸಹಾಯ ಮಾಡಲಿಲ್ಲ.

ಸುರೇಶ್ ಓಡಿ ಬಂದು ಅವನನ್ನು ಎತ್ತಿದ. ಆ ವಿದ್ಯಾರ್ಥಿಯ ಹೆಗಲ ಚೀಲ ತುಂಬಾ ಭಾರವಾಗಿತ್ತು. ಅದರಲ್ಲಿ ಸ್ಕೂಲಿನ ಪಠ್ಯ ಪುಸ್ತಗಳು, ನೋಟ್ ಪುಸ್ತಕಗಳು,ಚೆಂಡುಗಳು ಮತ್ತು ಕೈಗವಸುಗಳು ಇತ್ಯಾದಿಯಾಗಿ ಹಲವು ವಸ್ತುಗಳು ತುಂಬಿಕೊಂಡಿದ್ದವು. ಇನ್ನೊಂದು ಕೈಯಲ್ಲಿ ಕ್ರಿಕೆಟ್ ಬ್ಯಾಟ್ ಇತ್ಯಾದಿಗಳನ್ನು ಹಿಡಿದುಕೊಂಡಿದ್ದ. ಇವೆಲ್ಲವನ್ನೂ ಹೊರಲಾರದೆ ಅವನು ಕೆಳಗೆ ಬಿದ್ದಿದ್ದಾನೆ ಎಂಬುದು ಸುರೇಶ್‌ಗೆ ಅರ್ಥವಾಯಿತು.

ಸುರೇಶ್ ಅವನನ್ನು ಎಬ್ಬಿಸಿ ನಿಲ್ಲಿಸಿ ಅವನಕೈಕಾಲುಗಳಲ್ಲಿ ಗಾಯವಾಗಿದೆಯೇ ಎಂದು ಪರೀಕ್ಷಿಸಿದ. "ಧನ್ಯವಾದಗಳು ದೇವರೇ, ಇವನಿಗೆ ಎಲ್ಲಿಯೂ ಯಾವುದೇ ಗಾಯವಾಗಿಲ್ಲ," ಎಂದು ಹೇಳಿ, ನೆಲದ ಮೇಲೆ ಹರಡಿಕೊಂಡಿದ್ದ ಎಲ್ಲವಸ್ತುಗಳನ್ನೂ ಆರಿಸಿ ಎತ್ತಿಕೊಂಡು, "ನೀನು ಯಾವ ದಾರಿಯಲ್ಲಿ ಹೋಗಬೇಕು?" ಎಂದು ಸುರೇಶ್ ಅವನನ್ನು ಕೇಳಿದ. ಅವನು ಉತ್ತರಿಸಿದ ಮೇಲೆ, "ಸರಿ, ನಾನು ಕೂಡ ಅದೇ ದಾರಿಯಲ್ಲೇ ನಮ್ಮ ಮನೆಗೆ ಹೋಗುತ್ತಿರುವುದು. ನೀನೊಬ್ಬನೇ ಇಷ್ಟೆಲ್ಲಾ ಭಾರವನ್ನು ಹೊರುವುದು ಕಷ್ಟವಾಗುತ್ತದೆ.ಇವುಗಳಲ್ಲಿ ನಾನು ಅರ್ಧವನ್ನು ನಿಮ್ಮ ಮನೆಯವರೆಗೂತೆಗೆದುಕೊಂಡು ಬಂದು ಕೊಡುತ್ತೇನೆ" ಎಂದು ಹೇಳಿ ಹೊರೆಯನ್ನು ಹಂಚಿಕೊಂಡ. ಆಮೇಲೆ ಆ ವಿದ್ಯಾರ್ಥಿಯ ಹೆಸರು ಜೀವ ಎಂದು ತಿಳಿಯಿತು. ಅವನು ಸುರೇಶ್‌ಗಿಂತ ಒಂದು ವರ್ಷ ಚಿಕ್ಕವನು. ಎಂಟನೇ ತರಗತಿಯಲ್ಲಿ ಓದುತ್ತಿದ್ದ.

ಜೀವನ ಮನೆ ತುಂಬಾ ದೊಡ್ಡದಾಗಿತ್ತು. ಸುರೇಶ್ ಒಳಗೆ ಹೋಗಿ ಅವನ ಎಲ್ಲಾ ಸಾಮಾನುಗಳನ್ನೂ ಅವನ ಮನೆಯೊಳಗೆ ಇಟ್ಟ.ಜೀವ ಫ್ರಿಡ್ಜ್‌ನಿಂದ ತಂಪು ಪಾನೀಯ ತೆಗೆದು ಸುರೇಶ್‌ಗೆ ಕೊಟ್ಟ. ಇಬ್ಬರೂ ತುಂಬಾ ಹೊತ್ತು ಮಾತನಾಡುತ್ತಾ ನಗುತ್ತಾ ಇದ್ದರು. ಇಬ್ಬರೂ ತರಗತಿ, ಪಾಠ, ಶಿಕ್ಷಕರು, ಕ್ರಿಕೆಟ್ ಮತ್ತು ಸಿನಿಮಾ ಇತ್ಯಾದಿಗಳ ಬಗ್ಗೆ ಮಾತನಾಡಿದ ನಂತರ ಸುರೇಶ್



ಅಲ್ಲಿಂದ ಹೊರಟ. ರಜೆಯಲ್ಲಿ ತಮ್ಮ ಮನೆಗೆ ಬರುವಂತೆಯೂ ಅವನು ಜೀವನಿಗೆ ಆಹ್ವಾನ ನೀಡಿದ.

ಮರುದಿನ, ಊಟದ ವಿರಾಮದ ಸಮಯದಲ್ಲಿ ಅವರು ಒಟ್ಟಿಗೆ ಊಟ ಮಾಡಿದರು. ಸಂಜೆ ಒಟ್ಟಿಗೆ ಮನೆಗೆ ಮರಳಿದರು. ಸ್ವಲ್ಪ ದಿನಗಳಲ್ಲೇ ಅವರು ಆತ್ಮೀಯ ಸ್ನೇಹಿತರಾದರು.

ಸುರೇಶ್ ತನ್ನ ದ್ವಿತೀಯ ಪಿಯೂಸಿ ವ್ಯಾಸಂಗ ಮುಗಿಸಿ ಬೇರೆ ಊರಿನಲ್ಲಿ ಕಾಲೇಜಿಗೆ ಸೇರುವ ಗಡಿಬಿಡಿಯಲ್ಲಿದ್ದ. "ಜೀವಾ, ನಾನು ಇಲ್ಲದೆ ನೀನು ಈ ವರ್ಷ ಒಬ್ಬನೇ ಶಾಲೆಗೆ ಹೋಗಬೇಕಲ್ಲವೇ ಜೀವಾ?" ಎಂದು ಸುರೇಶ್ ಕೇಳಿದ. "ಹೌದು, ನಾನು ನಿನ್ನನ್ನು ತುಂಬಾ ಮಿಸ್ ಮಾಡಿಕೊಳ್ಳುತ್ತೇನೆ" ಎಂದ ಜೀವನ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತ್ತು. "ಹೇ, ಅಳಬೇಡ!" ಎಂದ ಸುರೇಶ್ ಗಾಬರಿಯಿಂದ.

"ನಿನಗೆ ಒಂದು ವಿಷಯ ಗೊತ್ತಿಲ್ಲ ಸುರೇಶ್, ನಾವು ಮೊದಲು ಭೇಟಿಯಾದ ದಿನ ನಿನಗೆ ನೆನಪಿದೆಯೇ? ಆ ದಿನ ನಾನು ಯಾಕೆ ಅಷ್ಟೊಂದು ವಸ್ತುಗಳನ್ನು ಹೊತ್ತುಕೊಂಡು ಬಂದೆ ಎಂದು ನೀನು ನನ್ನನ್ನು ಕೇಳಲಿಲ್ಲ. ನಿನಗೆ ಒಂದು ಸತ್ಯ ಗೊತ್ತಾ? ನಾನು ಅಂದು ಸಾಯಲು ನಿರ್ಧರಿಸಿದ್ದೆ" ಜೀವ ಕಣ್ಣೀರು ಸುರಿಸುತ್ತಾ ಹೇಳಿದ. "ನೀನು ಏನು ಮಾತನಾಡುತ್ತಿದ್ದೀಯಾ?" ಸುರೇಶ್ ಹತ್ತಿರ ಬಂದು ಅವನ ಕಣ್ಣುಗಳನ್ನು ಒರೆಸುತ್ತಾ ಕೇಳಿದ.

"ಹೌದು ಸುರೇಶ್. ಆ ದಿನಗಳಲ್ಲಿ, ನನ್ನ ತಾಯಿ ಮತ್ತು ತಂದೆ ಮನೆಯಲ್ಲಿ ತುಂಬಾ ಜಗಳವಾಡುತ್ತಿದ್ದರು. ಜಗಳವಾದಾಗ ಇಬ್ಬರೂ ನನ್ನನ್ನು ಬೈಯುತ್ತಿದ್ದರು ಮತ್ತು ಹೊಡೆಯುತ್ತಿದ್ದರು. ಇದರಿಂದಾಗಿ, ನಾನು ಸರಿಯಾಗಿ ಓದಲು ಸಾಧ್ಯವಾಗಲಿಲ್ಲ ಮತ್ತು ಅದಕ್ಕಾಗಿ ಶಾಲೆಯಲ್ಲಿ ಕೂಡ ಬೈಯುತ್ತಿದ್ದರು. ನನಗೆ ಯಾರೂ ಇಲ್ಲ ಎಂದು ನನಗೆ ಅನ್ನಿಸಿತು. ಹಾಗಾಗಿ, ನಾನು ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದೆ. ರಹಸ್ಯವಾಗಿ ನನ್ನ ಅಮ್ಮನ ನಿದ್ರೆ ಮಾತ್ರೆಗಳನ್ನು ಶೇಖರಿಸಿಟ್ಟುಕೊಂಡೆ. ಅಂದು ನಾನು ಶಾಲೆಯಲ್ಲಿದ್ದ ನನ್ನ ಎಲ್ಲಾ ವಸ್ತುಗಳನ್ನೂ ತಂದು ಮನೆಯಲ್ಲಿಟ್ಟು, ಸತ್ತು ಹೋಗೋಣ ಎಂದುಕೊಂಡು ಅವನ್ನೆಲ್ಲ ತೆಗೆದುಕೊಂಡು ಬಂದೆ. ಅಷ್ಟೊಂದು ಭಾರ ಹೊರಲಾರದೆ ನಾನು ಕೆಳಗೆ ಬಿದ್ದು ಹೋದೆ. ಇದ್ದಕ್ಕಿದ್ದಂತೆ ನೀನು ನನ್ನ ಮುಂದೆ ಬಂದೆ! ನನಗೆ ಸಹಾಯ ಮಾಡಿದೆ ಮತ್ತು ಮನೆಯಲ್ಲಿ ಕುಳಿತು ತುಂಬಾ ಹೊತ್ತು ನನ್ನೊಂದಿಗೆ ಮಾತನಾಡಿದೆ. ಅದು ನನ್ನ ಮನಸ್ಸನ್ನು ಬದಲಾಯಿಸಿತು. ಅದರ ನಂತರ ಕೂಡ ನೀನು ತೋರಿದಕಾಳಜಿ ನನ್ನನ್ನು ಚೆನ್ನಾಗಿ ಓದುವಂತೆ ಮಾಡಿತು. ನಾನು ಚೆನ್ನಾಗಿ ಓದ ತೊಡಗಿದ್ದೂ, ಇತರರೊಂದಿಗೆ ದಯೆಯಿಂದ ನಡೆದುಕೊಳ್ಳಲು ಆರಂಭಿಸಿದ್ದೂ... ನನ್ನ ಮನೆಯ ಪರಿಸ್ಥಿತಿಯನ್ನೇ ಬದಲಾಯಿತು. ನೀನು ನನ್ನ ಜೀವವನ್ನು ಉಳಿಸಿದ್ದೀಯ ಎಂಬುದು ನಿನಗೆ ತಿಳಿಯದು, ಆದರೆ ನನಗೆ ಚೆನ್ನಾಗಿ ಗೊತ್ತು. ನಿನಗೆ ತುಂಬಾ ಧನ್ಯವಾದಗಳು" ಎಂದು ಹೇಳಿ ಜೀವ ಸುರೇಶ್‌ನನ್ನು ತಬ್ಬಿಕೊಂಡ.

ನಾವು ಪ್ರೀತಿಯನ್ನು ತೋರಿಸುವಾಗ ಇನ್ನೊಬ್ಬ ವ್ಯಕ್ತಿಯ ಜೀವನದಲ್ಲಿ ಯಾವ ರೀತಿಯ ಬದಲಾವಣೆಗಳನ್ನು ಮಾಡುತ್ತೇವೆ ಎಂಬುದು ನಮಗೆ ಎಂದಿಗೂ ತಿಳಿದಿರುವುದಿಲ್ಲ.

- ನಿಮ್ಮ ಹೃದಯವನ್ನು ತೆರೆದು ಇತರರೊಂದಿಗೆ ಮಾತನಾಡಿ. ಯಾರನ್ನೂ ಪ್ರೀತಿಗಾಗಿ ಹಾತೊರೆಯುವಂತೆ ಮಾಡಬೇಡಿ.
- ನಿಮಗೆ ಪರಿಚಯವಿಲ್ಲದ ಜನರಿಗೆ ಕೂಡ ನಿಮ್ಮಿಂದಾದಷ್ಟು ಸಹಾಯ ಮಾಡಿ.
- ಸ್ನೇಹಿತರು ಮತ್ತು ಸಂಬಂಧಿಕರಿಂದ ಹೆಚ್ಚು ದೂರವಾಗಬೇಡಿ. ಅವರಿಗೆ ನಿಮ್ಮ ಅಗತ್ಯವಿದ್ದಾಗ ಅವರೊಂದಿಗೆ ಇರಿ.
- ಇತರರನ್ನು ಪ್ರೋತ್ಸಾಹಿಸಲು ಮತ್ತು ಹೊಗಳಲು ಹಿಂಜರಿಯಬೇಡಿ. ಅಗತ್ಯವಿರುವ ಯಾರಿಗಾದರೂ ಮಾರ್ಗದರ್ಶನ ನೀಡಿ.
- ಬೇರೆಯವರಿಗೆ ಸಹಾಯ ಮಾಡಲು ಮತ್ತು ಬೇರೆಯವರಿಂದ ಸಹಾಯ ಕೇಳಲು ಹಿಂಜರಿಯಬೇಡಿ. ಬೇರೆಯವರಿಗೆ ಅಗತ್ಯವಿರುವಾಗ, ನೀವು ನಾಚಿಕೆಪಡದೆ ಇತರರ ಸಹಾಯ ಕೂಡ ಕೇಳಬಹುದು ●


RAMRAJ ಕಾಟನ್ ಭಾರತೀಯ ಸಂಸ್ಕೃತಿ

# ಬಿಳುಪು

| ಭಾವನೆಗಳು

**ಸಂಪುಟ 9 | ಸಂಚಿಕೆ 4**
**ಸೆಪ್ಟೆಂಬರ್ 2026**

ಪ್ರಕಾಶಕರು ಮತ್ತು ಪ್ರಧಾನ ಸಂಪಾದಕರು
**ಕೆ.ಆರ್. ನಾಗರಾಜನ್**

ಲೇಖಕರು
**ತ.ಸೆ. ಜ್ಞಾನವೇಲ್**

ಗೌರವ ಸಂಪಾದಕರು ಮತ್ತು
ಕನ್ನಡಾನುವಾದ
**ಡಾ. ತಮಿಳ್ ಸೆಲ್ವಿ**
ಎಂ.ಎ., ಪಿಎಚ್.ಡಿ., ಡಿ.ಲಿಟ್.,
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಕನ್ನಡ ವಿಭಾಗ
ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ.

ರಚನೆ ಮತ್ತು ವಿನ್ಯಾಸ
**ತರು ಮೀಡಿಯಾ (ಪ್ರೈ) ಲಿ.,**
ನಂ: 188, ನೆಲ ಮಹಡಿ
14ನೇ ಅಡ್ಡರಸ್ತೆ ಜಂಕ್ಷನ್
ಡಿಫೆನ್ಸ್ ಕಾಲನಿ,
ಈಕ್ಕಾಟ್ಟು ತಾಂಗಲ್,
ಚೆನ್ನೈ 600 032.



ಈ ಸಂಚಿಕೆಯಲ್ಲಿರುವ ಯಾವುದೇ ಭಾಗವನ್ನಾಗಲೀ ವಿಷಯಗಳನ್ನಾಗಲೀ ಸಂಪಾದಕರ ಲಿಖಿತ ಪೂರ್ವ ಅನುಮತಿ ಪಡೆಯದೆ ಮರುಪ್ರಕಟಣೆ ಮಾಡುವುದಾಗಲೀ, ಅಂತರ್‌ಜಾಲ ತಾಣಗಳಲ್ಲಿ ಪುನರ್‌ದಾಖಲಿಸುವುದಾಗಲೀ ಮಾಹಿತಿ ಹಕ್ಕು ಕಾನೂನು ಬಾಹಿರ ಪ್ರಕ್ರಿಯೆಯಾಗಿರುತ್ತದೆ.



Published by
K.R. NAGARAJAN,
Published from
10, Sengunthapuram, Mangalam Road,
TIRUPUR - 641 604. | Ph: 0421-4304106


# ಮರೆಯಬಾರದ ಉದಾರತೆಗಳು!




'ಇತರರಿಗೆ ಮಾಡಿದ ಸಹಾಯವನ್ನು ನೆನಪಿನಲ್ಲಿಟ್ಟುಕೊಳ್ಳಬೇಡಿ. ಆದರೆ ಇತರರಿಂದ ಪಡೆದುಕೊಂಡ ಸಹಾಯವನ್ನು ಎಂದಿಗೂ ಮರೆಯಬೇಡಿ' ಎಂಬ ಒಂದು ನಾಣ್ಣುಡಿ ಇದೆ. ನೈಸರ್ಗಿಕವಾಗಿ ನಮಗೆ ದೊರೆತಿರುವ ಹಲವು ಉಡುಗೊರೆಗಳ ಮಹತ್ವವನ್ನು ತುಂಬಾ ಜನ ಅರ್ಥ ಮಾಡಿಕೊಳ್ಳುವುದೇ ಇಲ್ಲ.

- ಬೆಳಿಗ್ಗೆ ಹಲ್ಲುಜ್ಜಿದ ಕೂಡಲೇ ನಿಮಗೆ ಬಿಸಿ ಕಾಫಿ, ಟೀ ಅಥವಾ ಹಾಲು ಸಿಗುತ್ತದೆಯೇ? ಬೆಳಿಗ್ಗೆ ತಿನ್ನಲು ಆಹಾರ ಸಿಗುತ್ತದೆಯೇ? ಅನೇಕ ಜನರಿಗೆ ಈ ಅದೃಷ್ಟ ಇರುವುದಿಲ್ಲ.
- ನಿಮಗೆ ದುಡಿಯಲು ಯಾವುದೋ ಒಂದು ಕೆಲಸವಿದೆಯೇ? ನಮ್ಮ ದೇಶದಲ್ಲಿ ಅನೇಕ ಜನರು ಉದ್ಯೋಗವನ್ನು ಹುಡುಕುತ್ತಾ ಅಲೆದಾಡುತ್ತಿದ್ದಾರೆ.
- ನಿಮಗೆ ಪ್ರೀತಿಯ ಕುಟುಂಬವಿದೆಯೇ? ಕೆಲವರಿಗೆ ಅಂತಹ ಕುಟುಂಬ ಅಥವಾ ಪ್ರೀತಿಯ ಸಂಬಂಧಗಳು ಇರುವುದಿಲ್ಲ.
- ನಿಮಗೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಮನೆ ಇದೆಯೇ? ಅನೇಕ ಜನರು ಉಳಿದುಕೊಳ್ಳಲು ವಸತಿಯಿಲ್ಲದೆ ಬೀದಿಗಳಲ್ಲಿ ವಾಸಿಸುತ್ತಿದ್ದಾರೆ.
- ನಿಮ್ಮ ಅಂದವನ್ನು ಹೆಚ್ಚಿಸಲು ಬೇಕಾದ ಬಟ್ಟೆಗಳಿಂದ ಹಿಡಿದು ಧರಿಸಲು ಶೂಗಳವರೆಗೆ ಎಲ್ಲವೂ ನಿಮ್ಮ ಬಳಿ ಇದೆಯೇ? ಅನೇಕ ಜನರ ಬಳಿ ಅವು ಇರುವುದಿಲ್ಲ. ಇನ್ನು ಕೆಲವರಿಗೆ ಶೂ ಧರಿಸಲು ಪಾದಗಳೇ ಇರುವುದಿಲ್ಲ.
- ನೀವು ಸ್ಪಷ್ಟವಾಗಿ ನೋಡಲು, ಓದಲು ಮತ್ತು ಮಾತನಾಡಲು ಸಾಧ್ಯವೇ? ನಿಮ್ಮ ತೋಳುಗಳನ್ನು ಮತ್ತು ಕಾಲುಗಳನ್ನು ಸರಾಗವಾಗಿ ಚಲಿಸಲು, ನಡೆಯಲು ಮತ್ತು ಓಡಲು ನಿಮ್ಮಿಂದ ಸಾಧ್ಯವೇ? ಈ ಆರೋಗ್ಯವು ಅನೇಕ ಜನರಿಗೆ ಲಭ್ಯವಿರುವುದಿಲ್ಲ.
- ನೀವು ಅಸ್ವಸ್ಥರಾಗಿದ್ದರೆ, ನೀವು ತಕ್ಷಣ ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗಿ ಗುಣಮುಖರಾಗುವ ಅವಕಾಶ ನಿಮಗಿದೆಯೇ? ಪ್ರಪಂಚದಾದ್ಯಂತ ಅನೇಕ ದೇಶಗಳಲ್ಲಿ ಅನೇಕರಿಗೆ ಇದು ಲಭ್ಯವಿಲ್ಲ.
- ಸ್ನೇಹಿತರು ಮತ್ತು ಸಂಬಂಧಿಕರೊಂದಿಗೆ ನಗಲು ಮತ್ತು ಆನಂದಿಸಲು ನಿಮಗೆ ಅವಕಾಶವಿದೆಯೇ? ಅನೇಕ ಜನರಿಗೆ ಈ ಎಲ್ಲಾ ಕೆಲಸಗಳನ್ನು ಮಾಡಲು ಅವಕಾಶವಿರುವುದಿಲ್ಲ.
- ನಿಮಗೆ ಶುದ್ಧ ನೀರು, ವಿದ್ಯುತ್ ಮತ್ತು ಸುರಕ್ಷಿತ ವಾತಾವರಣ ಲಭ್ಯವಿದೆಯೇ? ಯುದ್ಧಪೀಡಿತ ದೇಶಗಳಲ್ಲಿ ಜನಿಸಿದ ಜನರು ಎಷ್ಟೇ ಕೋಟಿ ಖರ್ಚು ಮಾಡಿದರೂ ಪಡೆಯಲು ಸಾಧ್ಯವಾಗದ ಸೌಲಭ್ಯಗಳು ಇವು.
- ನಿಮಗೆ ಸಾರಿಗೆ, ಸೆಲ್ ಫೋನ್ ಮತ್ತು ಇಂಟರ್ನೆಟ್ ಸೌಲಭ್ಯವಿದೆಯೇ? ಪರ್ವತ ಪ್ರದೇಶಗಳು ಮತ್ತು ಹಳ್ಳಿಗಳಲ್ಲಿರುವ ಅನೇಕ ಜನರಿಗೆ ಇನ್ನೂ ಇವುಗಳ ಪರಿಚಯವೇ ಇಲ್ಲ.
- ನಿಮ್ಮ ಆಲೋಚನೆಗಳನ್ನು ಧೈರ್ಯದಿಂದ ವ್ಯಕ್ತಪಡಿಸಲು ನಿಮಗೆ ಸ್ವಾತಂತ್ರ್ಯವಿದೆಯೇ? ನಿಮ್ಮ ಜೀವನವನ್ನು ನೀವು ಬಯಸಿದ ರೀತಿಯಲ್ಲಿ ಬದುಕಲು ನಿಮಗೆ ಅವಕಾಶವಿದೆಯೇ? ಜಗತ್ತಿನ ಲಕ್ಷಾಂತರ ಜನರಿಗೆ ಇದು ಇಲ್ಲ.
- ನೀವು ಪ್ರತಿದಿನ ಬೆಳಿಗ್ಗೆ ಎದ್ದು ಇಂದು ಮಾಡಬೇಕಾದ ಕೆಲಸಗಳ ಬಗ್ಗೆ ಯೋಚಿಸುತ್ತೀರಾ? ಅನೇಕ ಜನರಿಗೆ ಮಾಡಲು ಏನೂ ಕೆಲಸ ಇರುವುದಿಲ್ಲ. ಇನ್ನು ಕೆಲವರು ಅಂದು ಬೆಳಿಗ್ಗೆ ಏಳುವುದೇ ಇಲ್ಲ.

ಈ ಪಟ್ಟಿ ಮುಂದುವರಿಯುತ್ತದೆ ಮತ್ತು ನಾವು ಜೀವನವನ್ನು ಸಕಾರಾತ್ಮಕವಾಗಿ ನೋಡಿದರೆ, ಕೃತಜ್ಞರಾಗಿರಬೇಕಾದ ಇಂತಹ ವಿಷಯಗಳ ದೀರ್ಘ ಪಟ್ಟಿ ಇರುತ್ತದೆ. ನಮ್ಮ ಹುಡುಕಾಟವು ದೀರ್ಘವಾಗಿರಬಹುದು. ಆದರೆ ನಮಗೆ ದೊರಕಿರುವ ಎಲ್ಲದಕ್ಕೂ ಕೃತಜ್ಞತೆಯಿಂದ ಇದ್ದುಕೊಂಡೇ ನಮ್ಮ ಹುಡುಕಾಟವನ್ನು ಮುಂದುವರೆಸೋಣ! ●


RAMRAJ
CULTURE CLUB®
MATCHING DHOTIS • SHIRTS
Perfect Match
For Every Occasion


PANCHAA™
HONEST HAND DHOTIS
From Odisha
From the house of
RAMRAJ©


LINEN PARK®
SHIRTS • TROUSERS • FABRICS
by RAMRAJ
UP CLOSE
FINE WEAVE
TEXTURE THAT SPEAKS


RAMYYAM®
SAREES • KURTIS
From the house of
RAMRAJ

RAMRAJ
ಕಾಟನ್
ಭಾರತೀಯ ಸಂಸ್ಕೃತಿ

ನಿಮ್ಮ ಮನೆಗೇ ಬರಬೇಕೇ?

# ಬಿಳುಪು

## ಚಂದಾದಾರರಾಗಿ!



'ಉನ್ನತವಾಧ ಭಾವನೆಗಳು ಈ ಜಗತ್ತಿನಾದ್ಯಂತ ಹೋಗಿ ಸೇರಬೇಕು' ಎನ್ನುವ ಉನ್ನತವಾದ ದೃಷ್ಟಿಯಿಂದ ಮಹತ್ವಪೂರ್ಣವಾದ ಲೇಖನಗಳನ್ನು ನಿರಂತರವಾಗಿ ಪ್ರಕಟಿಸುತ್ತಿದೆ 'ಬಿಳುಪು' ಮಾಸಿಕ ಸಂಚಿಕೆ. ಈ ತಿಂಗಳ ವಿಶೇಷ ಸಂಚಿಕೆಯು ಪ್ರತಿಯೊಂದು ಕುಟುಂಬದಲ್ಲೂ ರಕ್ಷಿಸಿಡಬೇಕಾದ ಬೊಕ್ಕಸವಾಗಿದೆ.

**ವಾರ್ಷಿಕ ಚಂದಾ ರೂ. 200**
**ದ್ವೈವಾರ್ಷಿಕ ಚಂದಾ ರೂ. 380**

ಚೆಕ್/ಡಿಡಿ ಮೂಲಕ ಹಣ ಸಂದಾಯ ಮಾಡಬಹುದು. **VENMAII** ಎನ್ನುವ ಹೆಸರಿನಲ್ಲಿ ಚೆಕ್/ಡಿಡಿ ಕಳಿಸಬಹುದು. ಹಿಂಭಾಗದಲ್ಲಿ ನಿಮ್ಮ ಹೆಸರು, ವಿಳಾಸ ಬರೆದಿರಬೇಕು.

ಇಲ್ಲವೇ

VENMAII ಬ್ಯಾಂಕ್ ಖಾತೆ (A/C No:1809135000000299 Karur Vysya Bank, Tirupur SR Nagar Branch - IFSC: KVBL0001809) ಗೆ ಹಣ ಸಂದಾಯ ಮಾಡಿ, ಅದರ ಸ್ವೀಕೃತಿ ಪತ್ರದ ನಕಲು ಪ್ರತಿಯನ್ನು ಕಳಿಸಿ ಕೊಡಬೇಕು.

- ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.
- ಎಲ್ಲಾ ರಾಮ್‌ರಾಜ್ ಷೋರೂಮ್‌ಗಳಲ್ಲೂ ಚಂದಾ ಕಟ್ಟಬಹುದು.

**ವಿಳಾಸ :** Bilupu
Ramraj V tower
10, Sengundapuram, Mangalam Road
Thirupur 641604.
Ph. 0421-4304106, 9842274137
email: venmaii@ramrajcotton.net

ಚಂದಾ ಸಲ್ಲಿಸಲೂ, ಒಟ್ಟಾಗಿ 'ಬಿಳುಪು' ಸಂಚಿಕೆಗಳನ್ನು ಕೊಳ್ಳಲೂ ಈ ಸಂಖ್ಯೆಯನ್ನು ಸಂಪರ್ಕಿಸಿ.

**ಪೋನ್ : 0421-4304106, 9842274137.**

## ಒಂದೇ ನಿಮಿಷದಲ್ಲಿ ಬಿಳುಪು ಚಂದಾದಾರರಾಗಬಹುದು!

ನಿಮ್ಮ ಚಂದಾ ಹಣವನ್ನು PhonePe G Pay Net transfer ಮೂಲಕವೂ ಸಲ್ಲಿಸಬಹುದು.

UPI ಪರಿವರ್ತನೆಯ ಮೂಲಕವೂ ಮೊಬೈಲ್ ಪೋನ್ ನಲ್ಲಿ ಬಿಳುಪು ಸಂಚಿಕೆಯ ಬ್ಯಾಂಕ್ ಖಾತೆಗೆ ಚಂದಾ ಹಣವನ್ನು ಸಲ್ಲಿಸಬಹುದು. ಬಿಳುಪು UPI id: kvbupiqr.75626@kvb

Bharat QR code ಅನುಕೂಲವಿರುವ ಮೊಬೈಲ್ ಬ್ಯಾಂಕಿಂಗ್ ಆಪ್ ಇರುವವರು, ಅದರಲ್ಲಿ ಇಲ್ಲಿರುವ ಬಿಳುಪು ಖಾತೆಯ QR code ಅನ್ನು ಸ್ಕ್ಯಾನ್ ಮಾಡಿ ಚಂದಾ ಸಲ್ಲಿಸಬಹುದು.

ಹಣ ಸಂದಾಯ ಮಾಡಿರುವುದಕ್ಕೆ ಸಂಬಂಧಿಸಿದ ಬ್ಯಾಂಕಿನ ಮಾಹಿತಿಯನ್ನು Forward ಮಾಡಿರಿ.

ಜೊತೆಗೆ ನಿಮ್ಮ ಪೂರ್ಣ ವಿಳಾಸವನ್ನು ದೂರವಾಣಿ ಸಂಖ್ಯೆಯ ಜೊತೆಗೆ ವಾಟ್ಸ್ ಆಪ್ ಮಾಡಿ. ದೂರವಾಣಿ ಸಂಖ್ಯೆ 98422 74137.

**ಬ್ಯಾಂಕ್ ಖಾತೆಯ ವಿವರ Venmaii**
**A/C No: 1809135000000299**
**Karur Vysya Bank,Tirupur SR Nagar Branch**
**IFSC Code: KVBL0001809.**



## ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ

(ಆರನೇ ತರಗತಿಯ ನಂತರ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಈ ರಿಯಾಯಿತಿ ಲಭ್ಯ. ಚಂದಾ ಹಣ ಪಾವತಿಸುವಾಗ, ವಿದ್ಯಾರ್ಥಿಗಳು ತಮ್ಮ ಗುರುತಿನ ಚೀಟಿಯ ಪ್ರತಿಯನ್ನು ಲಗತ್ತಿಸಬೇಕು).

| ವಾರ್ಷಿಕ ಚಂದಾ | ದ್ವೈವಾರ್ಷಿಕ ಚಂದಾ |
|---|---|
| ರೂ.~~200~~ ರೂ.125 ಮಾತ್ರ | ರೂ.~~380~~ ರೂ.250 ಮಾತ್ರ |



## ಹಿರಿಯ ನಾಗರಿಕರಿಗೆ ವಿಶೇಷ ರಿಯಾಯಿತಿ

(60 ವರ್ಷಗಳಿಗಿಂತ ಮೇಲ್ಪಟ್ಟವರು ಮಾತ್ರ ಈ ರಿಯಾಯಿತಿಯನ್ನು ಪಡೆದುಕೊಳ್ಳಬಹುದು. ತಾವು ಹುಟ್ಟಿದ ದಿನಾಂಕದ ಮಾಹಿತಿ ಇರುವ ಆಧಾರ್ ಕಾರ್ಡ್‌ನ ನಕಲನ್ನು ಇದರೊಂದಿಗೆ ಲಗತ್ತಿಸಬೇಕು).

| ವಾರ್ಷಿಕ ಚಂದಾ | ದ್ವೈವಾರ್ಷಿಕ ಚಂದಾ |
|---|---|
| ರೂ.~~200~~ ರೂ.125 ಮಾತ್ರ | ರೂ.~~380~~ ರೂ.250 ಮಾತ್ರ |

**ರಾಮ್‌ರಾಜ್ ಷೋರೂಂಗಳಲ್ಲಿ ರೂ. 10,000ಕ್ಕಿಂತ ಹೆಚ್ಚಾಗಿ ಕೊಳ್ಳುವವರಿಗೆ ಒಂದು ವರ್ಷದ ಚಂದಾ ಉಚಿತ.**

## ನಾವೂ ಕೊಡುತ್ತೇವೆ!



'ಮಾರ್ಲಿ ಬ್ಯಾಕ್' ಒಂಬತ್ತು ವರ್ಷಗಳ ಪುಟ್ಟ ಹುಡುಗಿ. ಅವಳಿಗೆ ಅಪರೂಪದ ಒಂದು ರೀತಿಯ ಕ್ಯಾನ್ಸರ್ ಇರುವುದು ಪತ್ತೆಯಾಯಿತು. ಅದಕ್ಕಾಗಿ ಅವಳು ಕಿಮೊಥೆರಪಿಗೆ ಒಳಗಾಗಿದ್ದಳು, ಇದರಿಂದಾಗಿ ಅವಳ ಕೂದಲನ್ನು ಸಂಪೂರ್ಣವಾಗಿ ಬೋಳಿಸಬೇಕಾಯಿತು. ಚಿಕಿತ್ಸೆಯ ನಂತರ ಶಾಲೆಗೆ ಹೋಗುವ ದಿನ ಬಂದಾಗ ಅವಳು ತುಂಬಾ ಚಿಂತಿತಳಾಗಿದ್ದಳು. ತಲೆಯಲ್ಲಿ ಕೂದಲು ಇಲ್ಲದೆ ಶಾಲೆಗೆ ಹೋದರೆ ತನ್ನ ಸಹಪಾಠಿಗಳು ತನ್ನನ್ನು ಕೀಟಲೆ ಮಾಡುತ್ತಾರೆ ಎಂದು ಅವಳು ಯೋಚಿಸುತ್ತಿದ್ದಳು.

ಆದರೆ ಶಾಲೆಯಲ್ಲಿ ಅವಳನ್ನು ಸ್ವಾಗತಿಸಿದ ಅವಳ ಗೆಳತಿ 'ಕ್ಯಾಮರೂನ್' ಕೂಡ ತನ್ನ ತಲೆಯನ್ನು ಪೂರ್ಣವಾಗಿ ಬೋಳಿಸಿಕೊಂಡಿದ್ದಳು. ಅವಳ ತಲೆಯಲ್ಲಿ ಕೂಡ ಕೂದಲು ಇರಲಿಲ್ಲ. ಅವಳು ತನ್ನ ಗೆಳತಿಗಾಗಿ ತನ್ನ ತಲೆಯನ್ನು ಬೋಳಿಸಿಕೊಂಡು ಬಂದಿದ್ದಳು. ಅದರ ನಂತರ ಅವಳ ತರಗತಿಯಲ್ಲಿದ್ದ 80 ವಿದ್ಯಾರ್ಥಿಗಳೂ ಮತ್ತು ಶಾಲೆಯ ಕೆಲವು ಶಿಕ್ಷಕರೂ ಕೂಡ ಮಾರ್ಲಿ ಕೀಳರಿಮೆಯನ್ನು ಅನುಭವಿಸಬಾರದು ಎಂಬ ಕಾರಣಕ್ಕಾಗಿ ತಮ್ಮ ತಲೆಯನ್ನು ಬೋಳಿಸಿಕೊಂಡರು. ಅವರು ಅದನ್ನು ಒಂದು ಕಾರ್ಯಕ್ರಮವಾಗಿಯೇ ಆಯೋಜಿಸಿ, ಸುಮಾರು 20 ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿ ಅವಳ ಕ್ಯಾನ್ಸರ್ ಚಿಕಿತ್ಸೆಗಾಗಿ ನೀಡಿದರು.





## ಭಯವಿಲ್ಲವಾದರೆ ನೀವು ಬನ್ನಿ!

ನಿತ್ಯಾ ಕೆಲಸದ ನಿಮಿತ್ತ ಬೇರೆ ಊರಿಗೆ ಹೋಗಿ ರೈಲಿನಲ್ಲಿ ಪ್ರಯಾಣ ಮಾಡಿ ಮನೆಗೆ ಹಿಂತಿರುಗಿ ಬರುತ್ತಿದ್ದಳು. ರೈಲು ಬೆಳಗಿನ ಜಾವ 3 ಗಂಟೆಗೆ ಅವಳ ನಿಲ್ದಾಣಕ್ಕೆ ಬಂದು ತಲುಪುತ್ತಿತ್ತು.ಅವಳು ಒಬ್ಬಂಟಿಯಾಗಿಯೇ ಪ್ರಯಾಣ ಮಾಡುತ್ತಿದ್ದಳು. ತನ್ನ ಸೆಲ್ ಫೋನ್‌ನಲ್ಲಿ ಅಲಾರಾಂ ಇಟ್ಟು–ಕೊಂಡು ಮಲಗಿದ್ದರೂ, ಫೋನ್ ಬ್ಯಾಟರಿ ಖಾಲಿಯಾಗಿ ಆಫ್ ಆಗಿ ಹೋಗಿದ್ದುದರಿಂದ ತನ್ನ ನಿಲ್ದಾಣ ಬಂದದ್ದು ಅವಳ ಗಮನಕ್ಕೆ ಬರಲಿಲ್ಲ. ಅವಳು ತಡವಾಗಿ ಎಚ್ಚರಗೊಂಡು ನೋಡುವಾಗ ರೈಲು ಮುಂದಿನ ನಿಲ್ದಾಣ ತಲುಪಿತ್ತು. ಹಾಗಾಗಿ ಅವಳು ಅಲ್ಲಿ ಇಳಿಯಬೇಕಾಯಿತು.



'ಅಪ್ಪ ಆ ನಿಲ್ದಾಣದಲ್ಲಿ ನನಗಾಗಿ ಕಾಯುತ್ತಿರುತ್ತಾರೆ.ನನ್ನನ್ನು ಕಾಣದೆ ಅವರು ಗಾಬರಿಯಾಗಿರಬಹುದು' ಎಂದು ಅವಳು ಯೋಚಿಸಿದಳು. ದುರದೃಷ್ಟವಶಾತ್, ಆ ಚಿಕ್ಕ ಸ್ಟೇಷನ್‌ನಲ್ಲಿ ಆ ಅಕಾಲದಲ್ಲಿ ಹೆಚ್ಚು ಪ್ರಯಾಣಿಕರೂ ಇರಲಿಲ್ಲ. ಟ್ಯಾಕ್ಸಿ ಬುಕ್ ಮಾಡಲು ಅವಳ ಫೋನ್‌ನಲ್ಲಿ ಚಾರ್ಜ್ ಬೇರೆ ಇರಲಿಲ್ಲ. ಹೊರಗೆ ಯಾವುದೇ ಆಟೋಗಳೂ ನಿಂತಿರಲಿಲ್ಲ. ಗೇಟ್‌ನಲ್ಲಿ ಒಂದೇ ಒಂದು ಕಾರು ಮಾತ್ರ ನಿಂತಿತ್ತು. ಆ ಕಾರಿನಲ್ಲಿದ್ದ ಮಧ್ಯವಯಸ್ಕ ವ್ಯಕ್ತಿ ಅವಳು ಪರಿತಪಿಸುತ್ತಿರುವುದನ್ನು ಕಂಡು ತನ್ನ ಕಾರಿನಿಂದ ಇಳಿದು ಬಂದು ಅವಳ ಬಳಿ ವಿಚಾರಿಸಿದರು. ಅವರ ಬಳಿ ಮಾತನಾಡಲು ಅವಳಿಗೆ ಭಯ ಮತ್ತು ಆತಂಕ. ಕಳ್ಳರ ಗುಂಪಿನವರೋ, ಅಪಹರಣಕಾರರೋ, ಕೊಲೆಗಾರರ ಗುಂಪಿಗೆ ಸೇರಿದವರೋ ಎಂದು ಅವಳಿಗೆ ಭಯ. ಮಾತನಾಡಲು ಅವಳು ಹಿಂಜರಿದಳು. ಆದರೆ ಕಡೆಗೆ ಬೇರೆ ದಾರಿಯಿಲ್ಲದೆ ಏನಾಯಿತು ಎಂಬುದನ್ನು ಅವರಿಗೆ ವಿವರಿಸಿದಳು.

ತನ್ನ ಫೋನನ್ನು ಅವಳಿಗೆ ಕೊಟ್ಟ ಆ ವ್ಯಕ್ತಿ, "ಭಯಪಡಬೇಡ, ನಾನು ನನ್ನ ಹೆಂಡತಿಯನ್ನು ಈ ರೈಲಿಗೆ ಹತ್ತಿಸಲು ಬಂದಿದ್ದೆ. ನೀನು ಇಳಿಯಬೇಕಾದ, ನಿನ್ನ ತಂದೆ ನಿನಗಾಗಿ ಕಾದಿರುವ ನಿಲ್ದಾಣ ಇಲ್ಲಿಂದ ಕೇವಲ 10 ಕಿಲೋಮೀಟರ್ ದೂರದಲ್ಲಿದೆ. ನಾವು ಇಲ್ಲಿಂದ ಕಾಲು ಗಂಟೆಯಲ್ಲಿ ಅಲ್ಲಿಗೆ ಹೋಗಬಹುದು. ನಿನಗೆ ಭಯವಾಗುತ್ತಿದ್ದರೆ, ನಿನ್ನ ತಂದೆಯ ಜೊತೆ ಫೋನ್‌ನಲ್ಲಿ ಮಾತನಾಡಿ ವಿಷಯವನ್ನೆಲ್ಲ ತಿಳಿಸು. ನಾನು ನಿನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಬಿಡುತ್ತೇನೆ" ಎಂದು ಹೇಳಿ ಅವಳನ್ನು ಕರೆದುಕೊಂಡು, ಅವಳ ತಂದೆಯ ಬಳಿ ಬಿಟ್ಟ ಮೇಲೆ, "ಸುರಕ್ಷಿತವಾಗಿ ಮನೆಗೆ ಹೋಗು" ಎಂದು ಹೇಳಿ ಅಲ್ಲಿಂದ ಮರುಕ್ಷಣವೇ ಹೊರಟುಹೋದರು!



## ಇದು ಅವರು ನೀಡಿದ ಬದುಕು!

ಒಬ್ಬ ಯುವಕ ತನ್ನ ಅಜ್ಜನನ್ನು ನೋಡಲು ಯಾವಾಗಲಾದರೊಮ್ಮೆ ಬಂದು ಹೋಗುತ್ತಿದ್ದುದನ್ನು ಪ್ರಿಯಾ ಗಮನಿಸಿದಳು. ಅವಳ ತಂದೆ ತಾಯಿಗಳ ಜೊತೆ ಕೂಡ ಅವನು ಚೆನ್ನಾಗಿ ಮಾತನಾಡುತ್ತಿದ್ದ. ಅವನು ತಾನು ಬಂದಾಗಲೆಲ್ಲಾ, ಅವರಿಗೂ ಮತ್ತು ಮನೆಯಲ್ಲಿದ್ದ ಮಕ್ಕಳಿಗೂ ಏನನ್ನಾದರೂ ಖರೀದಿಸಿ ತರುತ್ತಿದ್ದ. ಯಾವಾಗ ಬಂದರೂ ತನ್ನ ಅಜ್ಜನೊಂದಿಗೆ ಬಹಳ ಹೊತ್ತು ಕುಳಿತು ಮಾತನಾಡಿಕೊಂಡಿದ್ದು ನಂತರ ಹೋಗುತ್ತಿದ್ದ. ಇದನ್ನು ನೋಡುತ್ತಿದ್ದ ಪ್ರಿಯಾ, "ಅಜ್ಜನಿಗೆ ಈ ವಯಸ್ಸಿನಲ್ಲಿ ಕೂಡ ಒಬ್ಬ ಯುವ ಸ್ನೇಹಿತನಿದ್ದಾನೆ" ಎಂದು ಕೀಟಲೆ ಮಾಡುತ್ತಿದ್ದಳು. ನಂತರವಷ್ಟೇ ಅವಳಿಗೆ ಸತ್ಯ ತಿಳಿದದ್ದು!

ಅಜ್ಜ ಈ ಮೊದಲು ರೈಲು ಎಂಜಿನ್ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಒಂದು ದಿನ, ತಮ್ಮ ರೈಲಿನ ಮುಂದೆ ಹಾರಿ ಆತ್ಮಹತ್ಯೆಗೆ ಯತ್ನಿಸಿದ್ದ ಈ ಯುವಕನನ್ನು ಅವರು ರಕ್ಷಿಸಿದ್ದರು. ಪರೀಕ್ಷೆಯಲ್ಲಿ ಅನುತ್ತೀರ್ಣನಾದುದರಿಂದ ಹತಾಶೆಯಲ್ಲಿದ್ದ ಅವನಿಗೆ ಸಾಂತ್ವನ ಹೇಳಿ, ಇಡೀ ದಿನ ಅವನಿಗೆ ಭರವಸೆ ನೀಡಿದರು. ಅದರ ನಂತರ, ಅವನು ಚೆನ್ನಾಗಿ ಓದಿ, ಒಳ್ಳೆಯ ಕೆಲಸ ಕೂಡ ಪಡೆದು ಕೊಂಡ. ಇಂದು ಅವನು ಜೀವನದಲ್ಲಿ ಮುಂದೆ ಬಂದಿದ್ದಾನೆ. "ಇದು ಅವರು ನನಗೆ ಕೊಟ್ಟ ಜೀವನ" ಎಂದು ಅವನು ಹೇಳುತ್ತಾನೆ ಮತ್ತು ಆಗಾಗ್ಗೆ ತನ್ನ ಅಜ್ಜನನ್ನು ಭೇಟಿ ಮಾಡಿ ಹೀಗೆ ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಾನೆ. ಈ ವಿಷಯ ತಿಳಿದ ಮೇಲೆ ಪ್ರಿಯಾಳಿಗೆ ಅಜ್ಜನ ಮೇಲಿನ ಗೌರವ ಹೆಚ್ಚಾಯಿತು.



## ಎಷ್ಟು ಜನರಿಗೆ ನೀಡಬಹುದು!

ವೆಂಕಟೇಶ್ ಒಮ್ಮೆ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದರು. ಆ ಸಮಯದಲ್ಲಿ, ರೇಡಿಯೋದಲ್ಲಿ ಒಂದು ಸ್ಪರ್ಧೆಯ ಘೋಷಣೆ ಬಂದಿತು. ಸ್ಪರ್ಧೆಯಲ್ಲಿ ಗೆದ್ದವರಿಗೆ 'ಒಂದು ಕೋಟಿ ರೂಪಾಯಿ ಬಹುಮಾನ' ಎಂದು ಹೇಳಿದಾಗ ವೆಂಕಟೇಶ್ ಅವರ ಪಕ್ಕದಲ್ಲಿ ಕುಳಿತಿದ್ದ ಕುರುಡ ನಕ್ಕ. "ನೀನೇಕೆ ನಗುತ್ತಿದ್ದೀಯಾ?" ಎಂದು ಇವರು ಅವನನ್ನು ಕೇಳಿದರು. "ನೀವು ಆ ಘೋಷಣೆಯನ್ನು ಕೇಳಿದಿರಾ? ಒಂದು ಕೋಟಿ ರೂಪಾಯಿ ಬಹುಮಾನ. ನೀವು ಆ ಬಹುಮಾನವನ್ನು ಗೆದ್ದರೆ, ನೀವು ನಿಮ್ಮ ಎಷ್ಟು ಜನ ಸ್ನೇಹಿತರಿಗೆ ಅಗತ್ಯವಾಗಿ ಬೇಕಾದುದನ್ನೆಲ್ಲ ಖರೀದಿಸಿ ಉಡುಗೊರೆಯಾಗಿ ನೀಡಬಹುದು ಎಂಬುದು ನಿಮಗೆ ತಿಳಿದಿದೆಯೇ? ನಾನು ಅದನ್ನು ಸಾವಿರ ಜನರಿಗೆ ನೀಡುತ್ತೇನೆ" ಎಂದ.

ಇದನ್ನು ಕೇಳಿ ವೆಂಕಟೇಶ್ ದಿಗ್ಭ್ರಮೆಗೊಂಡರು. ಬಹುಮಾನ ಸಿಕ್ಕರೆ ಮನೆ ಕೊಳ್ಳುತ್ತೇನೆ, ಕಾರು ಕೊಳ್ಳುತ್ತೇನೆ, ಆಭರಣ ಕೊಳ್ಳುತ್ತೇನೆ ಎಂದು ಹೇಳುವವರ ನಡುವೆ ಈ ವ್ಯಕ್ತಿ ಹೀಗೆ ಯೋಚಿಸುತ್ತಿರುವುದು ಅವನಿಗೆ ಆಶ್ಚರ್ಯ ತಂದಿತು. ದೃಷ್ಟಿ ಮರಳಿ ಪಡೆಯಲು ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುತ್ತೇನೆ ಎಂದು ಕೂಡ ಹೇಳದೆ, ತನ್ನ ಸ್ನೇಹಿತರ ಬಗ್ಗೆ ಯೋಚಿಸುತ್ತಿರುವ ಈ ವ್ಯಕ್ತಿಯ ಔದಾರ್ಯವನ್ನು ನೋಡಿ ಅವನು ಆಶ್ಚರ್ಯಚಕಿತನಾದ!.

## ಒಂದೇ ರಕ್ತ!

ಅನಿತಾ ಐದು ಜನ ಸಹೋದರರೊಂದಿಗೆ ಬೆಳೆದವಳು. ಮಧ್ಯಮ ವರ್ಗದ ಕುಟುಂಬದಿಂದ ಬಂದಿದ್ದರೂ, ಅನಿತಾ ಕೇಳಿದ್ದೆಲ್ಲವೂ ಅವಳಿಗೆ ಸಿಕ್ಕಿತು. ಅವಳು ತನ್ನ ಸಹೋದರರಿಗಿಂತ ಉತ್ತಮ ಶಾಲೆಯಲ್ಲಿ ಓದಿದಳು. ಅವರು ಅವಳ ಬಟ್ಟೆಗಳನ್ನು ತಮ್ಮದಕ್ಕಿಂತ ಹೆಚ್ಚಿನ ಬೆಲೆಗೆ ಖರೀದಿಸಿದರು. ಎಲ್ಲರೂ ಮನೆಯಲ್ಲಿ ಎಲ್ಲೆಲ್ಲೋ ಮಲಗಿದರೂ ಅವಳಿಗೆ ಮಾತ್ರ ಪ್ರತ್ಯೇಕ ಕೋಣೆ ನೀಡಲಾಯಿತು. ಅವಳು ತನ್ನ ಸಹೋದರರೊಂದಿಗೆ ಸಣ್ಣ ಜಗಳವಾಡಿದಾಗಲೂ, ಅವಳ ಪೋಷಕರು ಯಾವಾಗಲೂ ಅವಳ ಪರವಾಗಿ ನಿಂತು ಅವಳನ್ನು ಬೆಂಬಲಿಸುತ್ತಿದ್ದರು. "ಅವಳಿಗಾಗಿ ನೀವು ಬಿಟ್ಟುಕೊಡಬಾರದೇ?"ಎಂದು ಅವರು ಗಂಡು ಮಕ್ಕಳನ್ನು ಗದರಿಸುತ್ತಿದ್ದರು. ಅವಳ ಸಹೋದರರು ಸಹ ಅವಳನ್ನು ಪ್ರೀತಿಯಿಂದ ನೋಡಿ–ಕೊಂಡರು. ಅವರು ಎಂದಿಗೂ "ಅವಳಿಗೆ ಮಾತ್ರ ಎಲ್ಲವೂ ಏಕೆ ವಿಶೇಷವಾಗಿರುತ್ತದೆ?" ಎಂದು ಕೇಳಲಿಲ್ಲ.

ಅವಳು ಸ್ವಲ್ಪ ಬೆಳೆದ ಮೇಲೆ, ಒಂದು ದಿನ ಅವರ ಸಂಬಂಧಿಯೊಬ್ಬರು ಅವಳಿಗೆ ಮನೆಯವರೆಲ್ಲರೂ ಬಚ್ಚಿಟ್ಟಿದ್ದ ಒಂದು ಸತ್ಯವನ್ನು ಹೇಳಿಬಿಟ್ಟರು! ಅವಳನ್ನು ಆ ಕುಟುಂಬ ದತ್ತು ತೆಗೆದುಕೊಂಡಿದೆ! ಅವರೆಲ್ಲರೂ ತಮಗೆ ಒಬ್ಬ ಮಗಳು ಬೇಕೆಂದು ಬಯಸಿದ್ದರಿಂದ ಅವಳು ಪುಟ್ಟ ಮಗುವಾಗಿದ್ದಾಗಲೇ ಅವಳನ್ನು ದತ್ತು ತೆಗೆದುಕೊಂಡಿದ್ದರು. ಆ ಸತ್ಯ ಅವಳಿಗೆ ತಿಳಿಯಬಾರದು ಎಂಬ ಕಾರಣಕ್ಕಾಗಿ ಅವರು ತಮ್ಮ ಊರನ್ನು ಬಿಟ್ಟು ಬೇರೆ ದೂರದ ಊರಿನಲ್ಲಿ ಬಂದು ವಾಸಿಸುತ್ತಿದ್ದರು. ಈ ವಿಷಯ ಅವಳ ಸಹೋದರರಿಗೆ ತಿಳಿದಿದ್ದರೂ, ಯಾರೂ ಅವಳನ್ನು ಎಂದೂ ವಿಭಿನ್ನವಾಗಿ ನಡೆಸಿಕೊಂಡಿಲ್ಲ ಎಂಬುದನ್ನು ನೆನೆದು ಅವಳು ಕಣ್ಣೀರು ಸುರಿಸಿದಳು."ನೀನು ನಮ್ಮೊಂದಿಗೆ ಹುಟ್ಟದಿದ್ದರೂ, ನಮ್ಮದು ಒಂದೇ ರಕ್ತ" ಎಂದು ಅವರು ಅವಳಿಗೆ ಹೇಳಿದರು. ಅಷ್ಟು ಮಾತ್ರವಲ್ಲ ತಾವು ಇಷ್ಟು ದಿನ ಬಚ್ಚಿಟ್ಟಿದ್ದ ಸತ್ಯ ಈಗ ಅವಳಿಗೆ ತಿಳಿದು ಬಿಟ್ಟುದಕ್ಕಾಗಿ ಅವರು ತುಂಬಾ ವಿಷಾದಿಸಿದರು.



# ಲಕ್ಷ್ಮಿಯ ಹೆಜ್ಜೆ ಗುರುತುಗಳು!

ಅದು ತಿಂಗಳ ಕೊನೆಯ ದಿನ. ರಾತ್ರಿ ಎಂಟು ಗಂಟೆಯ ಸುಮಾರಿಗೆ, ಅಂಗಡಿ ಮುಚ್ಚುವ ಸಮಯದಲ್ಲಿ ಒಬ್ಬ ಯುವಕ ಶೂ ಅಂಗಡಿಗೆ ಬಂದ. ಅವನು ನೀಟಾಗಿ ಬಟ್ಟೆ ಧರಿಸಿದ್ದ ಮತ್ತು ಅವನ ಕಾಲಿನಲ್ಲಿ ಶೂಗಳಿದ್ದವು. "ನಿನಗೆ ಏನು ಬೇಕುತಮ್ಮಾ?" ಎಂದು ಅಂಗಡಿಯವನು ಕೇಳಿದ.

"ಅಣ್ಣ, ನಾನು ನನ್ನ ತಾಯಿಗಾಗಿ ಚಪ್ಪಲಿ ಖರೀದಿಸಲು ಬಂದಿದ್ದೇನೆ. ಚೆನ್ನಾಗಿ ಬಾಳಿಕೆ ಬರುವಂತಹ ಉತ್ತಮವಾದ ಚಪ್ಪಲಿಯನ್ನು ನೀಡಿ" ಎಂದು ಅವನು ಕೇಳಿದ.

"ಅಮ್ಮ ಬಂದಿದ್ದಾರೆಯೇ?"

"ಇಲ್ಲಣ್ಣ, ಅವರಿಗೆ ತಿಳಿಯದಂತೆ ನಾನು ಅವರಿಗೆ ಸರ್ಪ್ರೈಸ್ ಆಗಿ ಖರೀದಿಸುತ್ತಿದ್ದೇನೆ!"

"ಸರಿ, ನಿಮ್ಮ ಅಮ್ಮನ ಚಪ್ಪಲಿಯ ಸೈಜ್ ಎಷ್ಟು?"

ಅವನು ತನ್ನ ಪರ್ಸ್ ತೆರೆದು ಮಡಚಿಟ್ಟಿದ್ದ ಕಾಗದವನ್ನು ಹೊರತೆಗೆದ. ಅದರಲ್ಲಿ ತನ್ನ ತಾಯಿಯ ಪಾದಗಳ ನಿಖರವಾದ ಅಳತೆಯನ್ನು ಬರೆದಿದ್ದ.

"ತಮ್ಮಾ, ನಾನು ಕೇಳಿದ್ದು ಇದನ್ನಲ್ಲ. ಅವರ ಚಪ್ಪಲಿಯ ಸೈಜ್ ಎಷ್ಟು? ಅದನ್ನು ಹೇಳು!"

ಆ ಯುವಕ ಸ್ವಲ್ಪ ಹಿಂಜರಿದ. ನಂತರ ಅವನು ನಿಧಾನವಾಗಿ ಹೇಳಿದ, "ನಮ್ಮ ತಾಯಿ ಇದುವರೆಗೆ ಎಂದಿಗೂ ಚಪ್ಪಲಿ ಧರಿಸಿಯೇ ಇಲ್ಲ. ಆದ್ದರಿಂದ ಅವರ ಚಪ್ಪಲಿಯ ಸೈಜ್ ನನಗೆ ತಿಳಿಯದು!"

ಅಂಗಡಿಯವನು ದಿಗ್ಭ್ರಮೆಗೊಂಡ! "ನಿನ್ನ ತಾಯಿ ಏನು ಮಾಡುತ್ತಿದ್ದಾರೆ?" ಎಂದು ಕೇಳಿದ.

"ನನ್ನ ತಾಯಿ ಐದು ಮನೆಗಳಲ್ಲಿ ಮನೆಗೆಲಸ ಮಾಡುತ್ತಾರೆ. ಅವರು ತಾವು ಕೆಲಸ ಮಾಡುವ ಮನೆಗಳಲ್ಲಿ ಪಾತ್ರೆ ತೊಳೆಯುತ್ತಾರೆ, ಬಟ್ಟೆ ಒಗೆ-ಯುತ್ತಾರೆ ಮತ್ತು ಮನೆಯನ್ನು ಸ್ವಚ್ಛಗೊಳಿಸುತ್ತಾರೆ. ಅವರು ದುಡಿದ ಹಣದಿಂದ ನನ್ನನ್ನು ಬೆಳೆಸಿದರು ಮತ್ತು ಶಾಲೆಗೆ ಕಳುಹಿಸಿದರು. ನಾನು ಕೆಲಸಕ್ಕೆ ಸೇರಿಕೊಂಡೆ. ಇಂದು ನನ್ನ ಮೊದಲ ತಿಂಗಳ ಸಂಬಳವನ್ನು ಪಡೆದುಕೊಂಡೆ. ಅದಕ್ಕಾಗಿಯೇ ನಾನು ಇಲ್ಲಿಗೆ ಬಂದಿದ್ದೇನೆ. ನನ್ನ ತಾಯಿಗೆ ಒಳ್ಳೆಯ ಸೀರೆಯೂ ಇಲ್ಲ. ನಾನು ಅವರಿಗಾಗಿ ನಾಲ್ಕು ಸೀರೆಗಳನ್ನು ಖರೀದಿಸಿದ್ದೇನೆ. ಅವರು ಚಪ್ಪಲಿ ಇಲ್ಲದೆ ಕಷ್ಟ ಪಡುತ್ತಿದ್ದಾರೆ. ಆದ್ದರಿಂದ ನಾನು ಅವರಿಗೆ ತಿಳಿಯದಂತೆ ಅವುಗಳನ್ನು ಖರೀದಿಸಿ ತೆಗೆದುಕೊಂಡು ಹೋಗಿ ಕೊಡಬೇಕೆಂದು ಭಾವಿಸಿದೆ..." ಎಂದು ಅವನು ಹೇಳಿದ.

"ನಿನಗೆ ಎಷ್ಟು ಸಂಬಳ ಬರುತ್ತದೆ?"

"ನನಗೆ 20 ಸಾವಿರ ಸಿಗುತ್ತದೆ. ಕೊಠಡಿಯ ಬಾಡಿಗೆ, ಆಹಾರ ಮತ್ತು ಸಾರಿಗೆ ಇತ್ಯಾದಿಗಳಿಗೆ ತಿಂಗಳಿಗೆ ಹತ್ತು ಸಾವಿರ ವೆಚ್ಚವಾಗುತ್ತದೆ. ಉಳಿದದ್ದನ್ನು ನಾನು ತಂದಿದ್ದೇನೆ. ನನ್ನ ತಾಯಿ ಮತ್ತೆ ಕೆಲಸಕ್ಕೆ ಹೋಗದಂತೆ ನೋಡಿಕೊಳ್ಳಬೇಕು!" ಎಂದು ಅವನು ಹೇಳಿದ.

ನಂತರ ಅವನು ತನ್ನ ತಾಯಿಗಾಗಿ ಸಾವಿರ ರೂಪಾಯಿಗೆ ಒಂದು ಜೊತೆ ಸುಂದರವಾದ ಚಪ್ಪಲಿಗಳನ್ನು ಖರೀದಿಸಿದ. "ನಿನಗೆ ಇವು ದುಬಾರಿ ಎನ್ನಿಸುತ್ತದೆಯೇ? ಅಥವಾ ಪರವಾಗಿಲ್ಲವೇ?" ಎಂದು ಅಂಗಡಿಯವನು ಕೇಳಿದ. "ಪರವಾಗಿಲ್ಲ ಅಣ್ಣಾ! ಅಮ್ಮ ಅವುಗಳನ್ನು ಹಾಕಿಕೊಂಡಾಗ ಸಂತೋಷಪಡುತ್ತಾರೆ" ಎಂದು ಅವನು ಹೇಳಿದ.

ಬಿಲ್ ಪಾವತಿಸಿ ಹೊರಡುವಾಗ ಅಂಗಡಿಯವನು ಇವನನ್ನು ಮತ್ತೆ ಕರೆದು, ಇನ್ನೊಂದು ಚಪ್ಪಲಿಗಳನ್ನು ಪ್ಯಾಕ್ ಮಾಡಿ ಅವನ ಕೈಗೆ ಕೊಟ್ಟು, "ಇವುಗಳನ್ನು ಕೂಡ ನಿನ್ನ ತಾಯಿಗೆ ಕೊಡು.ನನ್ನನ್ನು ನಿನ್ನ ಅಣ್ಣನೆಂದು ಭಾವಿಸಿಕೋ. ಇದನ್ನು ಅಣ್ಣ ಕೊಟ್ಟಿದ್ದೆಂದು ಅಮ್ಮನಿಗೆ ಹೇಳು?" ಎಂದು ಅವನು ಹೇಳಿದ.

ಇವನು ಮೊದಲು ಹಿಂಜರಿದರೂ, ನಂತರ ಅದನ್ನು ತೆಗೆದುಕೊಂಡ. "ನಿನ್ನ ತಾಯಿಯ ಹೆಸರೇನು ತಮ್ಮಾ!?" ಎಂದು ಅಂಗಡಿಯವನು ಕೇಳಿದ. "ಲಕ್ಷ್ಮಿ," ಎಂದು ಇವನು ಹೇಳಿದ. "ನಿನ್ನ ತಾಯಿಯ ಪಾದದ ಹೆಜ್ಜೆ ಗುರುತುಗಳನ್ನು ಬರೆದು ತಂದಿದ್ದ ಒಂದು ಕಾಗದವನ್ನು ಆಗಲೇ ತೋರಿಸಿದೆಯಲ್ಲಾ, ನೀನು ಅದನ್ನು ನನಗೆ ಕೊಡುತ್ತೀಯಾ?" ಎಂದು ಅಂಗಡಿಯವನು ಕೇಳಿದ. ಇವನು ಅದನ್ನು ಕೊಟ್ಟು ಧನ್ಯವಾದ ತಿಳಿಸಿ ಅಲ್ಲಿಂದ ಹೊರಟ.

ಅದನ್ನು ತೆಗೆದುಕೊಂಡು ನೋಡಿದ ಅಂಗಡಿಯಾತ ಅದನ್ನು ತನ್ನ ಅಂಗಡಿಯ ಪೂಜಾ ಕೋಣೆಯಲ್ಲಿ ಇರಿಸಿ, "ತನ್ನ ಮಗನಿಗಾಗಿ ತನ್ನ ಜೀವನವನ್ನೇ ಮುಡುಪಾಗಿಟ್ಟ ಅದೃಷ್ಟ ಲಕ್ಷ್ಮಿಯ ಹೆಜ್ಜೆಗುರುತುಗಳು ಇವು. ನಾವು ಇವುಗಳನ್ನು ಪೂಜಿಸಿದರೆ, ನಮ್ಮ ವ್ಯವಹಾರವು ಇಮ್ಮಡಿಸುತ್ತದೆ" ಎಂದು ತನ್ನ ಮಗನಿಗೆ ಹೇಳಿದ. ●



# ಪರಿಹಾರ ನೀಡುವ ಪ್ರೀತಿ!

ತನ್ನ ತಂದೆತಾಯಿಗಳ ಮಾತನ್ನು ಕೇಳದೆ ಮರದ ಮೇಲೆ ಹತ್ತಿ, ಅಲ್ಲಿಂದ ಕೆಳಗೆ ಬಿದ್ದು ಗಾಯಗೊಂಡ ಹುಡುಗನನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ದರು. ಕೆಲವು ದಿನಗಳ ನಂತರ ಅವನು ಚೇತರಿಸಿಕೊಂಡ.ನಂತರ ಅವನನ್ನುಮನೆಗೆ ಕರೆದೊಯ್ಯುವ ಸಮಯದಲ್ಲಿ ಹುಡುಗ ತನ್ನ ತಂದೆಯ ಬಳಿ, "ಅಪ್ಪಾ! ಇಲ್ಲಿರುವ ಎಲ್ಲರೂ ನನ್ನನ್ನು ಎಷ್ಟು ಪ್ರೀತಿಸುತ್ತಾರೆಂಬುದು ನಿಮಗೆ ತಿಳಿದಿದೆಯೇ? ವೈದ್ಯರು, ದಾದಿಯರು ಮತ್ತು ಸಹಾಯಕರು ಎಲ್ಲರೂ ನನ್ನನ್ನು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಾರೆ. ನನ್ನ ಆರೋಗ್ಯದ ಬಗ್ಗೆ ಅವರೆಲ್ಲರೂ ಕಾಳಜಿ ವಹಿಸುತ್ತಾರೆ. ನಾನು ಕೇಳುವ ಎಲ್ಲವನ್ನೂ ಅವರು ನನಗೆ ನೀಡುತ್ತಾರೆ. ನನ್ನ ಹಾಸಿಗೆಯನ್ನು ಸರಿಪಡಿಸುತ್ತಾರೆ. ಸಮಯಕ್ಕೆ ಸರಿಯಾಗಿ ನನಗೆ ಊಟ ನೀಡುತ್ತಾರೆ. ಆದರೆ ನೀವು ಮತ್ತು ಅಮ್ಮ ನನ್ನನ್ನು ಯಾವಾಗಲೂ ಗದರಿಸುತ್ತಿರುತ್ತೀರಿ. ನನಗೆ ಮನೆಗೆ ಬರುವುದು ಇಷ್ಟವಿಲ್ಲ!" ಎಂದ.

ಆ ಹುಡುಗ ಹೀಗೆ ಹೇಳುತ್ತಿರುವಾಗ, ಒಬ್ಬ ಅಟೆಂಡೆಂಟ್ ಬಂದು ಅವನ ತಂದೆಯ ಕೈಗೆ ಒಂದು ಕಾಗದದ ತುಂಡನ್ನು ಕೊಟ್ಟ. ಆ ಹುಡುಗ ಅದನ್ನು ನೋಡಿ "ಅದು ಏನು?" ಎಂದು ಕೇಳಿದ. ಅವನ ತಂದೆ ಶಾಂತವಾಗಿ ಹೇಳಿದರು: "ನೀನು ಇವರೆಲ್ಲರ ಪ್ರೀತಿಯ ಬಗ್ಗೆ ನನಗೆ ಈಗಷ್ಟೇ ಹೇಳಿದೆಯಲ್ಲವೇ? ಆ ಪ್ರೀತಿಯ ಬೆಲೆ ಇದರಲ್ಲಿದೆ... ಎಂದರೆ ಆಸ್ಪತ್ರೆಯ ಬಿಲ್!"

ಪ್ರೀತಿ ಮತ್ತು ಕಾಳಜಿಯನ್ನು ಅನೇಕ ಜನರು ಹೀಗೆಯೇ ತಪ್ಪಾಗಿ ಅರ್ಥೈಸಿಕೊಳ್ಳುತ್ತಾರೆ. ಪ್ರತಿದಿನವೂಅನೇಕ ಜನರು ಪವಿತ್ರ ನದಿಯಲ್ಲಿ ಸ್ನಾನ ಮಾಡಲು ಬರುತ್ತಾರೆ. ಕೆಲವರು ಅದರಲ್ಲಿ ತ್ಯಾಜ್ಯವನ್ನು ಸಹ ಎಸೆಯುತ್ತಾರೆ. ಯಾರು ಏನು ಮಾಡಿದರೂನದಿಯು ಅದನ್ನು ಲೆಕ್ಕಿಸುವುದಿಲ್ಲ. ಅದು ಎಂದಿಗೂ ಹರಿಯುವುದನ್ನು ನಿಲ್ಲಿಸುವುದಿಲ್ಲ. ಅದು ಎಲ್ಲರನ್ನೂ ಅಪ್ಪಿಕೊಳ್ಳುತ್ತದೆ ಮತ್ತು ಎಲ್ಲರಿಗೂ ಪುಣ್ಯವನ್ನು ಧಾರೆಯೆರೆದು ಪ್ರವಹಿಸುತ್ತಲೇ ಇರುತ್ತದೆ.

ಇದು ಶ್ರೀಕೃಷ್ಣನು ತನ್ನ ಭಕ್ತರಿಗೆ ಉದಾರತೆಯಿಂದ ದಾನ ನೀಡಿದ ಕಥೆ... ಕೃಷ್ಣನಿಗೆ ಒಬ್ಬ ಶ್ರೀಮಂತನಾದ ಭಕ್ತನಿದ್ದ. ಅವನ ಕಾಲಿನಲ್ಲಿ ಗಾಯವಾಗಿ ಅವನಿಂದ ನಡೆಯಲು ಸಹ ಸಾಧ್ಯವಾಗಲಿಲ್ಲ. ತನ್ನ ವೈಯಕ್ತಿಕ ಅಗತ್ಯಗಳನ್ನು ಪೂರೈಸಿಕೊಳ್ಳುವುದು ಕೂಡ ಅವನಿಗೆಅಸಾಧ್ಯವಾಯಿತು. ಯಾರಾದರೂ ಅವನನ್ನು ಎತ್ತಿಕೊಂಡು ಹೋಗಬೇಕಾದ ಪರಿಸ್ಥಿತಿ ಏರ್ಪಟ್ಟಿತು. ಇದು ಅವನಿಗೆ ತುಂಬಾ ನೋವಿನ ಸಂಗತಿಯಾಗಿ–ತ್ತು. ಅವನ ಬಳಿ ಯಾರೋ ಒಬ್ಬರು,'48 ದಿನಗಳ ಕಾಲ ದೇವರನ್ನು ಪ್ರಾರ್ಥಿಸಿದರೆನೀನು ಗುಣಮುಖನಾಗುತ್ತೀಯ' ಎಂದು ಹೇಳಿದರು.

ಮತ್ತೊಬ್ಬ ಬಡ ಕೃಷ್ಣ ಭಕ್ತನಿದ್ದ. ಅವನು ತನ್ನ ಮಗಳ ಮದುವೆ ಮಾಡಲು ಬಯಸಿದ. ಒಂದು ಒಳ್ಳೆಯ ಸಂಬಂಧ ಏರ್ಪಾಡಾಯಿತು. ಆದರೆ ಅವನ ಬಳಿ ಮದುವೆಯ ಖರ್ಚಿಗೆ ಅಥವಾ ಆಭರಣ ಖರೀದಿಸಲು ಹಣವಿರಲಿಲ್ಲ. 48 ದಿನಗಳ ಕಾಲ ಭಗವಂತನನ್ನು ಪ್ರಾರ್ಥಿಸಿದರೆ ಸಮಸ್ಯೆ ಬಗೆಹರಿಯುತ್ತದೆ ಎಂದು ಯಾರೋ ಅವನಿಗೂ ಹೇಳಿದರು.

48ನೇ ದಿನ ಬೆಳಗಿನ ಜಾವದಲ್ಲಿ, ಶ್ರೀಮಂತ ಭಕ್ತನ ಕನಸಿನಲ್ಲಿ ಭಗವಂತ ಕಾಣಿಸಿಕೊಂಡು, "ಚಿನ್ನದ ನಾಣ್ಯಗಳಿಂದ ತುಂಬಿದ ಒಂದು ಚೀಲವನ್ನು ತೆಗೆದುಕೊಂಡು ಬಾ. ಆ ಚೀಲವನ್ನು ದೇವಸ್ಥಾನದ ಕೊಳದ ದಡದಲ್ಲಿ ಇರಿಸಿ, ನನ್ನನ್ನು ನೆನಪಿಸಿಕೊಂಡು ಕೊಳದಲ್ಲಿ ಮುಳುಗಿ ಸ್ನಾನ ಮಾಡು" ಎಂದು ಹೇಳಿದ. ಹಾಗೆಯೇ ಆ ಬಡ ಭಕ್ತನ ಕನಸಿನಲ್ಲಿಯೂ ಕಾಣಿಸಿಕೊಂಡು, "ದೇವಾಲಯದ ಕೊಳದ ದಡದಲ್ಲಿ ಒಂದು ಚೀಲ ಇರುತ್ತದೆ. ಅದನ್ನು ತೆಗೆದುಕೊಂಡು ಹಿಂತಿರುಗಿ ನೋಡದೆ ಬಂದು ಬಿಡು" ಎಂದು ಹೇಳಿದ.

ಎರಡೂ ಸಂಭವಿಸಿದವು. ಬಡ ಭಕ್ತ ಚಿನ್ನದ ನಾಣ್ಯಗಳಿದ್ದ ಚೀಲದೊಂದಿಗೆ ಓಡಿಹೋಗುವುದನ್ನು ನೋಡಿ, ಶ್ರೀಮಂತ ಕೊಳದಿಂದ ಎದ್ದು ಅವನ ಹಿಂದೆಯೇ ಓಡಿ ಬಂದ. ಆದರೆ ಹಿಂತಿರುಗಿ ನೋಡದೆ ಓಡುತ್ತಿದ್ದ ಬಡವನನ್ನು ಹಿಡಿಯಲು ಅವನಿಂದ ಸಾಧ್ಯವಾಗಲಿಲ್ಲ. ಆಗ ಅವನಿಗೆ ಒಂದು ಸತ್ಯ ಅರ್ಥವಾಯಿತು. ಇಷ್ಟು ದಿನ ಅವನಿಂದ ನಡೆಯಲು ಸಾಧ್ಯವಾಗುತ್ತಿರಲಿಲ್ಲ. ದೇವರ ದಯೆಯಿಂದ, ಈಗ ಅವನು ಗುಣಮುಖನಾಗಿ ಓಡಲು ಸಾಧ್ಯವಾಯಿತು.

ಹೀಗೆ ದೇವರು ಇಬ್ಬರೂ ಭಕ್ತರಿಗೆ ಅವರಿಗೆ ಬೇಕಾದುದನ್ನು ನೀಡಿದ!



# ನಿಮ್ಮ ಸಹಜ ಸ್ವಭಾವವೇನು?

ಇಬ್ಬರು ಸನ್ಯಾಸಿಗಳು ನದಿಯಲ್ಲಿ ಈಜುತ್ತಿದ್ದರು. 'ಆ ಸಮಯದಲ್ಲಿ, ಒಂದು ಚೇಳು ನದಿಯ ನೀರಿನಲ್ಲಿ ಮುಳುಗುತ್ತಿತ್ತು. ಇದನ್ನು ನೋಡಿದ ಒಬ್ಬ ಸನ್ಯಾಸಿ ಅದನ್ನು ನೀರಿನಿಂದ ಮೇಲೆತ್ತಿ ತನ್ನ ಅಂಗೈಯಲ್ಲಿ ಹಿಡಿದು ದಡಕ್ಕೆ ಬಿಡಲು ಪ್ರಯತ್ನಿಸಿದ. ಹೆದರಿದ ಚೇಳು ಅವನ ಕೈಯನ್ನು ಕುಟುಕಿತು. ಅವನು ನೋವಿನಿಂದ ತನ್ನ ಕೈಯನ್ನು ಒದರಿದಾಗ ಚೇಳು ಮತ್ತೆ ನದಿಯೊಳಗೆ ಬಿದ್ದು ಜೀವಕ್ಕಾಗಿ ಚಡಪಡಿಸಿತು. ಸನ್ಯಾಸಿ ಮತ್ತೆ ಚೇಳನ್ನು ಹಿಡಿದು ದಡಕ್ಕೆ ಬಿಡಲು ಪ್ರಯತ್ನಿಸಿದಾಗ, ಅದು ಅವನನ್ನು ಮತ್ತೆ ಕುಟುಕಿತು. ಆದಾಗ್ಯೂ, ಅವನು ಅದನ್ನು ಸುರಕ್ಷಿತವಾಗಿ ತೆಗೆದು–ಕೊಂಡು ಬಂದು ದಡಕ್ಕೆ ಬಿಟ್ಟ.

ಅವನ ಜೊತೆಗಿದ್ದ ಸನ್ಯಾಸಿ ನಗುತ್ತಾ ಕೇಳಿದ, "ಚೇಳು ನಿನ್ನನ್ನು ಮತ್ತೆ ಮತ್ತೆ ಕುಟುಕುತ್ತಿದೆ. ಆದರೂ ನೀನು ಅದನ್ನು ಉಳಿಸಲು ನೋಡುತ್ತಿದ್ದೀಯಲ್ಲಾ". "ಆ ಚೇಳಿಗೆ ನಾನು ಅದನ್ನು ಉಳಿಸಲು ಪ್ರಯತ್ನಿಸುತ್ತಿದ್ದೇನೆ ಎಂಬುದು ತಿಳಿದಿಲ್ಲ. ಅದಕ್ಕಾಗಿಯೇ ಅದು ಕುಟುಕುತ್ತದೆ. ಚೇಳಿನ ಸ್ವಭಾವ ಕುಟುಕುವುದು. ಹಾಗೆಯೇ ಉಳಿಸುವುದು ನನ್ನ ಸ್ವಭಾವ. ಆದರೆ ನಿನ್ನ ಸ್ವಭಾವ ಏನು?" ಎಂದು ಮೊದಲ ಸನ್ಯಾಸಿ ಕೇಳಿದ. ಸಹಾಯ ಪಡೆಯುವ ವ್ಯಕ್ತಿ ಎಂತಹ ವ್ಯಕ್ತಿಯಾಗಿದ್ದರೂ, ಸಹಾಯ ಮಾಡುವ ವ್ಯಕ್ತಿ ಯಾವ ರೀತಿಯ ಸ್ವಭಾವವನ್ನು ಹೊಂದಿರಬೇಕು ಎಂಬುದನ್ನು ಈ ಕಥೆ ತೋರಿಸುತ್ತದೆ.

ಇದು ಇನ್ನೊಂದು ಕಥೆ... ಕಾಡಿನಲ್ಲಿ ಒಬ್ಬ ರಾಜ ಬೇಟೆಯಾಡಲು ಹೋದಾಗ, ತನ್ನ ಪರಿವಾರದಿಂದ ಬೇರ್ಪಟ್ಟು ಒಬ್ಬಂಟಿಯಾಗಿ ಹೋದ. ಹುಲಿಯೊಂದು ಅವನ ಮೇಲೆ ದಾಳಿ ಮಾಡಲು ಪ್ರಯತ್ನಿಸಿತು. ಅಲ್ಲಿದ್ದ ಒಬ್ಬ ಸನ್ಯಾಸಿ ಈಟಿಯನ್ನು ಎಸೆದು ಹುಲಿಯನ್ನು ಕೊಂದು ರಾಜನನ್ನು ರಕ್ಷಿಸಿದ. ಅವನಿಗೆ ಕಾಡಿನಲ್ಲಿ ಒಂದು ಆಶ್ರಮವಿತ್ತು.

ಅದಾದ ನಂತರ ರಾಜನು ತನ್ನ ಜೀವವನ್ನು ಉಳಿಸಿದ ಆ ಸನ್ಯಾಸಿಯನ್ನು ಆಗಾಗ್ಗೆ ಭೇಟಿ ಮಾಡುತ್ತಿದ್ದ. ಹೇಗೆ ಆಡಳಿತ ನಡೆಸುವುದು ಎಂಬುದರ ಕುರಿತು ಅವನು ಅವರ ಬಳಿ ಸಲಹೆಗಳನ್ನು ಕೇಳುತ್ತಿದ್ದ. ಅವನು ಆಶ್ರಮಕ್ಕೆ ಬಂದಾಗಲೆಲ್ಲಾ ಅವನು ಸನ್ಯಾಸಿಯ ಬಳಿ, "ನಾನು ನಿಮಗಾಗಿ ಏನು ಮಾಡಬೇಕು? ಹೇಳಿ!" ಎಂದು ಕೇಳುತ್ತಿದ್ದ. ಸನ್ಯಾಸಿ ನಗುತ್ತಾ, "ದೇವರು ನನಗೆ ಎಲ್ಲವನ್ನೂ ಕೊಟ್ಟಿದ್ದಾನೆ. ನನಗೆ ಬೇರೇನೂ ಅಗತ್ಯವಿಲ್ಲ" ಎಂದು ಹೇಳುತ್ತಿದ್ದ.

ಒಮ್ಮೆ ಅವನು ಸನ್ಯಾಸಿಯನ್ನು ನೋಡಲು ಬಂದಾಗ, "ಇಂದು ನೀವು ನನ್ನಿಂದ ಏನಾದರೂ ಕೇಳಿ ಪಡೆಯಲೇ ಬೇಕು" ಎಂದು ಒತ್ತಾಯ ಪೂರ್ವಕವಾಗಿ ಹೇಳಿ ಸನ್ಯಾಸಿಯ ಎದುರು ಕುಳಿತ. ಸನ್ಯಾಸಿ ಅವನನ್ನು ನೋಡಿ ಮುಗುಳ್ನಕ್ಕ. "ಸರಿ, ನೀನು ನನಗಾಗಿ ಏನಾದರೂ ಮಾಡಬೇಕೆಂದು ಬಯಸುತ್ತಿರುವೆ. ಆದ್ದರಿಂದ ಒಂದು ಕೆಲಸ ಮಾಡು! ಈ ನೊಣಗಳು ನಾನು ಶಾಂತಿಯುತವಾಗಿ ಧ್ಯಾನ ಮಾಡುವುದನ್ನು

ತಡೆಯುತ್ತಿವೆ. ಆದ್ದರಿಂದ ಅವು ನನ್ನ ಹತ್ತಿರ ಬರದಂತೆ ನೋಡಿಕೋ" ಎಂದ. ರಾಜ ಒಂದು ಬೀಸಣಿಗೆಯನ್ನು ತೆಗೆದುಕೊಂಡು ನೊಣಗಳನ್ನು ಓಡಿಸಿದ. ಆದರೆ ಅವು ಸ್ವಲ್ಪ ದೂರ ಹೋಗಿ ಮತ್ತೆ ಬಂದು ಸನ್ಯಾಸಿಯ ಮೇಲೆ ಕುಳಿತುಕೊಳ್ಳುತ್ತಿದ್ದವು. ಅವುಗಳನ್ನು ಓಡಿಸುವುದು ಸಾಧ್ಯವಾಗಲಿಲ್ಲ.

ರಾಜನಿಗೆ ಕೋಪ ಬಂತು. “ನಾನು ಈ ದೇಶದ ರಾಜ.ಇವರು ಎಷ್ಟೇ ಹಣ ಕೇಳಿದ್ದರೂ, ಎಷ್ಟು ಭೂಮಿ ಕೇಳಿದ್ದರೂ ನಾನು ಕೊಡುತ್ತಿದ್ದೆ. ಎಷ್ಟೇ ದೊಡ್ಡ ಆಶ್ರಮ ಕೇಳಿದ್ದರೂ, ನಾನು ಅದನ್ನು ನಿರ್ಮಿಸುತ್ತಿದ್ದೆ. ಇಂತಹ ಏನನ್ನೂ ಕೇಳದೆ, ಇಲ್ಲಿ ಹಾರಾಡುವ ನೊಣಗಳನ್ನು ಓಡಿಸಲು ಹೇಳಿದ್ದಾರಲ್ಲ! ಈ ನೊಣಗಳು ಕೂಡ ಬೇರೆಲ್ಲೂ ಹೋಗದೆ ಇಲ್ಲಿಯೇ ಮತ್ತೆ ಮತ್ತೆ ಸುತ್ತಾಡುತ್ತಿವೆ” ಎಂದು ಅವನು ತನ್ನೊಳಗೇ ಯೋಚಿಸುತ್ತಿದ್ದ.

ಅವನು ಏನು ಯೋಚಿಸುತ್ತಿದ್ದಾನೆಂಬುದನ್ನು ಅರಿತುಕೊಂಡ ಸನ್ಯಾಸಿ ಕಣ್ಣು ತೆರೆದು ರಾಜನ ಕಡೆ ನೋಡಿ ಮುಗುಳ್ನಕ್ಕ. "ರಾಜನೇ, ಇದೇ ನಿನ್ನ ನಿಜವಾದ ಸಮಸ್ಯೆ! ನಿನ್ನ ಹೃದಯ ನನಗೆ ಸಹಾಯ ಮಾಡಲು ಬಯಸುತ್ತದೆ. ಆದರೆ ನಿನ್ನ ಮನಸ್ಸು ಅಹಂಕಾರದಿಂದ ತುಂಬಿದೆ. ನಾನು ಈ ದೇಶದ ರಾಜನೆಂದು ನೀನು ಹೆಮ್ಮೆ ಪಡುತ್ತೀಯ ಮತ್ತು ನಾನುನಿನ್ನಿಂದ ಏನನ್ನೂ ತೆಗೆದುಕೊಂಡಿಲ್ಲ ಎಂಬುದು ನಿನ್ನ ಅಹಂ ಅನ್ನು ಬಾಧಿಸುತ್ತದೆ. ಆದ್ದರಿಂದಲೇ ನಿನ್ನ ಆ ಹೆಮ್ಮೆಯನ್ನು ನಿಗ್ರಹಿಸಲುನಿನ್ನಿಂದ ಮಾಡಲಾಗದ ಕೆಲಸವನ್ನು ಮಾಡುವಂತೆ ನಾನು ನಿನ್ನನ್ನು ಕೇಳಿದೆ.

ಸಹಾಯ ಮಾಡುವುದರಲ್ಲಿ ಯಾವುದೇ ಹೆಮ್ಮೆ ಇರಬಾರದು. 'ನಾನು ಈ ವ್ಯಕ್ತಿಗೆ ಸಹಾಯ ಮಾಡುತ್ತಿದ್ದೇನೆ!' ಎಂದು ಯೋಚಿಸಿ ಹೆಮ್ಮೆಯಿಂದ ಯಾರಿಗೂ ಏನನ್ನೂ ಮಾಡಬೇಡ. 'ಈ ಸಹಾಯವನ್ನು ಮಾಡಲು ನನಗೆ ಅವಕಾಶ ಸಿಕ್ಕಿದೆ' ಎಂಬ ಆಲೋಚನೆಯೊಂದಿಗೆ ಅದನ್ನು ಮಾಡು. ನಿನ್ನ ಮೂಲಕ ದೇವರು ಈ ಕೆಲಸ ಮಾಡಿಸುತ್ತಿದ್ದಾನೆಂದು ಭಾವಿಸಿ ಅದನ್ನು ಮಾಡು!" ಎಂದು ಸನ್ಯಾಸಿ ಹೇಳಿದ. ಈ ಮೂಲಕ ದಾನ ಮಾಡುವವರಿಗೆ ಇರಬೇಕಾದ ಮನೋಭಾವವನ್ನು ರಾಜ ಅರ್ಥಮಾಡಿಕೊಂಡನು.




**ಸ**ಹಾಯ ಮಾಡುವ ಮನೋಭಾವ ಹೇಗೆ ಹುಟ್ಟುತ್ತದೆ ಎಂಬುದನ್ನು ವಿವರಿಸುವ ಒಂದು ನೈಜ ಕಥೆ ಇದು... ಒಂದು ದೇಶದಲ್ಲಿ ಒಂದು ಪ್ರಾಥಮಿಕ ಶಾಲೆ ಇತ್ತು. ಅಲ್ಲಿ ಬಹಳಷ್ಟು ಹಿಮ ಬೀಳುತ್ತಿತ್ತು. ಒಂದು ದಿನ, ಆ ಊರಿನ ಶಾಲೆಯ ಪ್ರವೇಶ ದ್ವಾರದಲ್ಲಿ ಹತ್ತು ಉಣ್ಣೆಯ ಕೋಟುಗಳು ನೇತಾಡುತ್ತಿದ್ದವು. ಆ ಪ್ರದೇಶದಲ್ಲಿ, ಹಿಮ ಬೀಳುವ ದಿನಗಳಲ್ಲಿ ಭಾರೀ ಹಿಮಪಾತವಾಗುತ್ತಿತ್ತು. ಅಲ್ಲಿ ಕೋಟ್ ಧರಿಸದೆ ಹೊರಗೆ ಹೋಗುವ ಜನ ಕೂಡ ಇದ್ದರು. ಕೆಲವರು ಹಿಮದಲ್ಲಿ ಹೆಪ್ಪುಗಟ್ಟಿ ಸಾಯುತ್ತಿದ್ದರು. ಆದ್ದರಿಂದ, ಬಡವರು ಸಹ ಕಷ್ಟ ಪಟ್ಟು ಹೇಗಾದರೂ ಕೋಟ್ ಖರೀದಿಸಲು ಬಯಸುತ್ತಿದ್ದರು. ಏಕೆಂದರೆ ಆ ದೇಶದಲ್ಲಿ, ಕೋಟ್ ಜೀವ ಉಳಿಸುವ ವಸ್ತುವಾಗಿತ್ತು.

ಅಂತಹ ಊರಿನಲ್ಲಿರುವ ಶಾಲೆಯ ದ್ವಾರದಲ್ಲಿ ಉಣ್ಣೆಯ ಕೋಟುಗಳು ನೇತಾಡುತ್ತಿದ್ದರೆ ಅದು ಎಲ್ಲರ ಗಮನ ಸೆಳೆಯುವುದಿಲ್ಲವೇ? 'ಯಾರಾದರೂ ಅಂಗಡಿಯಿಂದ ಕದ್ದು ಇಲ್ಲಿ ಇಟ್ಟಿದ್ದಾರೆಯೇ?' ಶಿಕ್ಷಕರು ಅದನ್ನು ಅನುಮಾನಾಸ್ಪದವಾಗಿ ನೋಡುತ್ತಿರುವಾಗ, ಹಲವಾರು ಬಡ ವಿದ್ಯಾರ್ಥಿಗಳು ಬಂದು ಅಲ್ಲಿದ್ದ ಕೋಟುಗಳನ್ನು ತೆಗೆದುಕೊಂಡರು.

ಮುಂದಿನ ವಾರ, ಮತ್ತೆ ಶಾಲೆಯ ದ್ವಾರದಲ್ಲಿ ಅಂತಹ ಹತ್ತು ಕೋಟುಗಳು ಇದ್ದವು. ಉತ್ತಮ ಕೋಟುಗಳು ಇಲ್ಲದ ಉಳಿದ ವಿದ್ಯಾರ್ಥಿಗಳು ಬಂದು ಅವುಗಳನ್ನು ತೆಗೆದುಕೊಂಡರು. ಶಾಲೆಯಲ್ಲಿ ಎಲ್ಲರಿಗೂ ಈ ರೀತಿಯ ಕೋಟುಗಳು ಸಿಕ್ಕಾಗ, ಬಸ್ ನಿಲ್ದಾಣದ ಬಳಿ ಇದ್ದಕ್ಕಿದ್ದಂತೆ ಕೋಟುಗಳು ಕಾಣಿಸಿಕೊಂಡವು. ಮುಂದಿನ ವಾರ, ಆಸ್ಪತ್ರೆಯ ಬಳಿ ಕೋಟುಗಳು ಇದ್ದವು.

ಇಡೀ ಪಟ್ಟಣವೇ ಇದರ ಬಗ್ಗೆ ಮಾತನಾಡುತ್ತಿತ್ತು. ಕಣ್ಗಾವಲು ಕ್ಯಾಮೆರಾ ದೃಶ್ಯಗಳನ್ನು ಬಳಸಿ ಪೊಲೀಸ್ ಅಧಿಕಾರಿಯೊಬ್ಬರು ಕೋಟ್ ಇಡುತ್ತಿದ್ದ ಆ ವ್ಯಕ್ತಿಯನ್ನು ಕಂಡುಕೊಂಡರು. ಅವರು ಅಷ್ಟೊಂದು ಶ್ರೀಮಂತರೇನೂ ಆಗಿರಲಿಲ್ಲ. ಅವರು 50ರ ಹರೆಯದ ಸಾಮಾನ್ಯ ಉದ್ಯಮಿಯಾಗಿದ್ದರು. "ಒಂದು ರಾತ್ರಿ, ನನ್ನ ಮಗ ನನ್ನ ಮೇಲೆ ಕೋಪಗೊಂಡು ಮನೆಯಿಂದ ಹೊರಟುಹೋದ. ಅವನು ಕೋಟ್ ಧರಿಸದೆ ಹೊರಟುಹೋದ. ಯಾರಿಂದಲಾದರೂ ಸಹಾಯ ಕೇಳಲು ಕೂಡ ಅವನು ತುಂಬಾ ಮುಜುಗರಕ್ಕೊಳಗಾಗಿದ್ದ ಮತ್ತು ಇದರಿಂದ ಅವನು ಹಿಮದಲ್ಲಿ ಹೆಪ್ಪುಗಟ್ಟಿ ಸತ್ತು ಹೋದ. ನಾನು ಅವನಿಗಾಗಿ ಇಟ್ಟಿದ್ದ ವಿಮಾ ಹಣ ನನ್ನ ಕೈಗೆ ಬಂದಿತು. ನಾನು ಅದನ್ನು ಕೋಟುಗಳನ್ನು ಖರೀದಿಸಲು ಮತ್ತು ನನ್ನ ಇಡೀ ಹಳ್ಳಿಗೆ ಕೋಟನ್ನು ನೀಡಲು ಬಳಸುತ್ತಿದ್ದೇನೆ. ನನ್ನ ಮಗನಂತೆ ಯಾರೂ ನಾಚಿಕೆಪಡಬಾರದು ಮತ್ತು ಅವುಗಳನ್ನು ಧರಿಸದೆ ಹೋಗಬಾರದು, ಸರಿ ತಾನೇ? ಅದಕ್ಕಾಗಿಯೇ ನಾನು ನನ್ನ ಮುಖವನ್ನು ತೋರಿಸದೆ ಅವುಗಳನ್ನು ನೀಡುತ್ತಿದ್ದೇನೆ”ಎಂದು ಅವರು ಹೇಳಿದರು.

ಪಡೆಯುವವರ ಸ್ವಾಭಿಮಾನ ಕಡಿಮೆಯಾಗದಂತೆ ಅವರಿಗೆ ನೆರವು ನೀಡಬೇಕು ಎಂದು ಅವರವೀ ಮೂಲಕ ಸ್ಪಷ್ಟಪಡಿಸಿದರು.



# ಆಹಾರ ಅರ್ಥ ಮಾಡಿಸುವ ಉದಾರತೆ!

**ರಾ**ಮ್ ಐಎಎಸ್ ಪರೀಕ್ಷೆಯ ಕೋಚಿಂಗ್ ತರಗತಿಗೆ ಹೋಗುತ್ತಿದ್ದ. ಅದಕ್ಕಾಗಿ ಪ್ರತ್ಯೇಕವಾಗಿ ಒಂದು ರೂಮ್ ಬಾಡಿಗೆಗೆ ಪಡೆದು ಅಲ್ಲಿ ಉಳಿದುಕೊಂಡಿದ್ದ. ಅವನು ಸಾಮಾನ್ಯವಾಗಿ ದಾರಿಯಲ್ಲಿ ಬೆಳಗ್ಗಿನ ಹೊತ್ತುಒಂದು ಮೆಸ್‌ನಲ್ಲಿ ಉಪಾಹಾರ ಸೇವಿಸಿ ನಂತರ ತರಗತಿಗೆ ಹೋಗುತ್ತಿದ್ದ. ಹಿಂತಿರುಗುವಾಗ ತಡವಾಗುತ್ತಿತ್ತು. ಕೆಲವು ದಿನಗಳ ಕಾಲ ಅಲ್ಲಿ ಊಟ ಮಾಡಿದ ನಂತರ ಮೆಸ್‌ನ ಮಾಲೀಕರೊಂದಿಗೆ ಅವನಿಗೆ ಸ್ವಲ್ಪ ಪರಿಚಯ ಬೆಳೆಯಿತು.

ಆ ದಿನ ಬೆಳಿಗ್ಗೆ ಕೊಠಡಿಯಿಂದ ಹೊರಡುವಾಗಲೇ ತಡವಾಗಿತ್ತು. ಅವನು ಆತುರದಿಂದ ಅವಸರ ಅವಸರವಾಗಿ ರೂಮಿನಿಂದ ಹೊರಟ. ಮೆಸ್‌ಗೆ ಬಂದು ದೋಸೆ ಖರೀದಿಸಿ ಜೇಬಿನಲ್ಲಿ ಕೈ ಹಾಕಿ ನೋಡಿದಾಗ ಪರ್ಸ್ ಮರೆತು ಬಂದಿರುವುದು ಅರಿವಾಯಿತು. ಬಟ್ಟೆ ಬದಲಾಯಿಸುವಾಗ ಪರ್ಸ್ ತೆಗೆದಿಟ್ಟುಕೊಳ್ಳುವುದನ್ನು ಮರೆತಿದ್ದ. ಅವನು ತನ್ನ ಸೆಲ್ ಫೋನ್‌ನ ಹಿಂದಿನ ಕವರ್‌ನಲ್ಲಿ ಸಾಮಾನ್ಯವಾಗಿ ಸಣ್ಣ ನೋಟುಗಳನ್ನು ಇಡುವುದು ವಾಡಿಕೆ. ಆದರೆ ಈಗ ಅಲ್ಲಿಯೂ ಹಣವಿರಲಿಲ್ಲ.

ಅವನ ಆತಂಕವನ್ನು ಗಮನಿಸಿದ ಮೆಸ್‌ನ ಮಾಲೀಕ, "ಏನಾಯ್ತು? ನಿನಗೆ ಚಟ್ನಿ ಅಥವಾ ಸಾಂಬಾರ್ ಏನಾದರೂ ಬೇಕಾ?" ಎಂದು ಕೇಳಿದ. ಇವನು ಹಿಂಜರಿಕೆಯಿಂದ, "ಅದೆಲ್ಲ ಏನೂ ಬೇಡ. ನಾನು ಹೊರಡುವ ಆತುರದಲ್ಲಿ ನನ್ನ ಪರ್ಸ್ ತೆಗೆದುಕೊಳ್ಳಲು ಮರೆತಿದ್ದೇನೆ. ಈಗ ನನ್ನ ಬಳಿ ಹಣ ಇಲ್ಲ. ನಾನು ಈಗ ತಿನ್ನುವ ದೋಸೆಗೆ ನಾಳೆ ನಿಮಗೆ ಹಣ ನೀಡಬಹುದೇ?" ಎಂದು ಕೇಳಿದ. ಮೆಸ್‌ನ ಮಾಲೀಕ ನಗುತ್ತಾ, "ಪರವಾಗಿಲ್ಲ, ಇಂದು ನಿನಗೆ ಅದು ನನ್ನ ಟ್ರೀಟ್ ಆಗಿರಲಿ ಬಿಡು!" ಎಂದ. ಇದನ್ನು ಕೇಳಿ ರಾಮ್ ನಿರಾಳವಾಗಿ ಉಸಿರಾಡಿದ. ಹಣವಿಲ್ಲದೆ ತಿನ್ನಲು ಅವನಿಗೆ ಮುಜುಗರವಾಗುವುದನ್ನು ತಪ್ಪಿಸಲು ಮಾಲೀಕ ಆ ದಿನ ಸಾಮಾನ್ಯಕ್ಕಿಂತ ಸ್ವಲ್ಪ ಹೆಚ್ಚು ರಾಮನತ್ತ ಗಮನ ಹರಿಸಿದ.

ಮರುದಿನ ರಾಮ್ ಅಲ್ಲಿಗೆ ಹೋದಾಗ, ನಿನ್ನೆಯ ದೋಸೆಗೆ ಹಣ ಕೊಟ್ಟ. "ನೀನು ಏನು ಮಾತನಾಡ್ತಿದ್ದೀಯಾ? ನಾನು ನೆನ್ನೆಯೇ ನಿನಗೆ ಹೇಳಿದ್ದೆ. ಅದು ನಿನಗಾಗಿ ನನ್ನ ಟ್ರೀಟ್ ಅಂತ! ಅದಕ್ಕೆ ನೀನು ಯಾಕೆ ಹಣ ಕೊಡ್ತಿದ್ದೀಯಾ?" ಮಾಲೀಕ ಆ ಹಣ ವಾಪಸ್ ಕೊಟ್ಟ.ಅಂದು ಅವನು ತಿಂದ  ತಿಂಡಿ ಎಂದಿಗಿಂತಲೂ ಹೆಚ್ಚು ರುಚಿಯಾಗಿತ್ತು!

**ಸಂ**ಪತ್‌ಕಛೇರಿಯಲ್ಲಿ ತನ್ನ ಕೆಲಸ ಮುಗಿಸಿ ಮನೆಗೆ ಮರಳಿದ. ಮನೆಯಲ್ಲಿ ಎಲ್ಲರೂ ಊರಿಗೆ ಹೋಗಿದ್ದರಿಂದ, ಅವನು ಇಂದು ಹೊರಗಡೆಯೇ ಊಟ ಮಾಡಿ ಹೋಗಬೇಕಾಗಿತ್ತು. ಮನೆಗೆ ಹೋಗುವ ದಾರಿಯಲ್ಲಿ ಒಂದು ಸಣ್ಣ ಹೋಟೆಲ್ ಇತ್ತು. ಒಬ್ಬ ದಂಪತಿಗಳು ನಡೆಸುತ್ತಿದ್ದ ಆ ಅಂಗಡಿಯಲ್ಲಿ ಸ್ವಚ್ಛವಾದ ಮತ್ತು ಗುಣಮಟ್ಟದ ಆಹಾರವನ್ನು ನೀಡುತ್ತಿದ್ದರು. ಆದ್ದರಿಂದ ಮನೆಯಲ್ಲಿ ಯಾರೂ ಇಲ್ಲದ ದಿನಗಳಲ್ಲಿ ಅವನು ಅಲ್ಲಿಯೇ ಊಟ ಮಾಡುತ್ತಿದ್ದ. ಕೆಲವೊಮ್ಮೆ, ಅವನು ಮನೆಗಾಗಿಯೂ ಅಲ್ಲಿಂದ ಪಾರ್ಸೆಲ್‌ಗಳನ್ನು ಖರೀದಿಸಿ ತೆಗೆದುಕೊಂಡು ಹೋಗುತ್ತಿದ್ದ.

ಸಂಪತ್ ಇಂದು ಕೂಡ ಅಲ್ಲಿ ಊಟ ಮಾಡಲು ಹೋದ. ಅಲ್ಲಿ ಸಾಮಾನ್ಯಕ್ಕಿಂತ ಹೆಚ್ಚು ಜನದಟ್ಟಣೆ ಇತ್ತು. ಹೋಟೆಲಿನ ಸಿಬ್ಬಂದಿ ಬಡಿಸುತ್ತಾ ಓಡಾಡುತ್ತಿದ್ದರು. ಇವನು ಅಲ್ಲಿ ದೋಸೆ ಖರೀದಿಸಿ ತಿನ್ನಲು ಪ್ರಾರಂಭಿಸಿದಾಗ, ಸ್ವಲ್ಪ ದೂರದಲ್ಲಿ ಒಬ್ಬ ಮಹಿಳೆ ನಿಂತಿರುವುದನ್ನು ನೋಡಿದ. ಆ ಮಹಿಳೆ ಭುಜದ ಮೇಲೆ ಮಲಗಿದ್ದ ಮಗುವನ್ನು

ಹೊತ್ತುಕೊಂಡು ಕರುಣಾಜನಕವಾಗಿ ನಿಂತಿದ್ದಳು. ಅವಳು ಹಸಿದಿದ್ದಳು ಮತ್ತು ಅವಳು ತನ್ನ ಹೊಟ್ಟೆಯನ್ನು ಮುಟ್ಟಿ ತೋರಿಸುತ್ತಾ ಕೆಲವು ಜನರ ಬೇಡಿಕೊಳ್ಳುವುದನ್ನು ಅವನು ಗಮನಿಸಿದ. ಅವಳು ಹೋಡೆಲ್‌ನೊಳಗೆ ತಿನ್ನುತ್ತಿದ್ದ ಜನರನ್ನು ಆಸೆಯಿಂದ ನೋಡುತ್ತಿದ್ದಳು.

ಅಷ್ಟೊಂದು ಜನಸಂದಣಿಯ ಮಧ್ಯದಲ್ಲೂ, ಆ ಮಹಿಳೆ ಅಲ್ಲಿ ನಿಂತಿರುವುದನ್ನು ಗಮನಿಸಿದ ಅಂಗಡಿಯವನು, ಆತುರದಿಂದ ಕೆಲವು ಇಡ್ಲಿಗಳನ್ನು ಪ್ಯಾಕ್ ಮಾಡಿ ಅವಳಿಗೆ ಕೊಟ್ಟನು. ಸಂಪತ್ ಊಟ ಮುಗಿಸಿದ ನಂತರ, "ನೀವು ಆಕೆಗೆ ಕೊಟ್ಟ ಇಡ್ಲಿಗಳ ಹಣವನ್ನು ನಾನು ಆ ಮಹಿಳೆಗಾಗಿ ನಿಮಗೆ ಕೊಡುತ್ತೇನೆ" ಎಂದು ಹೇಳಿದ. ಅಂಗಡಿಯವನು ನಗುತ್ತಾ ನಿರಾಕರಿಸಿ,ಹೋಟೆಲ್‌ನಲ್ಲಿ ಕುಳಿತಿದ್ದ ತನ್ನ ಮಕ್ಕಳ ಕಡೆಗೆ ಕೈ ತೋರಿಸಿ ಹೇಳಿದ: "ನಮ್ಮ ಮಕ್ಕಳು ಇಲ್ಲಿ ಬಂದು ಕುಳಿತು ನಮ್ಮಿಂದ ವ್ಯಾಪಾರವನ್ನು ಕಲಿಯುವುದರ ಜೊತೆಗೆ ಇಂತಹ ಒಳ್ಳೆಯ ವಿಷಯಗಳನ್ನು ಕೂಡ ಕಲಿಯಬೇಕಲ್ಲವೇ ಸರ್! ಆಗ ಮಾತ್ರ ಅವರು ಚೆನ್ನಾಗಿ ಬೆಳೆಯುತ್ತಾರೆ" ಎಂದ.

**ಬ**ಡ ಕುಟುಂಬದಲ್ಲಿ ಜನಿಸಿ, ತಂದೆಯನ್ನು ಕಳೆದುಕೊಂಡು, ತಾಯಿಯ ಕಠಿಣ ಪರಿಶ್ರಮದ ನಡುವೆ ಶಾಲಾ ವ್ಯಾಸಂಗವನ್ನು ಮುಗಿಸಿ, ಈಗಷ್ಟೇ ಕಾಲೇಜಿಗೆ ಸೇರಿಕೊಂಡಿದ್ದ ಹರಿ. ಎಷ್ಟೋ ದಿನಗಳು ಅವನ ಬಳಿ ಮಧ್ಯಾಹ್ನದ ಊಟ ಮಾಡಲು ಕೂಡ ಹಣ ಇರುತ್ತಿರಲಿಲ್ಲ. ಸಂಜೆ ಮನೆಗೆ ಹಿಂತಿರುಗುವಷ್ಟರಲ್ಲಿ ಹಸಿವಿನಿಂದ ಬಳಲಿ ಹೋಗುತ್ತಿದ್ದ. ಮನೆಯಲ್ಲಿ ಏನಾದರೂ ಇದ್ದರೆ ತಿನ್ನುತ್ತಿದ್ದ ಇಲ್ಲದಿದ್ದಲ್ಲಿ ಸುಮ್ಮನಿದ್ದು ಬಿಡುತ್ತಿದ್ದ. ರಾತ್ರಿ ಊಟ ಮಾತ್ರ ಸಿಗುತ್ತಿತ್ತು.

ಇದರಿಂದಾಗಿ ಅವನು ಒಂದು ಟ್ಯೂಷನ್ ಸೆಂಟರ್‌ನಲ್ಲಿ ಶಾಲಾ ಮಕ್ಕಳಿಗೆ ಪಾಠ ಮಾಡಿ ಹಣ ಸಂಪಾದಿಸಲು ಯೋಚಿಸಿದ. ಟ್ಯೂಷನ್ ಸೆಂಟರ್‌ಗೆ ಹೋಗುವಾಗ ದಾರಿಯಲ್ಲಿ ಒಂದು ಬಜ್ಜಿ ಅಂಗಡಿಯ ಪಕ್ಕದಲ್ಲಿ ಹಾದು ಹೋಗಬೇಕಾಗಿತ್ತು. ಕೆಲವೊಮ್ಮೆ ಅವನಿಗೆ ತುಂಬಾ ಹಸಿವಾಗುತ್ತಿದ್ದಾಗ ಅಲ್ಲಿ ಬಜ್ಜಿ ತಿನ್ನೋಣ ಎನ್ನಿಸುತ್ತಿತ್ತು. ಆದರೆ ಅವನ ಕೈಯಲ್ಲಿ ಹಣವಿರುತ್ತಿರಲಿಲ್ಲ. ಆದ್ದರಿಂದ ಅವನು ಸುಮ್ಮನೆ ಹಾದು ಹೋಗಿ ಬಿಡುತ್ತಿದ್ದ.


ಕೋಚಿಂಗ್ ಸೆಂಟರ್‌ನಲ್ಲಿ ಮೊದಲ ಸಂಬಳ ತೆಗೆದುಕೊಂಡು ಹಿಂದಿರುಗುತ್ತಿದ್ದಾಗ, ಅವನಿಗೆ ಬಜ್ಜಿ ತಿನ್ನುವ ಚಪಲವಾಯಿತು. ಅದ‌ರಿಂದ 20 ರೂಪಾಯಿ ತೆಗೆದು ಬಜ್ಜಿ ತಿಂದು, ಆಮೇಲೆ ಮನೆಗೆ ಹೋದ ಮೇಲೆ ಅಮ್ಮನ ಬಳಿ ಹೇಳಿದರಾಯಿತು ಎಂದು ಭಾವಿಸಿ, ಬಜ್ಜಿ ತೆಗೆದು‌ಕೊಂಡು ತಿಂದ. ತಿನ್ನುವಾಗ ಹಣ ಕಡಿಮೆಯಾಗಿರುವುದನ್ನು ಕಂಡು ಅಮ್ಮ ಬೇಸರಿಸಿಕೊಳ್ಳುತ್ತಾಳೋ ಏನೋ ಎಂದು ಚಿಂತೆಯಾಯಿತು. ಬಜ್ಜಿ ಅಂಗಡಿಯಲ್ಲಿ ಜನದಟ್ಟಣೆ ಹೆಚ್ಚಾಗಿದ್ದ ಕಾರಣ ಅಂಗಡಿಯವನು ಇವನತ್ತ ಗಮನ ಹರಿಸಲಿಲ್ಲ. ಇವನು ತಿಂದು ಮುಗಿಸಿದ ಮೇಲೆ ಸ್ವಲ್ಪ ಹೊತ್ತು ಅಲ್ಲೇ ಸುಮ್ಮನೆ ನಿಂತುಕೊಂಡಿದ್ದು, ಆಮೇಲೆ ಅಂಗಡಿಯವನ ಕಣ್ಣಿಗೆ ಕಾಣಿಸದ ಹಾಗೆ ಅಲ್ಲಿಂದ ಜಾರಿಕೊಂಡ. ಯಾವಾಗಲೂ



ಜನದಟ್ಟಣೆ ಇರುತ್ತಿದ್ದ ಆ ಅಂಗಡಿಯಲ್ಲಿ ಅವನು ಹೀಗೆ ಬಜ್ಜಿ ತಿಂದು ಹಣ ಕೊಡದೆ ಜಾರಿಕೊಂಡು ಹೋಗುವುದು ಸಾಮಾನ್ಯವಾಗಿ ಹೋಯಿತು. ಅಂಗಡಿಯವನು ಗ್ರಾಹಕರು ನೀಡುತ್ತಿದ್ದ ಹಣವನ್ನು ತೆಗೆದುಕೊಳ್ಳುವುದನ್ನು ಹೊರತುಪಡಿಸಿ ಬೇರೆ ಯಾವುದರ ಕಡೆಗೂ ಗಮನ ಹರಿಸುತ್ತಿರಲಿಲ್ಲ ಅಥವಾ ಕೇಳುತ್ತಿರಲಿಲ್ಲ. ಅದು ಅವನಿಗೆ ಅನುಕೂಲಕರವಾಗಿತ್ತು.

ವರ್ಷಗಳು ಕಳೆದವು. ಈಗ ಹರಿ ಒಂದು ಐಟಿ ಕಂಪನಿಯಲ್ಲಿ ಒಳ್ಳೆಯ ಕೆಲಸ ಮಾಡುತ್ತಿದ್ದಾನೆ. ಮೊದಲ ತಿಂಗಳ ಸಂಬಳ ಪಡೆದ ನಂತರ ಅವನು ತನ್ನ ಊರಿಗೆ ಹಿಂತಿರುಗಿದ. ದಾರಿಯಲ್ಲಿ, ಆ ಬಜ್ಜಿ ಅಂಗಡಿಯಲ್ಲಿ ಬಜ್ಜಿ ತಿಂದು, ಅಂಗಡಿಯವನಿಗೆ 500 ರೂಪಾಯಿಗಳನ್ನು ಕೊಟ್ಟ. "ಎರಡು ಬಜ್ಜಿಗಳಿಗೆ 500 ರೂಪಾಯಿಗಳನ್ನು ಕೊಟ್ಟರೆ ಚಿಲ್ಲರೆ ನೀಡುವುದು ಹೇಗೆ?" ಅಂಗಡಿಯವನು ಕೇಳಿದ. "ನಾನು ಆಮೇಲೆ ಬಂದು ಚಿಲ್ಲರೆ ತೆಗೆದುಕೊಳ್ಳುತ್ತೇನೆ ಬಿಡಿ!" ಎಂದು ಹರಿ ಉತ್ತರಿಸಿದ.

ಅವನು ಅದನ್ನು ಇನ್ನೆಂದೂ ಕೇಳುವುದಿಲ್ಲ. ಅಷ್ಟೇ ಅಲ್ಲ, ಅವನು ಪ್ರತಿ ಬಾರಿ ಊರಿಗೆ ಬಂದಾಗಲೂ ಇನ್ನು ಮುಂದೆ ಇದೇ ರೀತಿ ಮಾಡುತ್ತಾನೆ. ಕೆಲವು ಸಾಲಗಳು ತಡವಾಗಿ ಪಾವತಿಸಲ್ಪಡುತ್ತವೆ! ●



# ಓದುಗರ ಪತ್ರಗಳು!

ಆಗಸ್ಟ್ ತಿಂಗಳ 'ಬಿಳುಪು ಭಾವನೆಗಳು' ಸಂಚಿಕೆ ತುಂಬಾ ಉತ್ಕೃಷ್ಟವಾಗಿ ಮೂಡಿ ಬಂದಿದೆ. ಒಳ್ಳೆಯ ಚಿಂತನೆಗಳನ್ನೂ, ಹಲವಾರು ಹೊಸ ಸಂಗತಿಗಳನ್ನೂ, ಅಪರೂಪದ ಮಾಹಿತಿಗಳನ್ನೂ, ಕೆಲವು ವಿಶೇಷ ಸುದ್ದಿಗಳನ್ನೂ ಹೊತ್ತು ತಂದಿರುವ ಈ ಸಂಚಿಕೆ ಮನೆ ಮಂದಿಗೆಲ್ಲ ಇಷ್ಟವಾಯಿತು.

**ಕೆ.ಎಸ್. ಮಣಿ, ಅರಸೀಕೆರೆ.**

'ಕೌಶಲ್ಯ ವಿಶೇಷಾಂಕ'ವು ತುಂಬಾ ಉಪಯುಕ್ತ ಸಂಚಿಕೆಯಾಗಿ ಮೂಡಿ ಬಂದಿದೆ. ಇದನ್ನು ಓದುವ ಮೂಲಕ ಮಕ್ಕಳಲ್ಲಿ ಆತ್ಮವಿಶ್ವಾಸ ಹೆಚ್ಚುತ್ತದೆ. ಜೀವನದಲ್ಲಿ ನೀತಿಯನ್ನೂ ಅಳವಡಿಸಿಕೊಳ್ಳುತ್ತಾರೆ. ತಮ್ಮ ಶೈಕ್ಷಣಿಕ ವ್ಯಾಸಂಗದಲ್ಲೂ ಹೆಚ್ಚು ಆಸಕ್ತಿಯನ್ನು ಹೊಂದುತ್ತಾರೆ. ರಾಮ್‌ರಾಜ್ ಸಂಸ್ಥಾಪಕರಾದ ಕೆ.ಆರ್.ನಾಗರಾಜನ್ ಅವರ ಸಂಪಾದಕೀಯವೂ ಹೆಚ್ಚು ಮಾರ್ಮಿಕವಾಗಿದೆ.

**ಆರ್. ನಾಗನಾಥ್, ಕುಂದಾಪುರ.**

ಹಲವಾರು ನೈಜ ಘಟನೆಗಳು, ಸಾಧಕರ ಸಾಧನೆಗಳು, ಬದುಕಿನ ಸಂಗತಿಗಳನ್ನು ತುಂಬಾ ಅಂದವಾಗಿ ಸೊಗಸಾಗಿ ನೀಡುತ್ತಿರುವ ರಾಮ್‌ರಾಜ್‌ನ ಬಿಳುಪು ಭಾವನೆಗಳು ಸಂಚಿಕೆ ಮನೆಯ ಎಲ್ಲರಿಗೂ ಅಗತ್ಯವಾದ ಹಲವು ಮಾಹಿತಿಗಳನ್ನು ಹೊತ್ತು ತರುತ್ತಿದೆ. ಬದುಕಿನ ಪಾಠ ಹೇಳಿ ಕೊಡುವ ಈ ಸಂಚಿಕೆಗಳು ಅನನ್ಯತೆಯಿಂದ ಕೂಡಿರುತ್ತವೆ. ತಮಿಳು ಸಂಚಿಕೆಯ ಈ ಅನುವಾದ ಕೃತಿ ಎಲ್ಲಿಯೂ ಅನುವಾದದ ಛಾಯೆಯನ್ನು ಉಳಿಸಿಕೊಳ್ಳದೆ ಕನ್ನಡದ್ದೇ ಬರವಣಿಗೆ ಎಂಬಷ್ಟು ಸೊಗಸಾಗಿ ಅನುವಾದಿಸಿ ಕೊಡುತ್ತಿರುವ ಡಾ. ತಮಿಳ್ ಸೆಲ್ವಿಯವರ ಶೈಲಿ ನಮಗೆ ತುಂಬಾ ಇಷ್ಟವಾಗುತ್ತಿದೆ.

**ಪಿ.ಗಣಪತಿ, ಮಳವಳ್ಳಿ, ಮಂಡ್ಯ.**



## ಸಹಾಯ ಮಾಡದ ಜೀವನದಲ್ಲಿ ಅರ್ಥವಿಲ್ಲ!

ಕೆಲವರು 'ಫ್ರಾಂಕ್ ವಿಡಿಯೋ' ಎಂದು ತಮಾಷೆಯಾಗಿ ವಿಡಿಯೋಗಳನ್ನು ಮಾಡುತ್ತಾರೆ. ಇದು ಕ್ಯಾಮೆರಾವನ್ನು ಮರೆ ಮಾಡಿ, ಯಾರನ್ನಾದರೂ ತಮಾಷೆ ಮಾಡಿ ಚಿತ್ರೀಕರಿಸುವ ವಿಡಿಯೋ ಆಗಿರುತ್ತದೆ. ಇದೇ ರೀತಿ ಯುನೈಟೆಡ್ ಸ್ಟೇಟ್ಸ್‌ನಲ್ಲಿ, ರೇಸ್ ಮ್ಯಾನ್ ಎಂಬ ಒಬ್ಬ ಯೂಟ್ಯೂಬರ್ ಒಳ್ಳೆಯ ಕಾರ್ಯಗಳಿಗಾಗಿ ಇಂತಹ ಫ್ರಾಂಕ್ ವೀಡಿಯೊಗಳನ್ನು ಮಾಡುತ್ತಾನೆ. ಏನೋ ಒಂದು ಕೆಲಸವನ್ನು ಸುಮ್ಮನೆ ಮಾಡಿ, ಮನುಷ್ಯರಲ್ಲಿರುವ ಮಾನವೀಯತೆಯನ್ನು ಪರೀಕ್ಷಿಸುವುದು ಅವನ ಕಾರ್ಯ.

ಆ ನಗರದ ಅತ್ಯಂತ ಜನನಿಬಿಡ ಸಿಗ್ನಲ್ ಒಂದರಲ್ಲಿ ಒಬ್ಬ ವ್ಯಕ್ತಿ ನಿಂತು, "ನಾನು ನಿರಾಶ್ರಿತ ಮಾಜಿ ಸೈನಿಕ. ದಯವಿಟ್ಟು ನನಗೆ ಸಹಾಯ ಮಾಡಿ" ಎಂದು ಬರೆದ ಫಲಕವನ್ನು ಹಿಡಿದು ಭಿಕ್ಷೆ ಬೇಡುತ್ತಿದ್ದ. ರೇಸ್ ಮ್ಯಾನ್ ಅವನ ಬಳಿಗೆ ಹೋಗಿ ಅವನಿಗೆ ಸ್ವಲ್ಪ ಹಣವನ್ನು ನೀಡಿ, ನಂತರ "ನನ್ನ ಸಹೋದರ ಕಾಣೆಯಾಗಿದ್ದಾನೆ. ಇದು ಅವನ ಫೋಟೋ. ನೀವು ಅವನನ್ನು ಎಲ್ಲಿಯಾದರೂ ನೋಡಿದರೆ ದಯವಿಟ್ಟು ನನಗೆ ತಿಳಿಸಿ" ಎಂದು ಬರೆದ ಫೋಟೋವಿರುವ ಕಾಗದದ ತುಂಡನ್ನು ಅವನ ಕೈಗೆ ಕೊಟ್ಟು ದೂರ ಬಂದು ನಿಂತುಕೊಂಡು ಅವನೇನು ಮಾಡುತ್ತಿದ್ದಾನೆಂದು ಗಮನಿಸಲಾರಂಭಿಸಿದ.

ಆ ಮಾಜಿ ಸೈನಿಕ ಸ್ವಲ್ಪ ಹೊತ್ತು ಅದನ್ನು ನೋಡುತ್ತಾ ನಿಂತಿದ್ದ. ನಂತರ ತನಗಾಗಿ ಸಹಾಯ ಕೇಳದೆ, ಕಾಣೆ-ಯಾದ ವ್ಯಕ್ತಿಯ ಮಾಹಿತಿ ಇರುವ ಆ ಕಾಗದವನ್ನು ಎತ್ತಿ ಹಿಡಿದು ಎಲ್ಲರಿಗೂ ತೋರಿಸಲು ಪ್ರಾರಂಭಿಸಿದ. ಇದನ್ನು ನೋಡಿದ ರೇಸ್ ಮ್ಯಾನ್ ಅವನ ಬಳಿಗೆ ಬಂದು ಹೀಗೇಕೆ ಮಾಡುತ್ತಿದ್ದೀಯಾ ಎಂದು ಕೇಳಿದ. "ನಿನ್ನ ಸಹೋದರ ಸಿಗಲಿಲ್ಲ ಎಂದು ನೀನು ಚಿಂತಿತನಾಗಿದ್ದೀಯ. ಇಂತಹ ದೊಡ್ಡ ಚಿಂತೆ ನಿನಗಿರುವಾಗ ನಿನಗೆ ಸಹಾಯ ಮಾಡದಿದ್ದರೆ ಈ ಜೀವನದ ಅರ್ಥವೇನು?" ಎಂದು ಆ ವ್ಯಕ್ತಿ ಕೇಳಿದ.

ರೇಸ್‌ಮ್ಯಾನ್ ತನ್ನ ಫ್ರಾಂಕ್ ವಿಡಿಯೋಗಳ ಬಗ್ಗೆ ಅವನಿಗೆ ತಿಳಿಸಿ, ಅವನ ಕೈ ಕುಲುಕಿ ಅವನಿಗೆ ಉಡುಗೊರೆ ನೀಡಿದ.

## ಇದೂ ಕೂಡ ದಾನವೇ!

ಶಾಲೆಯ ಬಳಿ ಒಬ್ಬ ವೃದ್ಧೆ ಇಡ್ಲಿ ಅಂಗಡಿ ಇಟ್ಟಿದ್ದಳು. ಮನೆಯಲ್ಲಿ ಊಟ ಮಾಡದೇ ಇದ್ದ ದಿನಗಳಲ್ಲಿ ಕೆಲವು ಮಕ್ಕಳು ಇಲ್ಲಿಗೆ ಬಂದು ತಿಂಡಿ ತಿಂದು ಶಾಲೆಗೆ ಹೋಗುತ್ತಿದ್ದರು. ಒಂದು ದಿನ, ಮುಖ್ಯೋಪಾಧ್ಯಾಯರು ಆ ಅಂಗಡಿಯ ಮುಂದೆ ಹಾದು ಹೋಗುತ್ತಿದ್ದಾಗ ವೃದ್ಧೆ ಇಬ್ಬರು ಶಾಲಾ ಬಾಲಕಿಯರಿಂದ ಕೆಲಸ ಮಾಡಿಸಿಕೊಳ್ಳುತ್ತಿರುವುದನ್ನು ಗಮನಿಸಿದರು. ಅವರಲ್ಲಿ ಒಬ್ಬ ಹುಡುಗಿ ನೀರು ಹೊತ್ತು ತರುತ್ತಿದ್ದಳು, ಇನ್ನೊಬ್ಬಳು ಪಾತ್ರೆ ತೊಳೆಯುತ್ತಿದ್ದಳು.

ಪ್ರಾಂಶುಪಾಲರು ತಕ್ಷಣ ವೃದ್ಧೆಯ ಮೇಲೆ ಕೋಪ ಮಾಡಿಕೊಂಡರು. "ನಮ್ಮ ಶಾಲೆಯ ಮಕ್ಕಳ ಕೈಯಲ್ಲಿ ಏಕೆ ಕೆಲಸ ಮಾಡಿಸಿಕೊಳ್ಳುತ್ತಿದ್ದೀರಿ? ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದು ಅಪರಾಧ ಎಂಬುದು ನಿಮಗೆ ತಿಳಿದಿಲ್ಲವೇ?" ಎಂದು ರೇಗಿದರು.

ಅವರನ್ನು ಪ್ರತ್ಯೇಕವಾಗಿ ಪಕ್ಕಕ್ಕೆ ಕರೆದು ವೃದ್ಧೆ ನಿಧಾನವಾಗಿ ಹೇಳಿದಳು : "ಸಾರ್, ಕೋಪ ಮಾಡಿಕೊಳ್ಳಬೇಡಿ! ಆ ಇಬ್ಬರೂ ಮಕ್ಕಳು ಬಡವರು. ಅವರಿಗೆ ಮನೆಯಲ್ಲಿ ತಿನ್ನಲು ಯಾವ ದಾರಿಯೂ ಇಲ್ಲ. ಅವರಿಗೆ ದಿನವೂ ಆಹಾರ ಸಿಗುವುದಿಲ್ಲ. ನಾನು ಅವರಿಗೆ ಪ್ರತಿದಿನ ಇಡ್ಲಿ ಕೊಡುತ್ತೇನೆ. ನಾನು ಅವುಗಳನ್ನು ಅವರಿಗೆ ಸುಮ್ಮನೆ ಕೊಟ್ಟರೆ ಅದು ಸರಿಯಾಗುವುದಿಲ್ಲ. ತಾವು ಕಷ್ಟಪಟ್ಟು ಕೆಲಸ ಮಾಡಿದರೆ ಮಾತ್ರ ನಮಗೆ ಏನಾದರೂ ಸಿಗುತ್ತದೆ ಎಂದು ಅವರು ಅರ್ಥ ಮಾಡಿಕೊಳ್ಳಬೇಕೆಂದು ನಾನು ಬಯಸುತ್ತೇನೆ. ಅದಕ್ಕಾಗಿಯೇ ನಾನು ಈ ರೀತಿಯ ಸಣ್ಣ ಕೆಲಸಗಳನ್ನು ಅವರಿಂದ ಮಾಡಿಸಿಕೊಂಡು 'ನೀವು ಮಾಡಿದ ಕೆಲಸಕ್ಕೆ ನೀವು ಹೊಟ್ಟೆ ತುಂಬಾ ತಿನ್ನಬಹುದು' ಎಂದು ಹೇಳುತ್ತೇನೆ. ಅವರು ಕೂಡ ಯಾವುದೇ ನಾಚಿಕೆಯಿಲ್ಲದೆ ತಿನ್ನುತ್ತಾರೆ".

"ನಾವು ಪುಸ್ತಕದ ಆಧಾರದ ಮೇಲೆ ಮಕ್ಕಳಿಗೆ ಪಾಠ ಕಲಿಸುತ್ತಿದ್ದೇವೆ. ನೀವು ಜೀವನ ಪಾಠ ಕಲಿಸುತ್ತಿದ್ದೀರಿ" ಎಂದು ಹೇಳಿದ ಮುಖ್ಯೋಪಾಧ್ಯಾಯರು ವೃದ್ಧೆಗೆ ನಮಸ್ಕರಿಸಿ ಅಲ್ಲಿಂದ ಮುಂದೆ ಸಾಗಿದರು.



## ನಮಗೇ ಹಿಂದಿರುಗಿ ಬರುತ್ತದೆ!

ನಿರ್ಜೀವ ವಸ್ತುಗಳು ಸಹ ನಮಗೆ ಉಡುಗೊರೆಗಳನ್ನು ನೀಡುತ್ತವೆ. ಮರವು ನಮಗೆ ನೆರಳು ನೀಡುವ ಮೂಲಕ ಸಹಾಯ ಮಾಡುತ್ತದೆ. ಕೊಳಲು ಸಂಗೀತಕ್ಕೆ ಜೀವ ನೀಡುವ ಮೂಲಕ ಸಹಾಯ ಮಾಡುತ್ತದೆ. ಏಣಿ ಮೇಲೆ ಏರಲು ನಮಗೆ ಸಹಾಯ ಮಾಡುತ್ತದೆ. ನಾವು ಸೂಕ್ಷ್ಮವಾಗಿ ಗಮನಿಸಿದರೆ ಪ್ರಕೃತಿಯಲ್ಲಿರುವ ಎಲ್ಲವೂ ನಮಗೆ ಸಹಾಯ ಮಾಡುತ್ತವೆ ಎಂಬುದು ನಮಗೆ ಅರ್ಥವಾಗುತ್ತದೆ. ಹಾಗಿರುವಾಗ ಮನುಷ್ಯರಾದ ನಾವು ಕೂಡ ಇತರರಿಗೆ ಸಾಧ್ಯವಾದಷ್ಟು ಸಹಾಯ ಮಾಡಬೇಕು. ನಾವು ಇತರರಿಗೆ ಸಹಾಯ ಮಾಡಿದರೆ ಅದು ನಂತರ ನಮಗೇ ಹಿಂತಿರುಗುತ್ತದೆ. ಇದು ಪ್ರಪಂಚ ನಿಯಮ!



## ಭಾವನೆ ಉನ್ನತವಾದುದು!

ಬಾಗಿಲಲ್ಲಿ ಯಾರೋ ನಿಂತು ಭಿಕ್ಷೆ ಬೇಡುವ ಧ್ವನಿಯನ್ನು ಕೇಳಿ ಮನೆಯಾಕೆ ಹೊರಗೆ ಬಂದಳು. ಬೀದಿಯಲ್ಲಿ ಆಟವಾಡುತ್ತಿದ್ದ ತನ್ನ ಮಗಳನ್ನು ಕೂಗಿ ಕರೆದು, ಒಳಗೆ ಹೋಗಿ ಅಕ್ಕಿಯನ್ನು ತೆಗೆದುಕೊಂಡು ಬಂದು ನೀಡುವಂತೆ ಹೇಳಿದಳು. ಪಕ್ಕದ ಮನೆಯ ಮಹಿಳೆಯೂ ಅದನ್ನು ನೋಡಿ ತನ್ನ ಮಗಳ ಕೈಗಳಿಂದ ಅಕ್ಕಿ ದಾನ ಮಾಡಿದಳು. ಈ ಕಥೆ ನಿರಂತರವಾಗಿ ಮುಂದುವರೆಯಿತು.

ಹೀಗೇ ತುಂಬಾ ಕಾಲ ಕಳೆದು ಹೋಯಿತು. ಇಬ್ಬರೂ ಮಹಿಳೆಯರು ಸತ್ತು ಸ್ವರ್ಗಕ್ಕೆ ಹೋದರು. ಮೊದಲ ತಾಯಿಗೆ ಅಲ್ಲಿ ಉನ್ನತ ಸ್ಥಾನ ಸಿಕ್ಕಿತು, ಆದರೆ ಎರಡನೇ ತಾಯಿಗೆ ಕಡಿಮೆ ಸ್ಥಾನ ಸಿಕ್ಕಿತು. "ನಾವಿಬ್ಬರೂ ಒಂದೇ ಪ್ರಮಾಣದ ದಾನ ಮಾಡಿದೆವು. ಆದರೆ ನಮ್ಮೊಳಗೆ ಈ ತಾರತಮ್ಯ ಏಕೆ?" ಎರಡನೆಯವಳು ದೇವರೊಂದಿಗೆ ವಾದಿಸಿದಳು.

"ನಿಮ್ಮಿಬ್ಬರ ಕ್ರಿಯೆಗಳೂ ಒಂದೇ ಆಗಿವೆ. ಆದರೆ ನಿಮ್ಮ ಆಲೋಚನೆಗಳು ವಿಭಿನ್ನವಾಗಿವೆ! ಆಕೆ ತನ್ನ ಮಗುವಿನ ಕೈಯಿಂದ ದಾನ ಮಾಡಿಸಿದಳು. ಅದಕ್ಕೆ ಕಾರಣ ತನ್ನ ನಂತರವೂ ತನ್ನ ಮಗಳು ಈ ದಾನವನ್ನು ಹೀಗೆಯೇ ಮುಂದುವರಿಸಬೇಕೆಂದು ಅವಳು ಭಾವಿಸಿದಳು. ಆದರೆ ನೀನು ನಿನ್ನ ಮಗುವಿನ ಕೈಯಿಂದ ದಾನ ಮಾಡಿಸಿದ್ದು ನಿಜ. ಅದಕ್ಕೆ ಕಾರಣ ನಿನ್ನ ಸ್ವಂತ ಕೈಗಳಿಂದ ಅದನ್ನು ತೆಗೆದುಕೊಟ್ಟರೆ, ಹೆಚ್ಚು ಅಕ್ಕಿ ಖರ್ಚಾಗುತ್ತದೆ ಎಂದು ನೀನು ಭಾವಿಸಿದೆ. ನೀನು ದಾನ ನೀಡಿದ್ದು ನಿಜ. ಆದ್ದರಿಂದಲೇ ನಿನಗೆ ಸ್ವರ್ಗ ಸಿಕ್ಕಿದೆ. ಆದರೆ ಅದರೊಳಗೆ ನೀನು ಸ್ವಾರ್ಥದ ಆಲೋಚನೆಗಳನ್ನು ಹೊಂದಿದ್ದುದರಿಂದ ನಿನಗೆ ಆಕೆಗಿಂತ ಕೆಳಗಿನ ಸ್ಥಾನ ಸಿಕ್ಕಿದೆ" ಎಂದು ಭಗವಂತ ಹೇಳಿದ.



ಉನ್ನತ ಆಲೋಚನೆಗಳೊಂದಿಗೆ ಉದಾತ್ತ ಕೆಲಸಗಳನ್ನು ಮಾಡೋಣ!

## ಹೀಗೂ ದಾನ ಮಾಡಿದರು!



ಗುಜರಾತ್‌ನ ಮೆಕ್ಸಾನಾ ಎಂಬ ಊರಿನಲ್ಲಿ ವಾಸಿಸುವ ಖಿಮ್ಜಿಭಾಯಿ ಪ್ರಜಾಪತಿಯ ಹೆಸರು ಕೇಳದ ಜನರು ಬಹಳ ಕಡಿಮೆ. ಇಷ್ಟೆಲ್ಲಾ ಜನಪ್ರಿಯತೆ ಇದ್ದರೂ, ಅವರು ರಾಜಕಾರಣಿಯೇನಲ್ಲ, ಸರ್ಕಾರಿ ಅಧಿಕಾರಿಯೂ ಆಗಿರಲಿಲ್ಲ ಅಥವಾ ಬಹಳ ಶ್ರೀಮಂತರಾಗಿರಲಿಲ್ಲ. ಬದಲಿಗೆ ಆ ಊರಿನ ದೇವಾಲಯದ ಬಾಗಿಲ ಮುಂದಿದ್ದ ಭಿಕ್ಷುಕರಾಗಿದ್ದರು. ಆದರೂ ಅವರು ಏಕೆ ಪ್ರಸಿದ್ಧರಾದರು?

ಅಲ್ಲಿ ಬಡ ಕುಟುಂಬಗಳ ಹುಡುಗಿಯರು ಶಾಲೆಗೆ ಹೋಗುವುದೇ ಅಪರೂಪ. ಅವರನ್ನು ಶಾಲೆಗೆ ಕಳಿಸುವಂತೆ ಪ್ರೋತ್ಸಾಹಿಸುವುದನ್ನೇ ಖಿಮ್ಜಿಬಾಯಿ ತನ್ನ ಜೀವನದ ಧ್ಯೇಯವನ್ನಾಗಿ ಮಾಡಿಕೊಂಡಿದ್ದರು. ವರ್ಷವಿಡೀ ತಾವು ಭಿಕ್ಷೆ ಬೇಡುವ ಮೂಲಕ ಉಳಿಸಿದ ಹಣದಿಂದ ಅವರು ವರ್ಷಕ್ಕೊಮ್ಮೆ ಶಾಲೆಗೆ ಬರುತ್ತಿದ್ದಳು. ಅಲ್ಲಿ ಓದುತ್ತಿರುವ ಹುಡುಗಿಯರಿಗೆ ಅಗತ್ಯವಾಗಿ ಬೇಕಾದ ಪುಸ್ತಕಗಳು, ನೋಟ್‌ಬುಕ್‌ಗಳು, ಪೆನ್ನುಗಳು, ಪೆನ್ಸಿಲ್‌ಗಳು ಮತ್ತು ಬಟ್ಟೆಗಳನ್ನು ಖರೀದಿಸಿ ನೀಡುತ್ತಿದ್ದಳು.

ಒಮ್ಮೆ ಅವರ ಬಳಿ ಸಾಕಷ್ಟು ಹಣ ಸೇರಿತ್ತು. ಆಗ ಅವರು ತಮ್ಮೂರಿನ ಶಾಲೆಯಲ್ಲಿದ್ದ ಅತ್ಯಂತ ಬಡ ಕುಟುಂಬಗಳ 10 ಹುಡುಗಿಯರಿಗೆ ಆ ಹಣದಿಂದ ಚಿನ್ನದ ಓಲೆಗಳನ್ನು ಖರೀದಿಸಿ ನೀಡಿದರು. ತಮಗಾಗಿ ಒಂದು ಪೈಸೆಯನ್ನೂ ಉಳಿಸಿಕೊಳ್ಳದೆ ಹುಡುಗಿಯರಿಗೆ ಉಡುಗೊರೆಗಳನ್ನು ಖರೀದಿಸಿ ನೀಡಿದ ಖಿಮ್ಜಿಬಾಯಿ ಐದು ವರ್ಷಗಳ ಹಿಂದೆ ನಿಧನರಾದಾಗ, ಆ ಇಡೀ ಪ್ರದೇಶವೇ ಕಣ್ಣೀರಿನಿಂದ ಅವರಿಗೆ ಗೌರವ ಸಲ್ಲಿಸಿತು.



# ಶಿಕ್ಷಣ ದಾನ

ಮನುಷ್ಯರ ಮೇಲೆ ಕನಿಕರ ಪಟ್ಟು ಆ ಕಾಲದ ರಾಜರು ಉದಾರವಾಗಿ ನೀಡುತ್ತಿದ್ದ ದಾನಗಳ ಬಗ್ಗೆ ನಮ್ಮ ಪ್ರಾಚೀನ ಸಾಹಿತ್ಯ ಕೃತಿಗಳು ತುಂಬ ಅಗೌರವದಿಂದ ತಿಳಿಸುತ್ತವೆ. ಈ ಕಾಲದಲ್ಲಿ ಕೂಡ ಅಂತಹ ದಾನಿಗಳು ಹೇರಳವಾದ ಸಂಖ್ಯೆಯಲ್ಲಿದ್ದಾರೆ. ಕಠಿಣ ಪರಿಶ್ರಮದ ಮೂಲಕ ಸಂಪಾದಿಸಿದ ತಮ್ಮ ಅಪಾರ ಸಂಪತ್ತಿನ ಒಂದು ಭಾಗವನ್ನು ದಾನ ಮಾಡುವ ಮತ್ತು ಬಡವರ ಸೇವೆ ಮಾಡುವ ಎಲ್ಲಾ ಉದ್ಯಮಿಗಳೂ ದಾನಿಗಳೇ!

ಭಾರತದಲ್ಲಿ ಇಂತಹ ನೂರಾರು ದೇಣಿಗೆಗಳನ್ನು ನೀಡಿದವರನ್ನು ಉದಾಹರಣೆಗಳಾಗಿ ಉಲ್ಲೇಖಿಸಬಹುದು. ಶಿಕ್ಷಣವು ಇಂದು ಒಂದು ಕುಟುಂಬ ಮತ್ತು ಒಂದು ಪೀಳಿಗೆಯನ್ನು ಉನ್ನತೀಕರಿಸುವ ಏಣಿಯಾಗಿದೆ. ಇಂತಹ ಶೈಕ್ಷಣಿಕ ಅವಕಾಶಗಳು ಎಲ್ಲರಿಗೂ ಲಭ್ಯವಾಗುವಂತೆ ನೋಡಿಕೊಳ್ಳಲು ಅನೇಕ ಜನರು ಶ್ರಮಿಸುತ್ತಿದ್ದಾರೆ. ಉದಾಹರಣೆಗೆ, ಕಳೆದ ವರ್ಷ ಭಾರತದಲ್ಲಿ ಕೈಗಾರಿಕೋದ್ಯಮಿಗಳು ನೀಡಿದ ದೇಣಿಗೆಗಳು ರೂ. 10,380 ಕೋಟಿ. ಇದರಲ್ಲಿ ಅರ್ಧದಷ್ಟು ಕೇವಲ 10 ಕೈಗಾರಿಕೋದ್ಯಮಿಗಳು ನೀಡಿದ್ದಾರೆ. ಇಷ್ಟೊಂದು ದೇಣಿಗೆ ನೀಡಿದ ಅನೇಕ ಕೈಗಾರಿಕೋದ್ಯಮಿಗಳು ತಮ್ಮ ಹಣವನ್ನು ಶಿಕ್ಷಣಕ್ಕಾಗಿ ದೊಡ್ಡ ಪ್ರಮಾಣದಲ್ಲಿ ಬಳಸುವಂತೆ ಕೇಳಿಕೊಂಡಿದ್ದಾರೆ. ಅವರಲ್ಲಿ ಕೆಲವರು ದತ್ತಿ ಸಂಸ್ಥೆಗಳನ್ನು ಸಹ ನಡೆಸುತ್ತಾರೆ ಎಂಬುದು ಗಮನಾರ್ಹ.

ಅದೇ ರೀತಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿರುವ ವಿಶ್ವಪ್ರಸಿದ್ಧ ಶಿಕ್ಷಣ ಸಂಸ್ಥೆಗಳ ಬಗ್ಗೆಯೂ ಅನೇಕ ಕಥೆಗಳಿವೆ.

ಯುನೈಟೆಡ್ ಸ್ಟೇಟ್ಸ್‌ನ ಹಾರ್ವರ್ಡ್ ವಿಶ್ವವಿದ್ಯಾಲಯ ತುಂಬಾ ಪ್ರಸಿದ್ಧವಾದುದು. ಒಂದು ದಿನ ಆ ವಿಶ್ವವಿದ್ಯಾನಿಲಯಕ್ಕೆ ಒಬ್ಬ ಮಧ್ಯವಯಸ್ಕ ದಂಪತಿಗಳು ಬಂದಿದ್ದರು. ಅವರು ವಿಶ್ವವಿದ್ಯಾಲಯದ ನಿರ್ದೇಶಕರನ್ನು ನೋಡಲು ಬಯಸಿದ್ದರು. ಸರಳವಾದ ಉಡುಪಿನಲ್ಲಿದ್ದ ಮತ್ತು ಸಾಮಾನ್ಯವಾಗಿ ಕಾಣುತ್ತಿದ್ದ ಅವರನ್ನು ಸ್ವಾಗತಕಾರ, ಪ್ರವೇಶಕ್ಕಾಗಿ ವಿನಂತಿಯನ್ನು ಮಾಡಲು ಅವರು ಬಂದಿದ್ದಾರೆಂದು ಭಾವಿಸಿ, "ನಿರ್ದೇಶಕರು ಈಗ ಕಾರ್ಯನಿರತರಾಗಿದ್ದಾರೆ, ಅವರು ಈಗ ನಿಮ್ಮನ್ನು ನೋಡಲು ಸಾಧ್ಯವಿಲ್ಲ" ಎಂದು ಹೇಳಿದ.

"ಪರವಾಗಿಲ್ಲ, ನಾವು ಕಾಯುತ್ತೇವೆ" ಎಂದು ಅವರು ಅಲ್ಲಿದ್ದ ಬೆಂಚುಗಳ ಮೇಲೆ ಕುಳಿತುಕೊಂಡರು. ಎರಡು ಗಂಟೆಗಳು ಕಳೆದವು, ಆದರೆ ಅವರು ಚಲಿಸಲಿಲ್ಲ. ನಿರ್ದೇಶಕರ ಕೋಣೆಗೆ ಹೋದ ಸ್ವಾಗತಕಾರ, "ಅವರು ನಿಮ್ಮನ್ನು ನೋಡದೆ ಹೊರಡುವುದಿಲ್ಲ ಎಂದು ತೋರುತ್ತದೆ" ಎಂದು ಹೇಳಿದ. ನಿರ್ದೇಶಕರು ಇಷ್ಟವಿಲ್ಲದೆ ಅವರನ್ನು ಒಳಗೆ ಕರೆದರು.

ಒಳಗೆ ಬರುತ್ತಿದ್ದಂತೆ ದಂಪತಿಗಳು ಮೃದುವಾದ ಧ್ವನಿಯಲ್ಲಿ, "ನಮ್ಮ ಮಗ ಚಿಕ್ಕವನಿದ್ದಾಗ ತೀರಿಕೊಂಡ. ಅವನ ನೆನಪಿಗಾಗಿ ನಾವು ಏನಾದರೂ ಮಾಡಬೇಕೆಂದು ಬಯಸುತ್ತೇವೆ" ಎಂದರು. ನಿರ್ದೇಶಕರು ವ್ಯಂಗ್ಯವಾಗಿ, "ಇಲ್ಲಿ ಎಲ್ಲರಿಗೂ ಸ್ಮಾರಕ ನಿರ್ಮಿಸಿದರೆ ಇದು ಸ್ಮಶಾನವಾಗುತ್ತದೆ" ಎಂದರು.

"ಇಲ್ಲ, ನಾವು ಸ್ಮಾರಕ ಅಥವಾ ಪ್ರತಿಮೆಯನ್ನು ನಿರ್ಮಿಸಲು ಕೇಳುತ್ತಿಲ್ಲ. ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ನಮ್ಮ ಮಗನ ನೆನಪಿಗಾಗಿ ಕಟ್ಟಡವನ್ನು ನಿರ್ಮಿಸಬೇಕೆಂದು ನಾವು ಬಯಸುತ್ತೇವೆ" ಎಂದರು.

"ಅದಕ್ಕೆ ಎಷ್ಟು ಖರ್ಚಾಗುತ್ತದೆ ಎಂಬುದು ನಿಮಗೆ ಗೊತ್ತಾ? ನಮ್ಮ ಈ ಪ್ರಸ್ತುತ ಕಟ್ಟಡವನ್ನು ಇಲ್ಲಿ ಪೂರ್ಣಗೊಳಿಸಲು 70 ಲಕ್ಷ ಡಾಲರ್‌ಗಳು ಖರ್ಚಾಯಿತು" ನಿರ್ದೇಶಕರು ಜೋರು ಧ್ವನಿಯಲ್ಲಿ ಹೇಳಿದರು.



ಈಗ ದಂಪತಿಗಳು ಒಬ್ಬರನ್ನೊಬ್ಬರು ನೋಡಿಕೊಂಡರು. "ಏನು, ಒಂದು ವಿಶ್ವವಿದ್ಯಾಲಯವನ್ನು ನಿರ್ಮಿಸಲು ಕೇವಲ 70 ಲಕ್ಷ ಡಾಲರ್‌ಗಳು ಮಾತ್ರ ಖರ್ಚಾಗುತ್ತವೆಯೇ? ಹಾಗಾದರೆ ನಾವೇ ಒಂದು ವಿಶ್ವವಿದ್ಯಾಲಯವನ್ನು ನಿರ್ಮಿಸುತ್ತೇವೆ" ಎಂದು ಹೇಳಿ ಅವರು ಎದ್ದು ನಿಂತರು. ಆ ಕ್ಷಣ ಆ ನಿರ್ದೇಶಕರು ದಿಗ್ಭ್ರಮೆಗೊಂಡವರಂತೆ ಕುಳಿತುಕೊಂಡಿದ್ದರು!

ಲೆಲ್ಯಾಂಡ್ ಸ್ಟ್ಯಾನ್‌ಫೋರ್ಡ್ ಮತ್ತು ಜೆನ್ ಸ್ಟ್ಯಾನ್‌ಫೋರ್ಡ್ ಎಂಬ ಈ ದಂಪತಿಗಳಿಂದ ನಿರ್ಮಾಣವಾದದ್ದೇ ಲಂಡನ್ನಿನ ಪ್ರತಿಷ್ಠಿತ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯ! ಇದು 58 ನೊಬೆಲ್ ಪ್ರಶಸ್ತಿ ವಿಜೇತ ವಿಜ್ಞಾನಿಗಳನ್ನೂ ಮತ್ತು ವಿಶ್ವದ 74 ಶತಕೋಟ್ಯಾಧಿಪತಿಗಳನ್ನೂ ಉತ್ಪಾದಿಸಿದ ಶಿಕ್ಷಣ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಅಮೆರಿಕದ ಶೈಕ್ಷಣಿಕ ಕ್ಷೇತ್ರದಲ್ಲಿ ಅತ್ಯಂತ ಅವಿಸ್ಮರಣೀಯ ವ್ಯಕ್ತಿ ಆಂಡ್ರ್ಯೂ ಕಾರ್ನೆಗೀ! ಅವರನ್ನು ಅಮೇರಿಕನ್ ಇತಿಹಾಸದಲ್ಲಿ ಅತ್ಯಂತ ಶ್ರೀಮಂತ ವ್ಯಕ್ತಿ ಎಂದು ಕರೆಯಲಾಗುತ್ತದೆ. ಕಬ್ಬಿಣದ ಉದ್ಯಮದಲ್ಲಿ ಲಕ್ಷಾಂತರ ಹಣವನ್ನು ಸಂಪಾದಿಸಿದ್ದ ಅವರು, ತಮ್ಮ ಕೊನೆಯ ವರ್ಷಗಳಲ್ಲಿ ಉದಾರವಾಗಿ ಸಾಕಷ್ಟು ದಾನವನ್ನು ನೀಡುತ್ತಲೇ ಇದ್ದರು. ಎಲ್ಲಾ ಶ್ರೀಮಂತರು ತಮ್ಮಲ್ಲಿರುವ ಸಂಪತ್ತನ್ನು ಸಮಾಜವನ್ನು ಸುಧಾರಿಸಲು ಬಳಸಬೇಕೆಂದು ಅವರು ಸಾರಿದರು. ಅವರು ಪ್ರಪಂಚದಾದ್ಯಂತ ಸುಮಾರು 3,000 ಗ್ರಂಥಾಲಯಗಳನ್ನು ನಿರ್ಮಿಸಿದರು. ಅವರು ಸ್ಥಾಪಿಸಿದ ಕಾರ್ನೆಗೀ ಮೆಲನ್ ವಿಶ್ವವಿದ್ಯಾಲಯವು ಲಕ್ಷಾಂತರ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಿದೆ.

ಇವರುಗಳಂತೆಯೇ ಮತ್ತೊಬ್ಬ ವ್ಯಕ್ತಿ, ಚಕ್ ಫಿನೇ! ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ತಮ್ಮ 92 ವರ್ಷ ವಯಸ್ಸಿನವರೆಗೂ ಅವರು ಒಂದು ಸರಳ ಅಪಾರ್ಟ್‌ಮೆಂಟ್‌ನಲ್ಲಿ ವಾಸಿಸುತ್ತಿದ್ದರು. ಕಳೆದ ವರ್ಷ ಅವರು ಸಾಯುವವರೆಗೂ, ತಮ್ಮ ಮನೆ ತಮಗೆ ಅಸಮರ್ಪಕವೆಂದು ಅವರು ಪರಿಗಣಿಸಲಿಲ್ಲ. ಜೀವನದಲ್ಲಿ ಎಂದಿಗೂ ಅವರು ದುಬಾರಿ ಬಟ್ಟೆಗಳನ್ನು ಖರೀದಿಸಲಿಲ್ಲ ಅಥವಾ ಧರಿಸಲಿಲ್ಲ. ಅವರು ಲಕ್ಷಾಂತರ ಬೆಲೆಬಾಳುವ ಬ್ರಾಂಡ್ ಕೈಗಡಿಯಾರಗಳನ್ನು ಖರೀದಿಸಲಿಲ್ಲ ಅಥವಾ ಧರಿಸಲಿಲ್ಲ ಮತ್ತು ಅವರು ಧರಿಸಿದ್ದ ಕನ್ನಡಕವನ್ನು ಅವು ಮುರಿಯುವವರೆಗೂ ಬದಲಾಯಿಸುತ್ತಿರಲಿಲ್ಲ. ಅವರ ಬಳಿ ಕಾರು ಇರಲಿಲ್ಲ. ಅವರು ಕೆಲಸ ಮಾಡುವಾಗ ಕಚೇರಿ ಕಾರನ್ನು ಬಳಸುತ್ತಿದ್ದರು ಅಥವಾ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದರು. ಅವರು ತಮ್ಮ ಹಳೆಯ ಬ್ಯಾಗ್ ಅನ್ನೇ ಕಚೇರಿಗೆ ಕೊಂಡೊಯ್ಯುತ್ತಿದ್ದರು. ಆ ಬ್ಯಾಗ್‌ನ ಬಣ್ಣ ಅಲ್ಲಲ್ಲಿ ಮಸುಕಾಗಿತ್ತು.



ಇತರರು ಅದನ್ನು ನೋಡಿದರೆ ಏನು ಅಂದುಕೊಳ್ಳುತ್ತಾರೆ ಎಂಬ ಬಗ್ಗೆ ಅವರಿಗೆ ಚಿಂತೆ ಇರಲಿಲ್ಲ.

ಈ ವ್ಯಕ್ತಿ ತಮ್ಮ ಇಡೀ ಜೀವನದಲ್ಲಿ, ಸುಮಾರು 67,000 ಕೋಟಿ ರೂಪಾಯಿಗಳನ್ನು ದಾನವಾಗಿ ನೀಡಿದ್ದಾರೆ ಎಂದು ಹೇಳಿದರೆ ನಿಮಗೆ ನಂಬುವುದು ಕಷ್ಟವಾಗಬಹುದು. ಅವರು ಚಿಲ್ಲರೆ ವ್ಯಾಪಾರದ ಮೂಲಕ ಕೋಟಿಗಟ್ಟಲೆ ಸಂಪಾದಿಸಿದರು. ಆದರೆ ಅವರು ತಮಗಾಗಿ ಏನನ್ನೂ ಇಟ್ಟುಕೊಳ್ಳಲಿಲ್ಲ. ಅವರು ಎಲ್ಲವನ್ನೂ ದಾನಕ್ಕಾಗಿ ಬರೆದಿಟ್ಟರು. ಏಕೆ ಎಂದು ಕೇಳಿದಾಗ ಅವರು, "ಮನುಷ್ಯರು ಹುಟ್ಟುವಾಗ ಬೆತ್ತಲೆಯಾಗಿ ಹುಟ್ಟುತ್ತಾರೆ ಮತ್ತು ಅಂತಿಮವಾಗಿ ಹೋಗುವಾಗ ಒಂಟಿಯಾಗಿ ಹೋಗುತ್ತಾರೆ!" ಎಂದು ಹೇಳಿದರು.

ಅವರು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯ, ಕಾರ್ನೆಲ್ ವಿಶ್ವವಿದ್ಯಾಲಯ ಮತ್ತು ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯ ಸೇರಿದಂತೆ ಯುನೈಟೆಡ್ ಸ್ಟೇಟ್ಸ್‌ನ ಅನೇಕ ಶಿಕ್ಷಣ ಸಂಸ್ಥೆಗಳಿಗೆ ಹಣಕಾಸು ಒದಗಿಸಿದರು. ಅವರು ಐರ್ಲೆಂಡ್‌ನಲ್ಲಿ ಏಳು ಹೊಸ ವಿಶ್ವವಿದ್ಯಾಲಯಗಳನ್ನು ನಿರ್ಮಿಸಿದರು. ಅವರು ಇತರ ಹಲವು ದೇಶಗಳ ಶೈಕ್ಷಣಿಕ ಸಂಸ್ಥೆಗಳಿಗೂ ಸಹಾಯ ಮಾಡಿದ್ದಾರೆ. ಆದಾಗ್ಯೂ, ಈ ಲೋಕೋಪಕಾರಿ ಎಲ್ಲಿಯೂ ತಮ್ಮ ಹೆಸರನ್ನು ಬಹಿರಂಗಪಡಿಸಲಿಲ್ಲ ಮತ್ತು ಕಡೆಯವರೆಗೂ ಮೌನವಾಗಿಯೇ ಸಹಾಯ ಮಾಡಿದ್ದಾರೆ.


**ಬಿಳುಪು ಚಂದಾ...**

**ಮಹಿಳಾ ದಿನಾಚರಣೆಯ ವಿಶೇಷ ರಿಯಾಯಿತಿ!**



ಮಾರ್ಚ್ 8ನೇ ದಿನದಂದು ಆಚರಿಸಲಾಗುವ, ವಿಶ್ವ ಮಹಿಳಾ ದಿನಾಚರಣೆಯ ಅಂಗವಾಗಿ 'ಬಿಳುಪು ಭಾವನೆಗಳು' ಸಂಚಿಕೆಯ ವಾರ್ಷಿಕ ಚಂದಾ ಸಲ್ಲಿಸುವ ಮಹಿಳೆಯರಿಗಾಗಿ ವಿಶೇಷ ರಿಯಾಯಿತಿಯನ್ನು ನೀಡಲಾಗುತ್ತದೆ.

ಒಂದು ವರ್ಷದ ಚಂದಾ : ರೂ. ~~280~~/-
ಮಹಿಳೆಯರಿಗಾಗಿ ರಿಯಾಯಿತಿ ಚಂದಾ : ರೂ. 150/-

ಎರಡು ವರ್ಷಗಳ ಚಂದಾ : ರೂ.~~380~~/-
ಮಹಿಳೆಯರಿಗಾಗಿ ರಿಯಾಯಿತಿ ಚಂದಾ : 300/-

ಈ ರಿಯಾಯಿತಿಯನ್ನು ಸಂಪೂರ್ಣವಾಗಿ ಬಳಸಿಕೊಂಡು, ಮಹಿಳೆಯರು ತಮ್ಮನ್ನೂ, ತಮ್ಮ ಕುಟುಂಬವನ್ನೂ, ತಮ್ಮ ಪರಿಸರವನ್ನೂ ಇನ್ನೂ ವಿಶೇಷವಾಗಿ ಅರಿತು, ಒಳಿತನ್ನು ಗಳಿಸಲಿ ಎಂದು ಬಯಸುತ್ತೇವೆ. (ಚಂದಾ ಸಲ್ಲಿಸುವ ವಿಧಾನಗಳಿಗಾಗಿ 23ನೇ ಪುಟವನ್ನು ಗಮನಿಸಿ).

# ಹಸಿವಿನ ರೋಗವನ್ನು ನಿವಾರಿಸುವ

# ಉದಾರತೆ!

ಜಯಾ ತನ್ನ ಗಂಡನನ್ನು ಸಣ್ಣ ಶಸ್ತ್ರಚಿಕಿತ್ಸೆಗಾಗಿ ಮನೆಯ ಹತ್ತಿರದ ಒಂದು ಆಸ್ಪತ್ರೆಗೆ ಸೇರಿಸಿದ್ದಳು. ಅವರು ಸುಮಾರು ಒಂದು ವಾರ ಆಸ್ಪತ್ರೆಯಲ್ಲಿಯೇ ಇರಬೇಕಾಯಿತು. ಅವರ ಪತಿಯು ಪಥ್ಯದ ಆಹಾರವನ್ನು ಸೇವಿಸಬೇಕಾಗಿದ್ದುದರಿಂದ ಆಸ್ಪತ್ರೆಯಲ್ಲಿಯೇ ಅವರಿಗೆ ಊಟ ನೀಡುತ್ತಿದ್ದರು. ಜಯಾ ಅವರ ಮನೆಗೆ ಒಬ್ಬ ಕೆಲಸದಾಕೆ ಅಡುಗೆ ಮಾಡಲು ಬರುತ್ತಿದ್ದಳು. ಅವಳು ಅಡುಗೆ ಮಾಡಿ ಪ್ರತಿದಿನ ಜಯಾಗೆ ತಂದು ಕೊಡುತ್ತಿದ್ದಳು.

ಹೀಗೆ ಒಂದು ವಾರ ಆಸ್ಪತ್ರೆಯಲ್ಲಿದ್ದಾಗ ಜಯಾ ಒಂದು ವಿಷಯವನ್ನು ಗಮನಿಸಿದರು. ರೋಗಿಗಳಿಗೆ ಆಸ್ಪತ್ರೆಯಲ್ಲಿಯೇ ಆಹಾರವನ್ನು ನೀಡಲಾಗುತ್ತದೆ. ಇದು ಸಣ್ಣ ಆಸ್ಪತ್ರೆಯಾಗಿರುವುದರಿಂದ ಕ್ಯಾಂಟೀನ್‌ನ ಸೌಲಭ್ಯ ಕೂಡ ಇರಲಿಲ್ಲ. ಆದ್ದರಿಂದ, ರೋಗಿಯೊಂದಿಗೆ ಇರುವವರಿಗೆ ಆಹಾರ ಸಿಗುತ್ತಿರಲಿಲ್ಲ. ಅವರು ಆಹಾರಕ್ಕಾಗಿ ಕಷ್ಟ ಪಡುತ್ತಿದ್ದರು. ಅವರು ಹೊರಗೆ ಹೋಗಿ ಆಹಾರವನ್ನು ಖರೀದಿಸಿ ಸೇವಿಸಬಹುದು ಅಥವಾ ಅವರು ಫೋನ್ ಮೂಲಕ ಆಹಾರವನ್ನು ಆರ್ಡರ್ ಮಾಡಿ ತರಿಸಿಕೊಳ್ಳಬಹುದು. ಆದರೂ ಅನೇಕ ಜನರು ಹಾಗೆ ಮಾಡುತ್ತಿರಲಿಲ್ಲ. 'ರೋಗಿ ತೊಂದರೆಯಲ್ಲಿದ್ದಾಗ ನಾವು ಮಾತ್ರ ರುಚಿಕರವಾಗಿ ತಿನ್ನುವುದೇ?' ಎಂಬ ಅಪರಾಧಿ ಭಾವನೆ ಅವರನ್ನು ತಡೆಯುತ್ತಿತ್ತೆಂದು ತೋರುತ್ತದೆ! ವಿಶೇಷವಾಗಿ ಸಾಯಂಕಾಲವಾದ ಮೇಲೆ ಅಕ್ಕಪಕ್ಕದ ಚಿಕ್ಕಪುಟ್ಟ ಹೋಟೆಲ್‌ಗಳು ಕೂಡ ಮುಚ್ಚಿರುತ್ತಿದ್ದುದರಿಂದ ಅನೇಕ ಜನರು ರಾತ್ರಿಯಲ್ಲಿ ಊಟ ಮಾಡದೆ ಹಸಿವಿನಿಂದ ಮಲಗುತ್ತಿದ್ದರು.

"ರೋಗಿ ಅನುಭವಿಸುತ್ತಿರುವ ನೋವನ್ನು ಸಂಬಂಧಿಕರು ತಾವು ಹಂಚಿಕೊಳ್ಳಲು ಸಾಧ್ಯವಿಲ್ಲ. ಅದಕ್ಕಾಗಿ ಅವರು ಹೀಗೆ ಬಳಲಬೇಕೇ?" ಎಂದು ಜಯಾ ಯೋಚಿಸಿದಳು. "ನಮ್ಮ ಮನೆ ಹತ್ತಿರದಲ್ಲೇ ಇರುವುದರಿಂದ ನಮಗೆ ಮನೆಯಿಂದಲೇ ಆಹಾರ ಸಿಗುತ್ತದೆ. ಬಹಳ ದೂರದಿಂದ ಬಂದಿರುವ ಜನರು ಏನು ಮಾಡುತ್ತಾರೆ?" ಎಂದು ಅವಳು ಆತಂಕದಿಂದ ಯೋಚಿಸಿದಳು. ಜಯಾ ನಿವೃತ್ತ ಸರ್ಕಾರಿ ಅಧಿಕಾರಿ. ಅವರ ಪತಿ ಕೂಡ ಸರ್ಕಾರಿ ಉದ್ಯೋಗಿಯಾಗಿದ್ದರು. ಇಬ್ಬರಿಗೂ ಸಾಕಷ್ಟು ಪಿಂಚಣಿ ಸಿಗುತ್ತಿತ್ತು. ಆದ್ದರಿಂದ ಅವರು ಖರ್ಚಿನ ಬಗ್ಗೆ ಚಿಂತಿಸಬೇಕಾಗಿರಲಿಲ್ಲ. ಅವರ ಇಬ್ಬರೂ ಮಕ್ಕಳು ವಿದೇಶದಲ್ಲಿರುವುದರಿಂದ, ಇವರು ಇಲ್ಲಿ ಒಂಟಿಯಾಗಿ ವಾಸಿಸುತ್ತಿದ್ದರು. ಅವರ ಮಕ್ಕಳು ಅಥವಾ ಮೊಮ್ಮಕ್ಕಳು ಸುತ್ತಮುತ್ತ ಇಲ್ಲದ ಕಾರಣ ಸಮಯ ಕಳೆಯುವುದು ಕೂಡ ಅವರಿಗೆ ಕಷ್ಟಕರವಾಗಿತ್ತು.

ಜಯಾ ಮತ್ತು ಅವರ ಪತಿ ತಮ್ಮ ನಿವೃತ್ತಿಯ ದಿನಗಳನ್ನು ಅರ್ಥಪೂರ್ಣವಾಗಿಸಲು ನಿರ್ಧರಿಸಿದರು. ತಮ್ಮ ಕೆಲಸದಾಕೆಯ ಸಹಾಯದಿಂದ, ಅವರು ಪ್ರತಿದಿನ ಹೆಚ್ಚಿನ ಭೋಜನವನ್ನು ತಯಾರಿಸುತ್ತಿದ್ದರು. ಅವರು ಪ್ರತಿದಿನ ಇಡ್ಲಿ, ದೋಸೆ ಮತ್ತು ಚಪಾತಿಗಳಂತಹ ಅಡುಗೆಗಳನ್ನು ಮಾಡಿಸುತ್ತಿದ್ದರು. ಅವರು ಅದನ್ನು ಪ್ಯಾಕ್ ಮಾಡಿಕೊಂಡು ಸಂಜೆ ಏಳು ಗಂಟೆಗೆ ಆಸ್ಪತ್ರೆಗೆ ಬರುತ್ತಿದ್ದರು. ಅಷ್ಟೊತ್ತಿಗೆ ಆಸ್ಪತ್ರೆಯಲ್ಲಿ ರೋಗಿಗಳನ್ನು ಭೇಟಿ ಮಾಡುವ ಸಮಯ





ಮುಗಿದು ಎಲ್ಲರೂ ಹೊರಟು ಹೋಗುತ್ತಿದ್ದರು.

ಇವರು ಪ್ರತಿ ಕೋಣೆಯ ಬಾಗಿಲು ತಟ್ಟಿ, ರೋಗಿಯ ಹೆಸರನ್ನು ಹೇಳಿ, ಅವರನ್ನು ನೋಡಿಕೊಳ್ಳುವವರಿಗೆ ಆಹಾರ ಇದೆಯೇ ಎಂದು ಕೇಳುತ್ತಿದ್ದರು. ಇಲ್ಲದಿದ್ದರೆ, ಇವರು ಅವರಿಗೆ ಪಾರ್ಸೆಲ್ ನೀಡುತ್ತಿದ್ದರು ಮತ್ತು ಕೆಲವರು ತಮ್ಮ ಬಳಿ ಆಹಾರ ಇಲ್ಲದಿದ್ದರೂ 'ನನ್ನ ಬಳಿ ಆಹಾರ ಇದೆ' ಎಂದು ಹೇಳುತ್ತಿದ್ದರು. ಕೆಲವರು ನಾಚಿಕೆಪಡುತ್ತಾರೆ ಮತ್ತು ತಮ್ಮ ಬಳಿ ತೆಗೆದುಕೊಳ್ಳಲು ನಿರಾಕರಿಸುತ್ತಾರೆ ಎಂಬುದು ಇವರಿಗೆ ಅರ್ಥವಾಯಿತು. ಜಯಾ ಅವರ ಸ್ವಾಭಿಮಾನಕ್ಕೆ ಧಕ್ಕೆಯಾಗದಂತೆ ಘನತೆಯಿಂದ ತಮ್ಮನ್ನು ಪರಿಚಯಿಸಿಕೊಳ್ಳುತ್ತಿದ್ದರು. ಅವರು ಇದನ್ನು ಏಕೆ ಮಾಡುತ್ತಿದ್ದಾರೆಂದು ಸಂಕ್ಷಿಪ್ತವಾಗಿ ವಿವರಿಸುತ್ತಿದ್ದರು ಮತ್ತು ನಂತರ ಅವರಿಗೆ ಪಾರ್ಸೆಲ್ ನೀಡುತ್ತಿದ್ದರು.

ಒಂದು ಹಂತದಲ್ಲಿ, ಆಸ್ಪತ್ರೆಯ ಸಿಬ್ಬಂದಿಯೇ ಜವಾಬ್ದಾರಿ ವಹಿಸಿಕೊಂಡರು. ವಾರ್ಡ್‌ಗಳನ್ನು ನೋಡಿಕೊಳ್ಳುವ ದಾದಿಯರು ಪ್ರತಿದಿನ ಎಷ್ಟು ಜನರಿಗೆ ಆಹಾರ ಬೇಕು ಎಂದು ಮೊದಲೇ ಹೇಳುವ ಹಂತಕ್ಕೆ ಪರಿಸ್ಥಿತಿ ಬದಲಾಯಿತು. ಒಂದು ತಿಂಗಳೊಳಗೆ, ಜಯಾ ಅವರ ಮನೆಯ ಪಕ್ಕದ ಬೀದಿಯ ಮಹಿಳೆಯೊಬ್ಬರು ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದರು. ಇವರ ಸೇವೆಯನ್ನು ನೋಡಿ, "ವಾರವಿಡೀ ನೀವೊಬ್ಬರೇ ಆಹಾರ ಒದಗಿಸಿದರೆ ಹೇಗೆ? ವಾರಕ್ಕೆ ಎರಡು ದಿನಗಳು ನಾನೂ ಇದನ್ನು ಮಾಡುತ್ತೇನೆ. ನನಗೂ ಒಂದು ಅವಕಾಶ ಕೊಡಿ" ಎಂದು ಕೇಳಿದರು. ಜಯಾ ತಮ್ಮ ಸೇವೆ ಸಾರ್ಥಕಗೊಂಡಿದೆ ಎಂದು ಭಾವಿಸಿದರು.

ಆ ವರ್ಷದ ಕೊನೆಯಲ್ಲಿ ರಜೆಗೆಂದು ಮನೆಗೆ ಬಂದಿದ್ದ ಜಯಾ ಅವರ ಮಕ್ಕಳು ತಮ್ಮ ಮನೆಯನ್ನು ನೋಡಿ ಆಶ್ಚರ್ಯಚಕಿತರಾದರು. ಅವರ ಮನೆಯಲ್ಲಿ ಹಲಸಿನ ಹಣ್ಣು, ಕಡಲೆಕಾಯಿ, ಬೇಳೆಗಳು, ಹಣ್ಣುಗಳು ಮತ್ತು ತರಕಾರಿಗಳು ಹೇರಳವಾಗಿ ತುಂಬಿದ್ದವು! ಅನೇಕ ರೋಗಿಗಳು ತಾವು ಮನೆಗೆ ಹಿಂದಿರುಗಿ ಹೋದ ಮೇಲೆ ಮತ್ತೊಮ್ಮೆ ವೈದ್ಯರ ಬಳಿ ಮರುಪರಿಶೀಲನೆಗಾಗಿ ಬರುವಾಗ ತಮ್ಮ ಮನೆಗಳಿಂದ ತಮ್ಮ ಪ್ರೀತಿಯ ಉಡುಗೊರೆಯಾಗಿ ತಂದು ಕೊಟ್ಟಿದ್ದ ವಸ್ತುಗಳು ಅವು!

**ನಾವು ಇತರರಿಗೆ ದಯೆಯಿಂದ ಮಾಡುವ ಯಾವುದೇ ಕೆಲಸವೂ ನಮ್ಮಲ್ಲಿ ಆಹ್ಲಾದಕರ ಬದಲಾವಣೆಗಳನ್ನು ತರುತ್ತದೆ. ಅವು:**

- ದಯಾಳು ಹೃದಯವುಳ್ಳ ಅನೇಕ ಜನರಿದ್ದಾರೆ. ಅವರು ಇತರರಿಗೆ ಸಹಾಯ ಮಾಡಲು ವಿಭಿನ್ನ ಕೋನಗಳಿಂದ ಯೋಚಿಸುತ್ತಾರೆ. ಇದು ಅವರ ಕಲ್ಪನೆ ಮತ್ತು ಆಲೋಚನಾ ಕೌಶಲ್ಯವನ್ನು ಅಭಿವೃದ್ಧಿಪಡಿಸುತ್ತದೆ. ಅವರು ಹೊಸ ವಿಷಯಗಳನ್ನು ಕಲಿಯಲು ಮತ್ತು ಜೀವನದಲ್ಲಿ ಬೆಳೆಯಲು ಸಾಧ್ಯವಾಗುತ್ತದೆ.
- ಅವರು ಎಲ್ಲವನ್ನೂ ತಮ್ಮದೇ ಆದ ದೃಷ್ಟಿಕೋನದಿಂದ ಮಾತ್ರ ನೋಡದೆ ಇತರರು ಏನು ಯೋಚಿಸುತ್ತಾರೆ ಎಂಬುದರ ಬಗ್ಗೆ ಕೂಡ ಯೋಚಿಸುವ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಇದು ಅವರು ಯಾವುದೇ ವಿಷಯವನ್ನು ಸಂಪೂರ್ಣವಾಗಿ ಸಮೀಪಿಸಲು ಅನುವು ಮಾಡಿಕೊಡುತ್ತದೆ. ಅವರು ವಿಭಿನ್ನ ವಿಚಾರಗಳನ್ನು ಸಹ ಸ್ವೀಕರಿಸುತ್ತಾರೆ. ಇದು ಅವರನ್ನು ಎಲ್ಲರ ನೆಚ್ಚಿನವರನ್ನಾಗಿ ಮಾಡುತ್ತದೆ.
- ಸಹಾನುಭೂತಿಯುಳ್ಳ ಮನಸ್ಸಿನಲ್ಲಿ ಉದ್ವೇಗ, ಕಿರಿಕಿರಿ ಮತ್ತು ಕೋಪದಂತಹ ನಕಾರಾತ್ಮಕ ಭಾವನೆಗಳು ಬೆಳೆಯುವುದಿಲ್ಲ. ಅವರು ಒತ್ತಡ ಅಥವಾ ಮಾನಸಿಕ ಯಾತನೆಯಿಂದ ಬಳಲುವುದಿಲ್ಲ. ಅವರು ಇತರರ ಸಮಸ್ಯೆಗಳ ಬಗ್ಗೆ ಕಾಳಜಿ ವಹಿಸುವುದರಿಂದ, ಅವರು ತಮ್ಮದೇ ಆದ ಸಮಸ್ಯೆಗಳ ಬಗ್ಗೆ ಹೆಚ್ಚು ಯೋಚಿಸುವುದಿಲ್ಲ. ಸಮಸ್ಯೆ ಉದ್ಭವಿಸಿದರೂ, ಅವರು ಅದರಿಂದ ಸುಲಭವಾಗಿ ಚೇತರಿಸಿಕೊಳ್ಳುತ್ತಾರೆ.
- ಇತರರಿಗೆ ಸಹಾಯ ಮಾಡುವ ಗುಣ ಹೊಂದಿರುವ ಜನರು ಅವರ ಕಣ್ಣಲ್ಲಿ ಕಣ್ಣಿಟ್ಟು ಮಾತನಾಡುತ್ತಾರೆ. ಅವರು ಬಾಯಿ ತೆರೆಯುವ ಮೊದಲೇ ಅವರ ಭಾವನೆಗಳನ್ನು ಅರ್ಥ ಮಾಡಿಕೊಳ್ಳುತ್ತಾರೆ. ಆದ್ದರಿಂದ, ಅವರು ಯಾರೊಂದಿಗೂ ಚೆನ್ನಾಗಿ ಹೊಂದಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಅವರು ಪರಿಚಯವಿಲ್ಲದವರನ್ನು ಸಹ ಸುಲಭವಾಗಿ ಮೆಚ್ಚಿಸುತ್ತಾರೆ. ಈ ಸಾಮರ್ಥ್ಯವು ಅವರಿಗೆ ಕೆಲಸ, ವೃತ್ತಿ ಮತ್ತು ವ್ಯವಹಾರದಲ್ಲಿ ಬಹಳ ಸಹಾಯ ಮಾಡುತ್ತದೆ.
- ಇತರರೊಂದಿಗೆ ದಯೆ ತೋರುವ ಅನೇಕ ಜನರು ತಮ್ಮ ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸುತ್ತಾರೆ. ಅವರು ತಮ್ಮನ್ನು ಚೆನ್ನಾಗಿ ನೋಡಿಕೊಳ್ಳುವುದರ ಜೊತೆಗೆ ಇತರರನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಅವರು ಆರೋಗ್ಯಕರ ಆಹಾರ, ಒಳ್ಳೆಯ ನಿದ್ರೆ ಮತ್ತು ಕಷ್ಟಪಟ್ಟು ಕೆಲಸ ಮಾಡುವ ಮೂಲಕ ತಮ್ಮ ದೇಹವನ್ನು ಉತ್ತಮ ಸ್ಥಿತಿಯಲ್ಲಿಟ್ಟುಕೊಳ್ಳುತ್ತಾರೆ. ದಯಾಳು ಜನರು ಎಲ್ಲರನ್ನೂ, "ಈ ಲೋಕವು ಒಳ್ಳೆಯ ಜನರಿಂದ ತುಂಬಿದೆ" ಎಂದು ಯೋಚಿಸುವಂತೆ ಮಾಡುತ್ತಾರೆ. ಅವರು ತಮಗೆ ಪರಿಚಯವಿಲ್ಲದ ಜನರಿಗೂ ಬದುಕಿನಲ್ಲಿ ಭರವಸೆ ನೀಡುತ್ತಾರೆ.

# ಕರುಣೆಯಿಂದ ನೀಡಿರಿ!



ಉಡುಗೊರೆ ಎಂಬುದು ನೀವು ನಿಮಗೋ ಅಥವಾ ಇತರರಿಗೋ ನಿಜವಾದ ಕಾಳಜಿ ಮತ್ತು ದಯೆಯಿಂದ ನೀಡುವುದೇ ಆಗಿದೆ. ಅದು ಭೌತಿಕ ವಸ್ತುವಾಗಿರಬಹುದು ಅಥವಾ ಹಣವಾಗಿರಬಹುದು, ಮಾರ್ಗದರ್ಶನವಾಗಿರಬಹುದು ಅಥವಾ ಬೇರೆ ಯಾವುದಾದರೂ ರೀತಿಯ ಸಹಾಯವಾಗಿರಬಹುದು.

ದಾನ ಮಾಡುವುದರ ಬಗ್ಗೆ ಯೋಚಿಸಬೇಕಾದ ಒಂದು ದೊಡ್ಡ ವಿಷಯವೇನೆಂದರೆ, ನಿಮ್ಮ ಸ್ವಂತ ಹಿತಾಸಕ್ತಿಗಳನ್ನು ಬದಿಗಿಟ್ಟು ಇತರರ ಹಿತಾಸಕ್ತಿಗಳನ್ನು ಮುಖ್ಯವಾಗಿ ಪರಿಗಣಿಸುವುದು! ನೀವು ಬಸ್ ಸವಾರಿ ಮಾಡುವಾಗ ವಯಸ್ಸಾದ ವ್ಯಕ್ತಿ ಅಥವಾ ಗರ್ಭಿಣಿ ಮಹಿಳೆಗೆ ಎದ್ದು ನಿಂತು ನಿಮ್ಮ ಆಸನವನ್ನು ನೀಡಿದರೆ, ನಿಂತುಕೊಳ್ಳುವ ಅನಾನುಕೂಲತೆಯನ್ನು ಸಹಿಸಿಕೊಳ್ಳುವ ಮೂಲಕ ನೀವು ಸಹಾಯ ಮಾಡಲು ಸಿದ್ಧರಿದ್ದೀರಿ. ನೀವು ಇತರರಿಗೆ ದಾನ ಮಾಡುವಾಗ ದೈನಂದಿನ ಜೀವನದಲ್ಲಿ ಅಂತಹ ಅನೇಕ ಕ್ಷಣಗಳಿವೆ.

ದಾನ ಎಂದರೆ ಇತರರೊಂದಿಗೆ ಹಣ, ಸಮಯ ಅಥವಾ ಶ್ರಮವನ್ನು ಹಂಚಿಕೊಳ್ಳಲು ಸಿದ್ಧರಿರುವ ವ್ಯಕ್ತಿಯ ಮನಸ್ಸಿನಲ್ಲಿ ಉದ್ಭವಿಸುವ ಭಾವನೆ. ಈ ರೀತಿ ಇತರರಿಗೆ ಸಹಾಯ ಮಾಡಿದಾಗ, ಒಬ್ಬರ ಮನಸ್ಸು ಉನ್ನತವಾಗುತ್ತದೆ. ಇತರರೊಂದಿಗೆ ಸೇರಿ ಸೇವೆ ಮಾಡಿದಾಗ ಸಮುದಾಯದ ಭಾವನೆ ಹುಟ್ಟುತ್ತದೆ. ಅನೇಕ ಹೊಸ ಸ್ನೇಹಿತರು ರೂಪುಗೊಳ್ಳುತ್ತಾರೆ. ಒಂಟಿತನದಿಂದ ಬಳಲುತ್ತಿರುವ ಜನರು ಅಂತಹ ಸೇವೆಗಳನ್ನು ಮಾಡಿದಾಗ ಇತರರಿಗೆ ಹತ್ತಿರವಾಗುತ್ತಾರೆ. ತಮ್ಮ ಜೀವನಕ್ಕೆ ಒಂದು ಅರ್ಥವಿದೆ ಎಂದು ಅವರು ಭಾವಿಸುತ್ತಾರೆ.

ಇತರರಿಗೆ ನೀಡುವ ಕ್ಷಣಗಳಲ್ಲಿ, ನೀವು ಎಲ್ಲದರ ಬಗ್ಗೆಯೂ ವಿಭಿನ್ನ ದೃಷ್ಟಿಕೋನವನ್ನು ಪಡೆಯುತ್ತೀರಿ. ಐದು ವರ್ಷಗಳಿಂದ ಸವೆದು ಹೋಗಿದ್ದ ತನ್ನ ಐಷಾರಾಮಿ ಕಾರನ್ನು ಮಾರಿಬಿಟ್ಟು, ಒಂದು ಹೊಸ ಕಾರನ್ನು ಕೊಳ್ಳಬೇಕೆಂದು ಒಬ್ಬ ವ್ಯಕ್ತಿ ತುಂಬಾ ದಿನಗಳಿಂದ ಬಯಸುತ್ತಿದ್ದ. ಅವನು ಅದನ್ನು ತನ್ನ ಮನೆಯ ಬಳಿ ತಳ್ಳುಗಾಡಿಯ ಮೇಲೆ ಬಟ್ಟೆಗಳನ್ನು ಇಸ್ತ್ರಿ ಮಾಡುತ್ತಿದ್ದ ಒಬ್ಬ ವ್ಯಕ್ತಿ ಹಳೆಯ ಸೈಕಲ್ ಕೇಳಿದ್ದರಿಂದ ಅದನ್ನು ಅವನಿಗೆ ನೀಡಿದ. ಆ ಸೈಕಲ್ ತನಗೆ ಹೇಗೆ ಸಹಾಯಕವಾಗಿದೆ ಎಂದು ಆ ವ್ಯಕ್ತಿ ಹೆಮ್ಮೆಪಡುವುದನ್ನು ಕೇಳಿದಾಗ, ಆ ಶ್ರೀಮಂತ ವ್ಯಕ್ತಿ ತನ್ನ ಬಳಿ ಇರುವ ಕಾರು ಎಷ್ಟು ಅಮೂಲ್ಯವಾದುದೆಂದು ಭಾವಿಸಿದನು.

ನೀವು ವ್ಯವಹಾರ, ಕೆಲಸ ಅಥವಾ ವೃತ್ತಿಯಲ್ಲಿ ಏನಾದರೂ ಉತ್ತಮ ಸಾಧನೆ ಮಾಡಿದಾಗ, ನಿಮಗೆ ಅಪಾರ ತೃಪ್ತಿ ಸಿಗುತ್ತದೆ. ನೀವು ಯಾರಿಗಾದರೂ ಉಡುಗೊರೆ ನೀಡಿದಾಗಲೂ ಇದೇ ರೀತಿಯ ತೃಪ್ತಿ ಮತ್ತು ಸಂತೋಷ ಸಿಗುತ್ತದೆ. ಆ ಸಮಯದಲ್ಲಿ ಸ್ವಾರ್ಥವನ್ನು ಪಕ್ಕಕ್ಕೆ ತಳ್ಳಲಾಗುತ್ತದೆ ಮತ್ತು ಇತರರನ್ನು ದಯೆಯಿಂದ ನೋಡುವ ಪ್ರಬುದ್ಧತೆಯನ್ನು ನೀವು ಬೆಳೆಸಿಕೊಳ್ಳುತ್ತೀರಿ.

ಕುಟುಂಬ ಸದಸ್ಯರಿಗೆ ಮನೆಕೆಲಸಗಳಲ್ಲಿ ಸಹಾಯ ಮಾಡುವುದು, ತಮ್ಮ ಸುತ್ತಮುತ್ತಲಿನವರಿಗೆ ಅವರ ದೈನಂದಿನ ಜೀವನದಲ್ಲಿ ಸಹಾಯ ಮಾಡುವುದು, ಸಂಬಂಧಿಕರು ಮತ್ತು ಸ್ನೇಹಿತರಿಗೆ ಅಗತ್ಯವಿರುವಾಗ ಅವರೊಂದಿಗೆ ಇರುವುದು, ಕೆಲಸದಲ್ಲಿ ಸಹೋದ್ಯೋಗಿಗಳಿಗೆ ಸಹಾಯ ಮಾಡುವುದು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಅಪರಿಚಿತರೊಂದಿಗೆ ದಯೆಯಿಂದ ವರ್ತಿಸುವುದು ಇವೆಲ್ಲವೂ ಈ ಜಗತ್ತಿನಲ್ಲಿ ಮಾದರಿ ವ್ಯಕ್ತಿತ್ವಗಳಾಗಿರುತ್ತವೆ. ಇಂತಹವರು ಇತರರ ಜೀವನದಲ್ಲಿ ದೊಡ್ಡ ಬದಲಾವಣೆಯನ್ನು ತರುತ್ತಾರೆ.

ಸಹಾಯ ಮಾಡುವಾಗ ಗಮನಿಸಬೇಕಾದ ಮುಖ್ಯವಾದ ವಿಷಯವೆಂದರೆ ನಿಮ್ಮ ಸಾಮರ್ಥ್ಯಕ್ಕೆ ಮೀರಿದ ಯಾವುದಕ್ಕೂ ಭರವಸೆ ನೀಡಬಾರದು. ಅದು ನಿಮ್ಮನ್ನು ಬಿಕ್ಕಟ್ಟಿಗೆ ಸಿಲುಕಿಸುತ್ತದೆ ಮತ್ತು ನಿಮ್ಮ ಮನಸ್ಸಿನ ಶಾಂತಿಯನ್ನು ಕಳೆದುಕೊಳ್ಳುವಂತೆ ಮಾಡುತ್ತದೆ. ಆದ್ದರಿಂದ, 'ಏನೂ ಇಲ್ಲದವರಿಗೆ ನಾವು ನಮ್ಮಿಂದ ಕೈಲಾದಷ್ಟು ಸಹಾಯ ಮಾಡುತ್ತೇವೆ' ಎಂಬ ಮಂತ್ರವನ್ನು ನೆನಪಿಡಿ ಮತ್ತು ದಾನ ಮಾಡಿ.



Owned, Published by K.R. NAGARAJAN, Published from 10, Sengunthapuram Mangalam Road, TIRUPUR - 641 604 & Printed by B. ASHOK KUMAR at RATHNA OFFSET PRINTERS, 40, Peters Road, Royapettah, Chennai - 600 014. Editor : T.J. GNANAVEL

RAMRAJ

# VESTS

## BRIEFS • TRUNKS

*Inners for Winners!*



Bilupu Monthly - Postal Registration No. TN/TRU/30/2024-26. Registered with the Registrar of Newspapers for India under No. TNKAN/2017/74564. Day of Publishing: 01-09-2026 Posted at Tirupur BPC on 5th of every month.

